ಸಂಪುಟ 1 ಸಂಚಿಕೆ 1
ಜೂನ್ 03, 2007
ಬೆಲೆ ರೂ. 5.00
ಕನ್ನಡ ವಾರಪತ್ರಿಕೆ




ಗ್ರಾಮ ವಾಸ್ತವ್ಯ CM ಸ್ಟಂಟ್

ತಿಮಿಂಗಿಲಗಳ ಬಾಯಿಗೆ ಸರ್ಕಾರದ ಭೂಮಿ



ಉಳ್ಳಾಲ ಚುನಾವಣೆ: ಪರ್ಯಾಯಕ್ಕಾಗಿ ಹೋರಾಟ




ಪೇಜ್ 9

ನಮಗೆಂಥ ರಾಷ್ಟ್ರಪತಿ ಬೇಕು ?



ಪೇಜ್ 14

ಉತ್ತರ ಪ್ರದೇಶ : ಏನು ಸಂದೇಶ ?



ಪೇಜ್ 16


ಬೀಳೋ ಹಣಕ್ಕೆ ಲೆಕ್ಕ ಇಲ್ಲ!

'ಜನಶಕ್ತಿ' ಜನಪರ ಜೀವಂತಿಕೆಯಿಂದ ಪುಟಿಯಲಿ

60 ವರ್ಷಗಳ ಹಿಂದಿನ ಸಂಗತಿ ನೆನಪಾಯಿತು

- ಚೆನ್ನವೀರ ಕಣವಿ

ಇದೇ ಮೇ 27ರಂದು 'ಜನಶಕ್ತಿ' ಕನ್ನಡ ವಾರಪತ್ರಿಕೆಯನ್ನು ಹೊರತರಲಾಗುತ್ತೆಂದು ತಿಳಿದಾಗ ಅರವತ್ತು ವರ್ಷಗಳ ಹಿಂದಿನ ಸಂಗತಿ ನೆನಪಾಯಿತು. 1947 ಮೇ 1 ರಂದು ಕಳಕುಂದ ಶಿವರಾಯರು(ನಿರಂಜನರು) ಹುಬ್ಬಳ್ಳಿಯಲ್ಲಿ 'ಜನಶಕ್ತಿ' ವಾರಪತ್ರಿಕೆಯ ಪ್ರಕಟಣೆ ಪ್ರಾರಂಭಿಸಿದಾಗ ನಾನು ಕಾಲೇಜು ವಿದ್ಯಾರ್ಥಿಯಾಗಿದ್ದೆ. ನನ್ನ ಆತ್ಮೀಯ ಸ್ನೇಹಿತರಾಗಿದ್ದ ಕವಿ ಶಿವೇಶ್ವರ ದೊಡ್ಡಮನಿ ಉಪಸಂಪಾದಕರಾಗಿ, ಪ್ರಕಾಶಕರಾಗಿ ಪತ್ರಿಕೆಗೆ ಬೆಂಬಲವಾಗಿ ನಿಂತರು. ಎರಡು ವರ್ಷಗಳ ಪರಿಮಿತ ಅವಧಿಯಲ್ಲಿಯೇ ಅದು ಈ ಭಾಗದ ಲೇಖಕರ ಹಾಗೂ ಜನತೆಯ ವಿಶ್ವಾಸಕ್ಕೆ ಪಾತ್ರವಾಯಿತು. ಸಮಾಜದ ಮತ್ತು ನಾಡಿನ ಒಟ್ಟು ಪರಿಸ್ಥಿತಿಯನ್ನು ಬದಲಾಯಿಸಬೇಕೆಂಬ ಅದರ ತುಡಿತ ಪ್ರತಿ ಸಂಚಿಕೆಯಲ್ಲಿಯೂ ಒಡೆದು ಕಾಣುತ್ತಿತ್ತು.



ಉತ್ತರ ಕರ್ನಾಟಕದಲ್ಲಿ ಆ ಹೊತ್ತಿಗೆ ಆರಂಭವಾಗಿದ್ದ ರೈತ ಚಳುವಳಿ, ಕೂಲಿಕಾರರ ಸಂಘಟನೆಗಳು ಮತ್ತು ಬಹುಕಾಲದಿಂದ ನಡೆದು ಬಂದಿದ್ದ ಕರ್ನಾಟಕದ ಏಕೀಕರಣ ಚಳುವಳಿಗಳ ಧ್ವನಿಯಾಗಲು ಪತ್ರಿಕೆ ಪ್ರಯತ್ನಿಸಿತು. ನಿರಂಜನರನ್ನೊಳಗೊಂಡು ಸಂಪಾದಕ ವರ್ಗದವರೆಲ್ಲ ಕಛೇರಿಯಲ್ಲಿ ಬಿಡುವಿಲ್ಲದ ಕೆಲಸ ಮಾಡುತ್ತಿದ್ದ ರೀತಿ ನನ್ನನ್ನು ಅಚ್ಚರಿಗೊಳಿಸಿತ್ತು. ಸ್ವತಂತ್ರ ಭಾರತದಲ್ಲಿ 'ಜನಶಕ್ತಿ' ಯ ಸಂಪಾದಕೀಯ ಮಂಡಳಿ ಅಸ್ಥಿರವಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿಷೇಧ ಹೇರಿದಾಗಲೂ ಪತ್ರಿಕೆಯನ್ನು ಗುಟ್ಟಾಗಿ ಹೊರತರುವ ಪ್ರಯತ್ನ ನಡೆಸಲಾಯಿತು.

ಕಳೆದ ಐದಾರು ದಶಕಗಳಲ್ಲಿ ದೇಶದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದರೂ ವಿವಿಧ ರೀತಿಯ ಆಕ್ರಮಣಗಳಿಂದ ಜನತೆ ಕಂಗೆಡುವಂತಾಗಿದೆ. ಅವುಗಳನ್ನು ಎದುರಿಸುವ ಶಕ್ತಿ ಸಂಚಯವಾಗಿ, ಶೋಷಿತ ಜನಸಮೂಹದ ಬಂಧುವಾಗಿ ಹೊಸ ಕಾಲದ ಸನ್ನಿವೇಶದಲ್ಲಿ ಐಕ್ಯರಂಗ ಪತ್ರಿಕೆ 'ಜನಶಕ್ತಿ ಕನ್ನಡ ವಾರ ಪತ್ರಿಕೆ' ಯಾಗಿ ರೂಪಾಂತರಗೊಳ್ಳುತ್ತಿರುವುದು ಸಮ ಯೋಚಿತವಾಗಿದೆ. ಪತ್ರಿಕೆಯ ಪ್ರಾಯೋಗಿಕ ಸಂಚಿಕೆಯ ಲೇಖನಗಳನ್ನು ನೋಡಿದಾಗ ಅಂಥ ಭರವಸೆ ಓದುಗರಲ್ಲಿ ಮೂಡದೇ ಇರಲಾರದು.

ಪತ್ರಿಕೆಗೆ ಎಲ್ಲ ಬಗೆಯ ಯಶಸ್ಸು ದೊರೆಯಲೆಂದು ಹೃತ್ಪೂರ್ವಕ ಹಾರೈ ಸುತ್ತೇನೆ.

ಧಾರವಾಡ
22.05.07

★ ★ ★

ಜನಪರ ಜೀವಂತಿಕೆಯಿಂದ ಪುಟಿಯಲಿ

- ಬರಗೂರು ರಾಮಚಂದ್ರಪ್ಪ



'ಜನಶಕ್ತಿ' ಪತ್ರಿಕೆಯ ಬಿಡುಗಡೆಯು ಈ ದೇಶದ ಬಡಜನತೆಯ ಬಿಡುಗಡೆಗೆ ಬದ್ಧವಾದ ಒಂದು ಮುನ್ನುಡಿ ಎಂದು ನಾನು ಭಾವಿಸುತ್ತೇನೆ. ನಮ್ಮ ನಾಡನ್ನು ಒಳಗೊಂಡಂತೆ ಇಂತಹ ಮುನ್ನುಡಿಗಳನ್ನು ಬರೆದ ಕ್ರಿಯಾಶೀಲ ಚೇತನಗಳೂ ಸಂಕಲ್ಪ ಸಿದ್ಧ ಸಮುದಾಯಗಳೂ ಅನೇಕ. ಈ ಅನೇಕಗಳ ಸಾಲಿಗೆ 'ಜನಶಕ್ತಿ' ಯು ಇನ್ನೊಂದು ಸಾರ್ಥಕ ಸೇರ್ಪಡೆ. ಮುಕ್ತ ಆರ್ಥಿಕ ನೀತಿಯ ಹೆಸರಲ್ಲಿ ಸಮಾಜ ಬದಲಾವಣೆಯ ನೈಜ ಆಶಯಗಳಿಗೆ ಹಿನ್ನಡೆಯುಂಟು ಮಾಡಿರುವ ಶಕ್ತಿಗಳನ್ನು ಎದುರಿಸಲು ಇಂದು ಬೇಕಾದ್ದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೀವಂತಿಕೆ; ನಿರಂತರ ಕ್ರಿಯಾಶೀಲತೆ, 'ಜನಶಕ್ತಿ' ಪತ್ರಿಕೆಯ ಪುಟ ಪುಟವೂ ಜನಪರ ಜೀವಂತಿಕೆಯಿಂದ ಪುಟಿಯುತ್ತದೆಯೆಂಬ ನಂಬಿಕೆ ನನ್ನದು. ಈ ಪತ್ರಿಕೆ ಬೆಳೆಯಲಿ; ನಮ್ಮನ್ನೂ ಬೆಳೆಸಲಿ.

★ ★ ★

"ಪತ್ರಿಕೆಯು ಬಿಡುಗಡೆಯಾಗುತ್ತಿರುವ ವಿಷಯ ಕೇಳಿ ಸಂತೋಷವಾಯಿತು. ನಾಡಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಆಗುಹೋಗುಗಳಿಗೆ ಸ್ಪಂದಿಸುವ ಇಂತಹ ಒಂದು ವಾರಪತ್ರಿಕೆಯು ನಮ್ಮ ಮಾಧ್ಯಮಲೋಕದ ವಿಶಿಷ್ಟ ಧ್ವನಿಯಾಗಿ ಈ ಪತ್ರಿಕೆಯು ಹೊರಹೊಮ್ಮಬೇಕೆಂದು ಆಶಿಸುತ್ತೇನೆ.. ಸಮಾರಂಭವು ಯಶಸ್ವಿಯಾಗಲಿ....


ಡಾ: ಸಿ.ಎನ್.ಮಂಜುನಾಥ್
ಪ್ರಾಧ್ಯಾಪಕರು ಮತ್ತು ಹೃದ್ರೋಗಶಾಸ್ತ್ರದ ಮುಖ್ಯಸ್ಥರು, ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರ,

ಮನದಾಳದ ಅಭಿನಂದನೆಗಳು

- ನಿಸಾರ್ ಅಹಮದ್

'ಜನಶಕ್ತಿ' ಕನ್ನಡ ವಾರಪತ್ರಿಕೆ, ಪುನರ್ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ನೀವು ಕೊಟ್ಟ ಅದರ ಪ್ರಾಯೋಗಿಕ ಸಂಚಿಕೆಯನ್ನು ಅವಗಾಹಿಸಿದೆ. ಸಮಾಜದಲ್ಲಿನ ಸೌಲಭ್ಯವಂಚಿತ ದೀನ ದಲಿತರ ಬಗೆಗಿನ ನಿಮ್ಮ ಕಾಳಜಿ ಮೆಚ್ಚತಕ್ಕದ್ದು. ಸಮಾನತೆ, ಸರ್ವರ ಏಳಿಗೆ ಮತ್ತು ದಮನಿತರ ಸಂಘಟನೆ ಅನಿವಾರ್ಯವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಹಾಗೂ ರಾಷ್ಟ್ರದ ಐಕ್ಯಮತ್ಯವನ್ನು ಸ್ಥಾಪಿಸಬೇಕಾದ ಇಂದಿನ ಕಾಲದಲ್ಲಿ 'ಜನಶಕ್ತಿ' ತನ್ನ ಲೇಖನಗಳ ಮೂಲಕ ಪ್ರಮುಖ ಪಾತ್ರ ವಹಿಸುವುದೆಂಬ ನಂಬಿಕೆ ನನಗಿದೆ.

ಜಾತಿ, ಮತ, ಧರ್ಮ, ವರ್ಗ ಇತ್ಯಾದಿಗಳ ವೈಪರೀತ್ಯದಿಂದ ಉಂಟಾಗುತ್ತಿರುವ ರಾಷ್ಟ್ರ ವಿಭಜಕ ಪ್ರವೃತ್ತಿಯನ್ನು ತಗ್ಗಿಸುವಲ್ಲಿ ನಿಮ್ಮ ಪತ್ರಿಕೆ ಪಣತೊಟ್ಟು ಶ್ರಮಿಸಲೆಂದು ಹಾರೈಸುತ್ತೇನೆ.




ಹಲವು ದಶಕಗಳ ಹಿಂದೆ ಈ ಪತ್ರಿಕೆ ಬಳೇ ಪೇಟೆ ಮತ್ತು ಸುಲ್ತಾನ್‌ಪೇಟೆಯ ಕೂಡು ರಸ್ತೆಯ ಮಹಡಿಯ ಮೇಲಿದ್ದ ನೆನಪು ಇನ್ನೂ ಹಸಿರಾಗಿದೆ. ನಿರಂಜನ, ತ್‌ದ್‌ನ್‌ತ್‌ರ್ ಸಿ.ಆರ್.ಕೆ(ಸಿ.ಆರ್.ಕೃಷ್ಣರಾವ್) 'ಜನಶಕ್ತಿ' ಸಾರಥ್ಯವನ್ನು ವಹಿಸಿ ಜನರಲ್ಲಿ ಎಚ್ಚರ ಮೂಡಿಸುವುದಕ್ಕೆ ಅತೀವ ಪರಿಶ್ರಮಪಟ್ಟಿದ್ದರು. ಆ ಕೆಲಸವನ್ನು ನೀವು ಮುಂದುವರಿಸುವಿರೆಂಬ ಭರವಸೆ ನನಗಿದೆ.

ನಿಮ್ಮ ಈ ಸಮಾಜೋಪಯೋಗಿ ಪ್ರಯತ್ನಕ್ಕೆ ನನ್ನ ಮನದಾಳದ ಅಭಿನಂದನೆಗಳು ನಿಮಗೆ ಉತ್ತರೋತ್ತರ ಯಶಸ್ಸು ದೊರಕಲಿ.

★ ★ ★

ಸಂತೋಷವಾಯಿತು

- ಕೋ. ಚನ್ನಬಸಪ್ಪ



'ಜನಶಕ್ತಿ' ಮತ್ತೆ ತಲೆಯೆತ್ತುವುದೆಂಬ ಸುದ್ದಿ ತಿಳಿಸುವ ನಿಮ್ಮ ಪತ್ರ ತಲುಪಿದಾಗ ಮೊದಲು ಆಶ್ಚರ್ಯವಾಯಿತು. ತರುವಾಯ ಸಂತೋಷವಾಯಿತು. ಅಂತೂ ಜನಶಕ್ತಿ ಇನ್ನೂ ಬದುಕಿದೆ, ಸಮಯ ಬಂದಾಗ ಅದು ಹೆಡೆ ಬಿಚ್ಚಿ ಅಪ್ಪಳಿಸುತ್ತದೆ ಎಂಬುದರ ಸಾಂಕೇತಿಕ ಲಕ್ಷಣ ಎಂದು ಭಾವಿಸುತ್ತೇನೆ.

ಜನಶಕ್ತಿ ಯಾವ ಉದ್ದೇಶ ಸಾಧನೆಗಾಗಿ ಜನ್ಮ ತಾಳಿತ್ತೋ ಆ ಉದ್ದೇಶ ಇನ್ನೂ ಸಿದ್ಧಿಯಾಗಿಲ್ಲ ಎಂಬ ಸತ್ಯ ಎದ್ದು ಕಾಣುತ್ತದೆ. ಇಂದಿನ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ಸರಿಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಬಹುಮಟ್ಟಿಗೆ ಕುಂಠಿತವಾಗಿದೆ. ನಮ್ಮ ಸಂವಿಧಾನದ ಮೂಲವಾಕ್ಯ ಕೋಮು ಸೌಹಾರ್ದತೆ, ಜಾತ್ಯತೀತತೆಗೂ ಅಪಾರ ಅಪಾಯ ಒದಗಿರುವ ಈ ಸನ್ನಿವೇಶದಲ್ಲಿ 'ಜನಶಕ್ತಿ'ಯ ಪಾತ್ರ ಅಗತ್ಯ. ಆ ಅಗತ್ಯವನ್ನು ಪೂರೈಸುವಲ್ಲಿ ನೀವು ಧನುರ್ಧಾರಿಗಳಾಗಲಿ ಎಂದು ಹಾರೈಸುತ್ತೇನೆ.

ಈ ಸಮಯದಲ್ಲಿ ಜನಶಕ್ತಿಯ ಸಂಪಾದಕರಾಗಿದ್ದ ನನ್ನ ಆತ್ಮೀಯ ಗೆಳೆಯ ದಿ ನಿರಂಜನರನ್ನು ಸ್ಮರಿಸದಿರಲಾರೆ. ಪತ್ರಿಕೆ ಸಂಪಾದಕರ, ಪ್ರಕಾಶಕರ, ಮಾಲಕರ ತುತ್ತೂರಿ ಆಗದೆ ಜನಶಕ್ತಿಯ ಬಾಯಿ ಆಗಲಿ ಎಂದು ಹಾರೈಸುತ್ತೇನೆ.

★ ★ ★

ಸ್ವಾಗತಾರ್ಹ ವಿಷಯ


ಪ್ರಗತಿಪರ ಶಕ್ತಿಗಳ ಸಂಕೇತವಾಗಿದ್ದ ಡಾ: ನಿರಂಜನರು ಒಂದು ಕಾಲಕ್ಕೆ ಸಂಪಾದಕರಾಗಿದ್ದ 'ಜನಶಕ್ತಿ' ಪತ್ರಿಕೆ ಈಗ ಮತ್ತೆ ಮರುಹುಟ್ಟು ಪಡೆದು ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುವ ವೇದಿಕೆಯಾಗಲಿರುವುದು ಸ್ವಾಗತಾರ್ಹ ವಿಷಯ.



ನಿಮ್ಮ ಆಶಯದಂತೆ, 'ಜನಶಕ್ತಿ' ದುಡಿವ ಜನರ ಪ್ರಾಣಮಿತ್ರವಾಗಲಿ, ಕನ್ನಡ ನಾಡಿನ ಸಾಂಸ್ಕೃತಿಕ ಸಾಹಿತ್ಯಕ ಲೋಕಕ್ಕೂ ಕನ್ನಡಿಯಾಗಲಿ. ಪ್ರತಿಕೆಗೆ ನನ್ನ ಸಂಪೂರ್ಣ ಸಹಕಾರವಿದೆ.

ಚಂಪಾ(ಚಂದ್ರಶೇಖರ ಪಾಟೀಲ)
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು.

ನಿಲುವು ಸ್ಪಷ್ಟವಿರಲಿ....



ಮೇ 27, 2007ರಂದು ಜನಶಕ್ತಿ ವಾರಪತ್ರಿಕೆಯನ್ನು ಆರಂಭಿಸುತ್ತಿರುವುದನ್ನು ಕೇಳಿ ನನಗೆ ಸಂತೋಷವಾಯಿತು.


ಕರ್ನಾಟಕದ ಇಂದಿನ ದಿನಗಳಲ್ಲಿ, ರಾಜ್ಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬೆಳವಣಿಗೆಗಳ ಬಗೆಗೆ ಗಮನ ಸೆಳೆಯುವಂತಹ ಮತ್ತು ಜಾತ್ಯಾತೀತತೆ ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರವಾದ ದೃಷ್ಟಿಯನ್ನು ಬಿಂಬಿಸುವ ಪತ್ರಿಕೆಯೊಂದು ಅಗತ್ಯವಾಗಿದೆ.

'ಜನಶಕ್ತಿ'ಯು ಎಡ ಶಕ್ತಿಗಳ ಮತ್ತು ಕಾರ್ಮಿಕ ವರ್ಗದ ಪರವಾದ ಸ್ಪಷ್ಟ ನಿಲುವುಗಳನ್ನು ಬಿಂಬಿಸಬೇಕಿದೆ. ವಾರಪತ್ರಿಕೆಯು ಈ ಪಾತ್ರ ನಿರ್ವಹಿಸುವಲ್ಲಿ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

ಪ್ರಕಾಶ್ ಕಾರಟ್
ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ,

★ ★ ★

ಬೆಳಕು ಚೆಲ್ಲಲಿ...



ಜನಶಕ್ತಿ ಕನ್ನಡ ವಾರ ಪತ್ರಿಕೆಯು 27.05.2007ರಂದು ಬಿಡುಗಡೆ ಯಾಗುತ್ತಿರುವುದಕ್ಕೆ ನನಗೆ ಸಂತೋಷ ವಾಗಿದೆ.

ಈ ಕನ್ನಡ ವಾರಪತ್ರಿಕೆಯು, ದುಡಿಯುವ ಜನರ, ದಲಿತ ಮಹಿಳೆಯರ ಹಿತಾಸಕ್ತಿಗೆ ಸಂಬಂಧಪಟ್ಟ ಪ್ರಶ್ನೆಗಳ ಕುರಿತು ಸೂಕ್ತ ಬೆಳಕನ್ನು ಚೆಲ್ಲುತ್ತದೆ ಎಂಬ ಭರವಸೆ ನನಗಿದೆ.

ನಮ್ಮೆಲ್ಲರ ಸಮರ್ಪಿತ ಪ್ರಯತ್ನಗಳಿಂದ ಭಯೋತ್ಪಾದಕ, ಛಿದ್ರಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಎದುರಿಸಿ ಸೋಲಿಸಬೇಕು. ನಮ್ಮ ದೇಶದ ಜಾತ್ಯಾತೀತ, ಪ್ರಜಾಸತ್ತಾತ್ಮಕ ರಾಜಕೀಯ ಚಿಂತನೆಯನ್ನು ಬಲಪಡಿಸಲು ನಾವು ಸಾಮೂಹಿಕವಾಗಿ ದುಡಿಯಬೇಕು.

ಈ ಹೊಸ ವಾರಪತ್ರಿಕೆಗೆ ನನ್ನ ಶುಭಾಶಯಗಳು

ಬುದ್ಧದೇಬ್ ಭಟ್ಟಾಚಾರ್ಯ
ಮುಖ್ಯಮಂತ್ರಿ, ಪ.ಬಂಗಾಳ

★ ★ ★

ನೆನಪು

ಸಾಮಾಜಿಕ ಪರಿವರ್ತನೆಯಲ್ಲಿ ಬಲ್ಲವರ ಪಾತ್ರ



ಆಗುತ್ತಲಿರುವ ಅಥವಾ ಆಗಬೇಕಾದ ಸಾಮಾಜಿಕ ಬದಲಾವಣೆಗಳಲ್ಲಿ ಬಲ್ಲವರು ವಹಿಸಬಹುದಾದ ಅಥವಾ ವಹಿಸಬೇಕಾದ ಪಾತ್ರ ಯಾವುದು?

ಸಮಾಜ ನಿಂತ ನೀರೆ? ಹರಿಯುವ ನದಿಯೇ? ಚಲನೆಯ ಜುಳು ಜುಳು ಸಪ್ಪಳವೂ ಇದೆ. ಕಟ್ಟಿಕೊಂಡ ನೀರಿನ ಗಬ್ಬುವಾಸನೆಯೂ ಇದೆ. ಈ ವಿಪರ್ಯಾಸಕ್ಕೆ ಏನು ಕಾರಣ.

ಮೂಲಭೂತವಾಗಿ ಮಾನವನ ಇರುವಿಕೆಯನ್ನು, ಅವನು ನಡೆಯಬೇಕಾದ ದಾರಿಯನ್ನು ನಿರ್ಧರಿಸುವುದು ಆಡಳಿತವರ್ಗ.

ಬಲಿಷ್ಠವಾದ, ಒಗ್ಗಟ್ಟಿನ, ಜಾತ್ಯಾತೀತವಾದ, ಸಮಾಜವಾದಿ ಹಾಗೂ ಪ್ರಜಾಪ್ರಭುತ್ವವಾದಿಯಾದ ರಾಷ್ಟ್ರದ ನಿರ್ಮಾಣ. ಜನತೆಗೆ ಉತ್ತಮ ಜೀವನ ಮಟ್ಟವನ್ನು ನೀಡುವುದಕ್ಕಾಗಿ ಬೆಳೆಯುತ್ತಿರುವ ಹಾಗೂ ಸಮೃದ್ಧವಾದ ಅರ್ಥವ್ಯವಸ್ಥೆಯ ರಚನೆ. ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ನೂತನ ಸಮಾಜದ ಸ್ಥಾಪನೆ.

ಉದಾತ್ತ ಧ್ಯೇಯ; ಉನ್ನತ ಆದರ್ಶ!

- ನಿರಂಜನ

ಭಾಷಾ ನೀತಿ ಗೊಂದಲ ಕೊನೆಗೊಳ್ಳಲಿ

ಕರ್ನಾಟಕ ಸರ್ಕಾರದ ಭಾಷಾ ಸಂಘರ್ಷ ನೀತಿಯನ್ನು ಉಲ್ಲಂಘಿಸಿರುವ ಖಾಸಗಿ ಶಾಲೆಗಳು ಮತ್ತು ಸರ್ಕಾರದ ನಡುವಿನ ಈಗಲೂ ಇತ್ಯರ್ಥವಾಗದೇ ಪೋಷಕರು, ಹಾಗೂ ಮಕ್ಕಳಲ್ಲಿ ತೀವ್ರತರವಾದ ಗೊಂದಲ, ಆತಂಕಗಳನ್ನು ಹುಟ್ಟು ಹಾಕಿದೆ. ಸರ್ಕಾರ ಕ್ರಮ ಕೈಗೊಂಡಿರುವ ಶಾಲೆಗಳು ಷರತ್ತಿನ ಮೇಲೆ ಪ್ರವೇಶಾವಕಾಶ ನೀಡಬಹುದೆಂದೂ, 'ವಿವಾದ ನ್ಯಾಯಾಲಯದಲ್ಲಿದೆ'. ಹೈಕೋರ್ಟ್ ನೀಡುವ ತೀರ್ಪಿಗೆ ಬದ್ಧ' ಎಂದು ಫಲಕ ಹಾಕಿ ಪ್ರವೇಶ ಮಾಡಿಕೊಳ್ಳಬಹುದೆಂದು ಕೋರ್ಟ್ ಸೂಚಿಸಿರುವುದು ಮೇ 28ರಂದು ಅಂತಿಮ ತೀರ್ಪು ನೀಡುವುದಾಗಿ ಹೇಳಿದ್ದು ಒಂದು ಸಣ್ಣ ಪರಿಹಾರ.

ಭಾಷಾ ನೀತಿಯನ್ನು ಉಲ್ಲಂಘಿಸಿರುವ ಶಾಲೆಗಳು ದಂಡದ ಮೊತ್ತ ಪಾವತಿ ಮಾಡಿ ಸರ್ಕಾರದ ನೀತಿಯ ಜಾರಿಗೆ ಬದ್ಧವಿರಬೇಕು, ಮತ್ತೆ ಅನುಮತಿ ಪಡೆಯಲೇಬೇಕೆಂದು, ಮೇ 15 ರೊಳಗಾಗಿ ಅರ್ಜಿ ಸಲ್ಲಿಸಿದ, ಸಂಸ್ಥೆಗಳಿಗೆ ಮಾತ್ರ ಅವಕಾಶ ಎಂದು ಶಿಕ್ಷಣ ಸಚಿವ ಹೊರಟ್ಟಿ ಹೇಳಿರುವುದು ಈ ಸಂಘರ್ಷ ಇನ್ನಷ್ಟು ಬಿರುಸು ಪಡೆದುಕೊಂಡಿದೆ.

ಜಾಗತೀಕರಣದ ಪ್ರಕ್ರಿಯೆಯಲ್ಲಿ ಇಂಗ್ಲೀಷ್ ಕಲಿಯದೇ ಇದ್ದರೆ ಜೀವನವೇ ಇಲ್ಲ, ಜೀವವಿಲ್ಲ ಎಂಬಂತಹ ವಾತಾವರಣ ನಿರ್ಮಾಣಗೊಳ್ಳುತ್ತಿರುವುದರ ದುರ್ಲಾಭವನ್ನು ಕೆಲವು ಶಿಕ್ಷಣ ಸಂಸ್ಥೆಗಳು ಪಡೆಯುತ್ತಿವೆ. ನಾಲ್ಕನೆಯ ತರಗತಿವರೆಗೆ ಕನ್ನಡದಲ್ಲೇ ವಿಷಯ ಬೋಧನೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಇಂಗ್ಲೀಷ್ ಮಾಧ್ಯಮದಲ್ಲಿ ಭೋದಿಸುವ ಶಾಲೆಗಳದ್ದು ಅಕ್ರಮ ಎಂಬುದರಲ್ಲಿ ಎರಡು ಮಾತಿಲ್ಲ. ಈ ಹಂತದ ಶಿಕ್ಷಣ ಮಾತೃಭಾಷೆಯಲ್ಲೇ ಕಲಿಯಬೇಕು, ಅದು ಮಗುವಿನ ಮಾನಸಿಕ ಬೌದ್ಧಿಕ ಬೆಳವಣಿಗೆಗೆ ಅಷ್ಟೇ ಅಗತ್ಯವೆಂಬ ಸಮಾಜ ತಜ್ಞರ, ಭಾಷೆ ವಿಜ್ಞಾನಿಗಳ ಅಭಿಪ್ರಾಯ ತುಂಬಾ ಮಹತ್ವದ್ದು. ಈ ಹಿನ್ನೆಲೆಯಲ್ಲಿ ಸರ್ಕಾರದ ನಿರ್ಧಾರ, ಕ್ರಮ ಒಪ್ಪುವಂತಹದ್ದೇ.

ಆದರೆ ಕನ್ನಡದಲ್ಲಿ ಬೋಧಿಸಲಾಗುವುದೆಂದು ಮುಚ್ಚಳಿಕೆ ಬರೆದುಕೊಟ್ಟು ಇಂಗ್ಲೀಷ್ ಮಾಧ್ಯಮ ಶಾಲೆಗಳಾಗಿ ಪರಿವರ್ತನೆಗೊಂಡ ಶಾಲೆಗಳು ನಾಯಿಕೊಡೆಗಳಂತೆ ಎಲ್ಲೆಂದರಲ್ಲಿ ತಲೆಎತ್ತಿ ದುಡ್ಡು ಮಾಡುವ ದಂಧೆಗೆ ಇಳಿದಿರುವುದು ಖಂಡನೀಯ. ಇದು ಹಲವಾರು ವರ್ಷಗಳಿಂದ ನಡೆದುಕೊಂಡೇ ಬಂದಿದೆ. ಸರ್ಕಾರದ ಗಮನಕ್ಕೆ ಇದು ಬಂದಿರಲಿಲ್ಲವೇ? ಇಲ್ಲ ಎಂದು ಸರ್ಕಾರ ಹೇಳಲು ಸಾಧ್ಯವಿಲ್ಲ. ಇಂತಹ ಘಟನೆಗಳು ಕಣ್ಣೆದುರು ನಡೆದಿದ್ದರೂ ಯಾಕೆ ಸುಮ್ಮನೇ ಇದ್ದದ್ದು ಎಂಬ ಪ್ರಶ್ನೆ ಏಳುತ್ತದೆ.

ಸಂಪಾದಕೀಯ...

ಹಣದ ಈ ಬಲದಿಂದಲೇ ಸರ್ಕಾರದ ನೀತಿಗಳನ್ನು ಧಿಕ್ಕರಿಸುವ ಪೋಷಕರನ್ನು ಪೀಡಿಸುವ ಮುಕ್ತಾವಕಾಶ ಪರಿಸ್ಥಿತಿ ಆ ದಂಧೆಗಳಿಗೆ ಇದೆ. ಇದನ್ನು ಮಟ್ಟ ಹಾಕಬೇಕು.

ಈಗ ಉದ್ಭವಿಸಿರುವ ಬಿಕ್ಕಟ್ಟನ್ನು ಈ ಹಿಂದೆಯೇ ಬಗೆಹರಿಸಿಕೊಳ್ಳಬೇಕಿತ್ತು. ಶಾಲೆಗಳ ಪುನರಾರಂಭ ಹತ್ತಿರವೇ ಇರುವಾಗಲೂ ಗೊಂದಲ, ಅನಿಶ್ಚತತೆ ಏರ್ಪಟ್ಟಿದ್ದು ಅನಾರೋಗ್ಯಕರ ಬೆಳವಣಿಗೆ. ಖಾಸಗಿ ಸಂಸ್ಥೆಗಳೂ ಮನಸೊ ಇಚ್ಛೆ ನಡೆಯದೇ ಭಾಷಾ ನೀತಿಯ ಜಾರಿಗೆ ಬದ್ಧವಾಗಬೇಕಿತ್ತು, ಈಗಲೂ ಆಗಬೇಕು. ಇಲ್ಲವಾದಲ್ಲಿ ಅವರ ಕುಣಿತಕ್ಕೆ ಕಠಿಣವಾದ ಹಾಕಬೇಕಾಗುವುದು. ಈ ಹಿನ್ನೆಲೆಯಲ್ಲಿ ಮಕ್ಕಳ ಶೈಕ್ಷಣಿಕ ಭವಿಷ್ಯವನ್ನು ಉಳಿಸುವ ನಿಟ್ಟಿನಲ್ಲಿ ಒಂದು ಸೂಕ್ತವಾದ ನಿರ್ಧಾರ ಹೊರಬರಬೇಕಿದೆ.

ಇದರೊಟ್ಟಿಗೆ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಬೇಕೆಂಬ ಅರ್ಜಿ ನ್ಯಾಯಾಲಯದ ಮುಂದಿದೆ. ಈ ಎರಡೂ ವಿಷಯಗಳ ಬಗೆಗಿನ ನ್ಯಾಯಾಲಯದ ತೀರ್ಪಿಗೆ ಅತ್ಯಂತ ಮಹತ್ವವಿದೆ. ನ್ಯಾಯಾಲಯದಿಂದ ಶೈಕ್ಷಣಿಕ ಹಿತವನ್ನು ಕಾಯುವಂತಹ ತೀರ್ಪನ್ನು ನಿರೀಕ್ಷಿಸಬಹುದೇ?


ಇದೇ ಹೊತ್ತಿನಲ್ಲಿ ಪ್ರಾಥಮಿಕ ಶಿಕ್ಷಣದ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಒಂದು ವಿಷಯವನ್ನಾಗಿ ಕಲಿಸಬೇಕೆಂಬ ಸರ್ಕಾರದ ಆದೇಶವೂ ಜಾರಿಗೆ ಬರಲಿದೆ.

ಶಿಕ್ಷಣ ಉದ್ಯೋಗಗಳಿಂದ ವಂಚಿತ ರಾಗಲು, ಕೀಳರಿಮೆ ಸೃಷ್ಟಿಗೊಳ್ಳಲು ಇಂಗ್ಲೀಷ್ ಭಾಷೆಯ ಕೊರತೆಯೇ ಕಾರಣವೆಂದು ದಲಿತ ಹಾಗೂ ನಿರ್ಲಕ್ಷಿತ ಸಮುದಾಯಗಳು ಭಾವಿಸುತ್ತಿವೆ. ಕೆಲವರಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯಲು ಅವಕಾಶಗಳಿದ್ದು. ತಾರತಮ್ಯ ಉಂಟಾಗುತ್ತಿದೆ ಎಂದೂ ಅನಿಸಿಕೆ ಇದೆ. ಹೀಗಾಗಿ ರಾಜ್ಯದೊಳಗೆ ಕುಗ್ಗುತ್ತಿರುವ ಉದ್ಯೋಗ ಅವಕಾಶಗಳು, ಅಲ್ಪಸ್ವಲ್ಪ ಉದ್ಯೋಗಗಳು ಆಧುನಿಕ ಮಾಹಿತಿ ತಂತ್ರಜ್ಞಾನ, ಜೀವ ತಳಿ ವಿಭಾಗದಂತಹ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಿಗುತ್ತಿರುವಾಗ ಜಾಗತೀಕರಣದ ಸೆಳೆತದಿಂದಾಗಿ ಇಂಗ್ಲೀಷ್ ಭಾಷಾ ಕಲಿಕೆಗೆ ಬೆನ್ನು ಹತ್ತುವಂತೆ ಮಾಡುತ್ತಿದೆ. ಹೀಗಾಗಿ ಭಾಷೆ ಕಲಿತಾ ನೀತಿ ರೂಪಿಸುವಾಗ ದಮನಿತ ಸಮುದಾಯಗಳಿಗೆ ತಾವು ವಂಚಿತವಾಗುತ್ತಿವೆಂಬ ಭಾವನೆಗಳು ಇರದಂತೆ ಕ್ರಮ ವಹಿಸಬೇಕು.

ದಮನಿತ ಸಮುದಾಯಗಳ ಇಂದಿನ ಸ್ಥಿತಿ ಹೋಗಲಾಡಿಸಲು ಇಂಗ್ಲೀಷ್ ಒಂದು ಭಾಷೆಯಾಗಿ ಕಲಿಸುವುದು ಮಾಂತ್ರಿಕ ಪರಿಹಾರ ಎಂಬ ಗ್ರಹಿಕೆಯೂ ತಪ್ಪು. ಅದೇನಿದ್ದರೂ ಒಂದು ಸಣ್ಣ ಪೂರಕ ಅಂಶವಷ್ಟೇ. ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯನ್ನು ಅಪಾರ ಪ್ರಮಾಣದಲ್ಲಿ ತೊರೆಯುತ್ತಿರವುದಕ್ಕೆ ಇಂಗ್ಲೀಷ್ ಭಾಷೆಯಲ್ಲಿ ಕಡ್ಡಾಯ ಉತ್ತೀರ್ಣರಾಗಬೇಕೆಂಬುದು ಒಂದು ಪ್ರಧಾನ ಅಂಶ ಎಂಬುದನ್ನು ಗಮನಿಸಬೇಕು. ಇಂದಿನ ತಾರತಮ್ಯ ಅವಕಾಶ ವಂಚಿತತೆಯಂತಹ ವಾಸ್ತವದ ಹಲವಾರು ಅಂಶಗಳ ಪರಿಹಾರಕ್ಕೆ ಪ್ರಯತ್ನಿಸುವ ಸಮಗ್ರ ದೃಷ್ಟಿಯೂ ಬೇಕು.

ಈ ಹಿನ್ನೆಲೆಯಲ್ಲಿಯೂ ಸಹ ಒಂದನೆಯ ತರಗತಿಯಿಂದಲೇ ಇಂಗ್ಲೀಷ್ ಕಲಿಸಬೇಕೆಂಬ ಸರ್ಕಾರದ ಸೂಚನೆ ಜಾರಿಗೊಂಡು ಅನುಭವ ಪಡೆಯಬೇಕು. ಜಾಗತೀಕರಣದ ಪ್ರಕ್ರಿಯೆಯು ಭಾಷೆ ಸಂಸ್ಕೃತಿಗೆಯ ಮೇಲೆ ಮಾರಕವಾದ ಧಾಳಿ ನಡೆಸುತ್ತಿದೆ ಎಂಬ ಆತಂಕ ಸಹಜವಾದದ್ದೇ. ಈ ನಿಟ್ಟಿನಲ್ಲಿಯೂ ತಡೆಗೆ ಸರ್ಕಾರ, ಸಾರ್ವಜನಿಕರ ಪ್ರತಿರೋಧವೂ ಅಗತ್ಯವಿದೆ.

ದೊಡ್ಡವರ ದರೋಡೆ : ಲೋಕಾಯುಕ್ತರ ಕ್ರಮ ಇಷ್ಟೆ ಸಾಲದು



ಬೆಂಗಳೂರಿನಲ್ಲಿ ಗಗನ ಚುಂಬಿ ಕಟ್ಟಡಗಳು ಒಂದೇ,ಎರಡೇ, ಸಾವಿರಾರು. ಎಲ್ಲೆಲ್ಲೂ ವಿಭಿನ್ನ ವಿನ್ಯಾಸಗಳ ಕಟ್ಟಡಗಳೇ, ಅದರಲ್ಲೂ ಸ್ಪರ್ಧೆ, ಬೆಂಗಳೂರನ್ನು ಸಿಂಗಾಪುರವನ್ನಾಗಿಸುವ ತಹತಹ! ಈ ಧಾವಂತದಲ್ಲಿ ತಮ್ಮ ಭೂಮಿಯನ್ನಷ್ಟೇ ಅಲ್ಲ ಸರ್ಕಾರದ, ಸಾರ್ವಜನಿಕ ಭೂಮಿಯನ್ನು ನುಂಗುತ್ತಿರುವುದು ನಿತ್ಯಸುದ್ದಿ.

ಕರ್ನಾಟಕಕ್ಕೆ ಸೀಮಿತವಾಗಿದ್ದ ಯು.ಬಿ.ಗ್ರೂಪ್ ಅರ್ಥಾತ್ ಮಲ್ಯ ಕಂಪನಿ ಈಗ ಬಹುರಾಷ್ಟ್ರೀಯ ಕಂಪನಿ. ಈ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವೆಂಬುದು ಇಲ್ಲ, ಗಡಿಯೂ ಬೇಕಿಲ್ಲ. ಆಡಿದ್ದೇ ಆಟ, ಮಾಡಿದ್ದೇ ಕಾನೂನು ಹಾಗೇ ಇರಬೇಕೆಂದು ಕೊಂಡಿರುತ್ತಾರೆ. ತನ್ನ ತಾಳಕ್ಕೆ ಸರ್ಕಾರ ಕುಣಿಯಬೇಕೆಂದು ಬಯಸುತ್ತಾರೆ, ಕುಣಿಸುತ್ತಾರೆ. ಈ ಬಹುರಾಷ್ಟ್ರೀಯ ಕಂಪನಿ, ಎಲ್ಲೇ ಮೀರಿದ ನಿದರ್ಶನಗಳು ಹಲವು. ಸದ್ಯ ಸುದ್ದಿಯಲ್ಲಿರುವುದು ಈ ಯು.ಬಿ.ಗ್ರೂಪ್ ಕಟ್ಟುತ್ತಿರುವ (ಕಣ್ಣು ಕೋರೈಸುವ ವಿನ್ಯಾಸದ ಯು.ಬಿ. ಸಿಟಿಯ ಕಟ್ಟಡಕ್ಕೆ ಸಾರ್ವಜನಿಕ ರಸ್ತೆಯನ್ನೇ ಕಬಳಿಸಿ ಬಿಟ್ಟಿದ್ದಾರೆ. ಬೆಂಗಳೂರಿನಲ್ಲಿನ ಸಾರ್ವಜನಿಕ ಭೂಮಿಯನ್ನು ನುಂಗುತ್ತಿರುವುದರ ಬಗ್ಗೆ ತನಿಖೆ ನಡೆಸಲಾಗಿ ದೊಡ್ಡ ಮನುಷ್ಯರ ದರೋಡೆಯ ಪ್ರಕರಣಗಳು ಒಂದೊಂದೇ ಬಯಲಿಗೆ ಬರುತ್ತಿವೆ. ಜಂಟಿ ಸದನ ಸಮಿತಿ ಖೋಡೆ ಕಂಪನಿ ನುಂಗಿದ 300 ಎಕರೆ ಭೂಮಿಯನ್ನು ಪತ್ತೆ ಹಚ್ಚಿದೆ.



ಪ್ರಶ್ನೆ: ಭ್ರಷ್ಟಾಚಾರದ ವಿರುದ್ಧ ನಿಮ್ಮ ನೈತಿಕ ಸಮರದಲ್ಲಿ ಧಾರ್ಮಿಕ ಮುಖಂಡರನ್ನು ಬಳಸಿಕೊಳ್ಳಹುದಲ್ಲ...
ಉತ್ತರ: ಹೌದು! ಬಳಸಿಕೊಳ್ಳಬೇಕು... ಆದರೆ.. ಆದರೆ...(ಒಂದು ಕಿರುನಗು... ಒಂದು ನಿಟ್ಟುಸಿರು)
(ಉದಯವಾಣಿ ಮೇ,20 2007ರ ಸಾಪ್ತಾಹಿಕ)

ಹಾಗೆಯೇ ಯು.ಬಿ. ಗ್ರೂಪ್ ಸಾರ್ವಜನಿಕ ರಸ್ತೆ ನುಂಗಿದ್ದನ್ನು ಗುರುತಿಸಿ ಲೋಕಾಯುಕ್ತರು ಕ್ರಮ ಕೈಗೊಂಡಿದ್ದಾರೆ. ಕಟ್ಟಡದ ಬಾಡಿಗೆ ನೀಡುವಲ್ಲಿ ಕೋಟ್ಯಾಂತರ ವಂಚನೆಯಾಗಿದೆ.

ಇಂತಹದ್ದನ್ನು ಪತ್ತೆ ಹಚ್ಚಲು ಲೋಕಾಯುಕ್ತರು ಮುಂದಾಗಿರುವುದು ಸ್ವಾಗತಾರ್ಹ. ಹಾಗೆಯೇ ಇತ್ತೀಚೆಗೆ ಆಸ್ತಿ ವಿವರ ನೀಡದ ಇಬ್ಬರು ಸಚಿವರಿಗೆ ನೋಟೀಸ್ ನೀಡಿದ್ದಾರೆ. ಖಾತೆಯಿಂದ ಯಾಕೆ ತೆಗೆಯಬಾರದೆಂದು ತಾಕೀತು ಮಾಡಲಾಗಿದೆ. ಇತ್ತೀಚಿನ ಪ್ರಸಂಗಗಳು ಲೋಕಾಯುಕ್ತರು ಕ್ರಿಯಾಶೀಲರಾಗಿರುವುದು ಸಾರ್ವಜನಿಕರ ಗಮನ ಸೆಳೆಯುತ್ತಿದೆ.

ಭ್ರಷ್ಟಾಚಾರವನ್ನು ತಡೆಯುವಲ್ಲಿ ಲೋಕಾಯುಕ್ತರಿಗೂ ಒಂದು ಪಾತ್ರವಿದೆ. ಭ್ರಷ್ಟರಲ್ಲಿ ಶೇ.1 ಹಿಡಿದರು ಅದೇ ಸಾಧನೆಯೆಂದು ಹೆಗ್ಡೆ ಹೇಳುತ್ತಾರೆ. ಲೋಕಾಯುಕ್ತರು ಹಿಡಿದರೆ ಸರ್ಕಾರ ಅವರನ್ನು ಬಿಡುತ್ತದೆ, ಲೋಕಾಯುಕ್ತರೇ ಎಲ್ಲವನ್ನೂ ಸರಿಪಡಿಸುತ್ತಾರೆ ಎಂದು ಭಾವಿಸುವುದು, ಅಂತಹ ಭ್ರಮೆ ಸೃಷ್ಟಿಸುವುದು ತಪ್ಪು. ಭ್ರಷ್ಟಾಚಾರದ ವಿರುದ್ಧ ಸಮರ ಸಾರ್ವಜನಿಕ ಪ್ರಬಲ ಆಂದೋಲನ ವಾಗಬೇಕು. ಆಗಲೇ ಒಂದಿಷ್ಟಾದರೂ ಕಡಿವಾಣ ಹಾಕಲಾದೀತು.

ಹಗರಣದ ಶಾಸಕನನ್ನು ರಕ್ಷಿಸುವ ನಾಯಕರು

ಸಾರ್ವಜನಿಕ ಜವಾಬ್ದಾರಿ ಮತ್ತು ನೈತಿಕತೆಗಳನ್ನು ಬಿಟ್ಟಿರುವ ಬಿಜೆಪಿ ಶಾಸಕ ರೇಣುಕಾಚಾರ್ಯನ ಬಣ್ಣ ಮತ್ತೊಮ್ಮೆ ಬಯಲಾಗಿದೆ. ಇಂತಹ 'ಮಹಾನುಭಾವ' ಶಿಷ್ಯನ ರಕ್ಷಣೆಗೆ ಟೊಂಕ ಕಟ್ಟಿರುವ ಉಪಮುಖ್ಯಮಂತ್ರಿ ಯಡಿಯೂರಪ್ಪ, ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿಯವರು, ಈಗಿನ ಸರ್ಕಾರದಲ್ಲಿ ತಾವಿರುವ ಅಧಿಕಾರವನ್ನು ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿ ಸುಳ್ಳನ್ನು ಸತ್ಯವಾಗಿಸಲು ಹೆಣಗುತ್ತಿದ್ದಾರೆ.


ನರ್ಸ್ ಜಯಲಕ್ಷ್ಮಿ

ತನಗೆ ಲೈಂಗಿಕ ಕಿರುಕುಳ ನೀಡಲಾಗಿದೆ ಮತ್ತು ಕೊಲೆ ಬೆದರಿಕೆ ಒಡ್ಡಲಾಗುತ್ತಿದೆ ಎಂದು ಪದೇ ಪದೇ ನರ್ಸ್ ಜಯಲಕ್ಷ್ಮಿ ಹೇಳುತ್ತಿದ್ದಾರೆ. ಮಾತ್ರವಲ್ಲ ತಾನು ಅನುಭವಿಸಿದ ಹಿಂಸೆ, ಮಾಡಿರುವ ಆರೋಪಗಳನ್ನೇ ಬುಡಮೇಲು, ಮಾಡುತ್ತಿರುವ ಸಂದರ್ಭದಲ್ಲಿ, ಇನ್ನಷ್ಟು ಮಾಹಿತಿಗಳನ್ನು ಹೊರ ಹಾಕಿದ್ದಾಳೆ.

ಗಮನಿಸಬೇಕಾದ್ದೆಂದರೆ, ಇಷ್ಟೆಲ್ಲಾ ಆಗುತ್ತಿದ್ದರೂ, ಇನ್ನೂ ರೇಣುಕಾಚಾರ್ಯನ ಮೇಲೆ ಕಾನೂನಾತ್ಮಕ ಕ್ರಮವನ್ನೇ ತೆಗೆದುಕೊಳ್ಳದಿರುವುದು, ಜಯಲಕ್ಷ್ಮಿ ದೂರನ್ನು ಆಧರಿಸಿ ಪೋಲೀಸರು ಆರೋಪದ ಎಫ್.ಐ.ಆರ್./ಪ್ರಥಮ ಮಾಹಿತಿ ವರದಿ) ಯನ್ನೇ ಸಲ್ಲಿಸದಿರುವುದು. ತನ್ನ ಪ್ರಾಣ ತೆಗೆಯುವ ಬೆದರಿಕೆಯನ್ನು ರೇಣುಕಾಚಾರ್ಯ ಪದೇ ಪದೇ ಒಡ್ಡುತ್ತಿದ್ದಾನೆಂದೂ, ಹೇಳುತ್ತಿರುವ ಜಯಲಕ್ಷ್ಮಿ ಆತ್ಮಹತ್ಯೆಗೂ ಯತ್ನಿಸಿದ ಬಳಿಕವೂ ಅದೇ ಸ್ಥಿತಿ... ಅಂದರೆ ಸರ್ಕಾರದ ಆಡಳಿತವನ್ನು ಅದೆಷ್ಟು ಬಳಸಲಾಗುತ್ತಿದೆಯೆಂದು ಅರ್ಥವಾದೀತು.

ನೀತಿವಂತರು, ಪ್ರಾಮಾಣಿಕತೆ ಇರುವುದೇ ಬಿಜೆಪಿಯಲ್ಲಿ ಎಂದೆಲ್ಲಾ ಡಂಗೂರ ಹೊಡೆಯುತ್ತಿರುವಾಗಲೇ ಹಲಗೆ ಹರಿದುಹೋಗಿದೆ. ಇನ್ನಾದರೂ ತಮ್ಮ ಸ್ಥಾನದ ಘನತೆ, ಸಾರ್ವಜನಿಕ ಹೊಣೆಗಾರಿಕೆಯನ್ನು ನೆನಪಿಸಿಕೊಂಡು ಕಾನೂನು ತನ್ನ ಕ್ರಮ ಅನುಸರಿಸಬೇಕು. ಯಡಿಯೂರಪ್ಪ ಅಡ್ಡಬಂಡೆ ಯಾಗಬಾರದು. ಮಹಿಳಾ ಆಯೋಗದ ಅಧ್ಯಕ್ಷೆಯಾಗಿರುವ ನೇಸರ್ಗಿಯವರು ಬಿಜೆಪಿಯ ಪಕ್ಕಾ ಕಾರ್ಯಕರ್ತೆಯಂತೆ, ಇಂತಹ ಪ್ರಸಂಗಗಳಿಂದ ಕೆಲವರನ್ನು ಪಾರು ಮಾಡುವುದೇ ಈ ಸ್ಥಾನದ ಕೃಪೆ ದೊರೆದೆನ್ನುವಂತೆ ವರ್ತಿಸುತ್ತಿದ್ದಾರೆ. ಜಯಲಕ್ಷ್ಮಿ ಜೊತೆಗೆ ಬೀದಿ ಜಗಳಕ್ಕೆ ಇಳಿದಿರುವುದು ಆಯೋಗದ ಸ್ಥಾನವನ್ನು ಕುಗ್ಗಿಸಿದೆ.


ಅಧಿಕಾರದಲ್ಲಿರುವ ಪೂರ್ಣಾಧಿಕಾರಕ್ಕೆ ಹೊಂಚು ಹಾಕಿರುವ ಬಿಜೆಪಿ, ಉಪಮುಖ್ಯಮಂತ್ರಿ ಯಡಿಯೂರಪ್ಪ, ಈ ಸರ್ಕಾರ ಇರುವುದು ಯಾರ ಹಿತಕ್ಕೆ ಎಂದು ಸಾರ್ವಜನಿಕರು ಅರಿಯಬೇಕಿದೆ. ಇನ್ನಾದರೂ ಈ ಕೂಡಲೇ ಹಗರಣಗಳ ಸರಮಾಲೆ, ದಬ್ಬಾಳಿಕೆ, ಭ್ರಷ್ಟತೆಯ 'ಚಾರಿತ್ರ್ಯ ಭೂಷಣನಾದ' ರೇಣುಕಾಚಾರ್ಯನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಮುಂದಿನ ಕಾನೂನು ಕ್ರಮ ಜರುಗಿಸಬೇಕು.

ಶಿಕ್ಷಣಕ್ಕೆ ಪಠ್ಯಪುಸ್ತಕ ಬೇಕೆಂದವರಾರು?

ಈ ವರ್ಷ ಪಠ್ಯಪುಸ್ತಕಗಳ ಪೂರೈಕೆ ತಡವಾಗುತ್ತದೆ ಎಂದಿದ್ದಾರೆ ಶಿಕ್ಷಣ ಸಚಿವ ಹೊರಟ್ಟಿಯವರು. ನಿಜ ಶಿಕ್ಷಣ ಪಡೆಯಲು ಬೇಕಿರುವುದು ಪುಸ್ತಕಗಳಲ್ಲ, ನುರಿತ ಶಿಕ್ಷಕರೂ ಅಲ್ಲ, ಸ್ವಂತ ಕಟ್ಟಡ, ಇತ್ಯಾದಿ ಕಲಿಕಾ ಪರಿಕರಗಳೇನಲ್ಲ, ಬೇಕಿರುವುದು ಡೊನೇಷನ್, ಹಣ ಕಾಂಚಾಣ. ಇದಿದ್ದರೆ ಸಾಕು ಶಾಲೆ ಪ್ರವೇಶಕ್ಕೆ, ಅಲ್ಲವೇ ಶಿಕ್ಷಣ ಸಚಿವರು, ಇಂತಹ ವಾಸ್ತವವನ್ನು ಇನ್ನೊಂದು ರೀತಿಯಲ್ಲಿ ಹೇಳಿದ್ದಾರೆ.

ಸಕಾಲಕ್ಕೆ ಪಠ್ಯಪುಸ್ತಕ, ಸಮರ್ಪಕವಾಗಿ ನೀಡಲಾಗುವುದು ಎಂದಾಗಲೇ ಪುಸ್ತಕಕ್ಕೆ ಶಾಲೆ ಆರಂಭವಾಗಿ ತಿಂಗಳಾದರೂಬೇಕು. ಈಗ ವಿಳಂಬ ಎಂದರೆ....? ಈಗೇಕೆ ವಿಳಂಬ...? ಸಿದ್ದಪಡಿಸಿಕೊಳ್ಳುವ ಸಮಯ ಸಾಲಾದಾಯ್ತೆ? ಅಥವಾ ದಕ್ಷತೆ, ದೂರದೃಷ್ಟಿ ಯೋಜನೆಯ ಜಾರಿಯ ಅಭಾವವೇ?

ಇದೆಲ್ಲಾ ಯೋಚಿಸಲು ಪುರುಸೊತ್ತಿಲ್ಲ ಅಂತಾರೇ ಕೈಲಾಸ ಕಾಣಲು ಬೇರೆ ಕಾಯಕವಿದೆ ಅಂತಿರಾ?



ಸಿ.ಯತಿರಾಜು

ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಬ್ರಿಟಿಷರಿಂದ ಸಿಪಾಯಿದಂಗೆ ಎಂದು ಕರೆಯಲ್ಪಟ್ಟ 1857 ರ ಸ್ವಾತಂತ್ರ್ಯ ಸಂಗ್ರಾಮ ಆರಂಭದ ಘಟನಾವಳಿಗಳ ಬಗೆಗೆ ಓದಿ, ಈ ಮಹಾನ್ ಹೋರಾಟದ 150ನೇ ವರ್ಷಾಚರಣೆಯ ಸಂದರ್ಭದಲ್ಲಿ

10ನೇ ಮೇ 1857ರ ಭಾನುವಾರ, ಸೂರ್ಯಾಸ್ತದ ಸಮಯ. ಬಂಗಾಳ ಸೈನಿಕ ಪಡೆಯ ಬ್ರಿಟಿಷ್ ಸಿಪಾಯಿಗಳು ಮಾಮೂಲಿನಂತೆ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಲು ತೆರಳಿದರು. ಅದೇ ಸಮಯಕ್ಕೆ ಕಾಯುತ್ತಿದ್ದ 3ನೇ ಅಶ್ವ ಪಡೆಯ ನೂರಾರು ಯೋಧರು ಆವೇಶಪೂರಿತರಾಗಿ ತಮ್ಮ ಮಿತ್ರರನ್ನು ಬಂಧಿಸಿದ್ದ ಜೈಲಿನೆಡೆಗೆ ರಭಸದಿಂದ ಮುನ್ನುಗ್ಗಿದರು. ತಮ್ಮ ಎನ್‌ಫೀಲ್ಡ್ ಬಂದೂಕಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಸವರಿದ್ದ ಗುಂಡುಗಳನ್ನು ಬಾಯಿಂದ ಕಚ್ಚಿ ತೆಗೆದು ತುಂಬಲು ನಿರಾಕರಿಸಿದ್ದಕ್ಕೆ 10 ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿದ್ದ ಸುಮಾರು 85 ಸೈನಿಕರನ್ನು ಬಂಧಿಸಿಟ್ಟಿದ್ದ ಜೈಲಿನ ಬಾಗಿಲುಗಳನ್ನು ಮುರಿದು ಅದರಲ್ಲಿದ್ದ ಎಲ್ಲರನ್ನು ಹೊರಗೆ ಕರೆ ತಂದರು. ಇದನ್ನು ತಡೆಯಲು ಪ್ರಯತ್ನಿಸಿದ ಕರ್ನಲ್ ಫಿನ್ನಿಸ್ ಹಾಗೂ ಇತರ ಇಂಗ್ಲಿಷ್ ಅಧಿಕಾರಿಗಳು ಹಾಗೂ ಸೈನಿಕರನ್ನು ಗುಂಡು ಹಾರಿಸಿ ಕೊಲ್ಲಲಾಯಿತು. ಅದೇ ಸಮಯಕ್ಕೆ ಸರಿಯಾಗಿ 11 ಮತ್ತು 20ನೇ ವಿಭಾಗದ ಭಾರತೀಯ ಸೈನಿಕರು ಬ್ರಿಟಿಷ್ ಸೇನಾಧಿಕಾರಿಗಳನ್ನು ಗುಂಡಿಕ್ಕಿ ಕೊಂದರು. ಬ್ರಿಟಿಷರ ವಸತಿ ಸ್ಥಾನಗಳಿಗೆ ಲಗ್ಗೆಯಿಟ್ಟು ಬೆಂಕಿ ಹಚ್ಚಿದರು.

ಬ್ರಿಟಿಷ್ ಅಧಿಕಾರಿಗಳು ಈ ಅನಿರೀಕ್ಷಿತ ಆಘಾತದಿಂದ ತತ್ತರಿಸಿ ಹೋದರು. ಅವರಿಗೆ ಕೂಡಲೇ ಏನು ಮಾಡಬೇಕೆಂದು ಹೊಳೆಯದಂತಾಯಿತು. ತಮಗೆ ನಿಷ್ಠರಾಗಿದ್ದು, ತಮ್ಮ ಆಜ್ಞಾಪಾಲಕರಾಗಿದ್ದ ಸಿಪಾಯಿಗಳು ಒಮ್ಮಿಂದೊಮ್ಮೆಗೆ ತಮ್ಮ ಮೇಲೆ ಈ ರೀತಿ ಎರಗಿ ಬರಬಹುದೆಂದು ಅವರು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಈ ಬೆಳವಣಿಗೆ ಅವರ ಆತ್ಮವಿಶ್ವಾಸಕ್ಕೆ ದೊಡ್ಡ ಪೆಟ್ಟನ್ನು ನೀಡಿತ್ತು. ತಮ್ಮ ಶತ್ರುಗಳಾರು, ಮಿತ್ರರಾರು ಎಂಬುದೇ ಅವರಿಗೆ ತೋಚದಂತಾಯಿತು. ತಾವು ಶತ್ರು ಪಾಳೆಯದ ಕೇಂದ್ರ ಭಾಗದಲ್ಲಿ ಅತ್ಯಂತ ಭೀತಿಯಿಂದ ಬದುಕಬೇಕಾಗಿದೆ ಎಂದು ಅವರು ಭಾವಿಸುವಂತಾಯಿತು. ಬ್ರಿಟಿಷ್ ಸಾಮ್ರಾಜ್ಯದ ಅಧಿಪತಿಗಳ ತುಂಡುಗಳಂತೆ ಮೆರೆಯುತ್ತಿದ್ದ ಅವರಿಗೆ ಯಾವ ಕ್ಷಣದಲ್ಲಿ ಯಾವ ಕಡೆಯಿಂದ ಯಾರು ಬಂದು ನಮ್ಮ ಮೇಲೆ ಧಾಳಿ ಮಾಡುವರೋ ಎಂಬ ಆತಂಕ ಆವರಿಸಿಕೊಂಡಿತು. ತಮ್ಮ ಹೆಂಡತಿ ಮಕ್ಕಳ ರಕ್ಷಣೆಗೆ ಸುರಕ್ಷಿತ ಸ್ಥಾನಗಳನ್ನು ಹುಡುಕಾಡಬೇಕಾಯಿತು. ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ ನಿಷ್ಠೆಯಿಂದ ಹೋರಾಡುತ್ತಿದ್ದ ಸಿಪಾಯಿಗಳೇ ಹೀಗೆ ಬ್ರಿಟಿಷರ ಸಾರ್ವಭೌಮತ್ವಕ್ಕೆ ಅನಿರೀಕ್ಷಿತ ಸವಾಲೊಡ್ಡಿದ ಈ ಚಾರಿತ್ರಿಕ ಘಟನೆಯ ಮೂಲಕ ಬ್ರಿಟಿಷ್ ಇತಿಹಾಸಕಾರರ 'ಸಿಪಾಯಿ ದಂಗೆ' ಆರಂಭಗೊಂಡಿತು.

ಈ ಸಿಪಾಯಿಗಳ ಬಂಡಾಯ ಮೇಲೆ ವಿವರಿಸಿದಂತೆ ತೀರಾ ಅನಿರೀಕ್ಷಿತವಾದ ಬೆಳವಣಿಗೆಯೇನಾಗಿರಲಿಲ್ಲ. 1857ರ ಜನವರಿಯಲ್ಲಿ ಕಲ್ಕತ್ತಾದ ಡಂಡಂ ಬ್ರಿಟಿಷ್ ಸೈನಿಕ ನೆಲೆಯಲ್ಲಿ ಇಂತಹ ನಿರಾಕರಣೆಯ ಘಟನೆಗಳು ಜರುಗಿದ್ದವು. ರಾಣಿಗಂಜ್ ಮತ್ತು ಬ್ಯಾರಕ್‌ಪುರ್‌ಗಳಲ್ಲಿನ 34 ಮತ್ತು 19ನೇ ಎನ್.ಐ.ಪಡೆಗಳು ಬ್ರಿಟಿಷರ ಜಾತಿ ಭ್ರಷ್ಟಗೊಳಿಸುವ ಪ್ರಯತ್ನಗಳ ವಿರುದ್ಧ ಪ್ರತಿಭಟನೆಗಳನ್ನು ನಡೆಸಿದ್ದವು. ಬ್ರಿಟಿಷರು ಗೋಧಿ ಹಿಟ್ಟಿನ ಜೊತೆ ಮೂಳೆಪುಡಿಯನ್ನು ಬೆರೆಸಿ, ಮದ್ದು ಗುಂಡುಗಳಿಗೆ ದನದ ಮತ್ತು ಹಂದಿಯ ಕೊಬ್ಬನ್ನು ಉದ್ದೇಶಪೂರ್ವಕವಾಗಿ ಸವರುವ ಮೂಲಕ ಭಾರತೀಯ ಹಿಂದೂ ಮತ್ತು ಮುಸಲ್ಮಾನ್ ಸೈನಿಕರಿಬ್ಬರನ್ನು ಧರ್ಮ ಭ್ರಷ್ಟಗೊಳಿಸಲು ಪ್ರಯತ್ನಿಸುತ್ತಿದ್ದಾರೆಂಬ ಭಾವನೆ ಬೆಳೆದು ಬಂದಿತ್ತು. ಕ್ರೈಸ್ತ ಪಾದ್ರಿಗಳ ಮೂಲಕ ಸೈನ್ಯದಲ್ಲಿ ಕ್ರಿಸ್ತನ ಪ್ರವಚನಗಳನ್ನು ಏರ್ಪಡಿಸಲಾಗುತ್ತಿತ್ತು. ಭಾರತೀಯ ದೇವರುಗಳನ್ನು ಧರ್ಮಗಳನ್ನು ಅನೇಕ ಸಂದರ್ಭಗಳಲ್ಲಿ ಅವಹೇಳನ ಮಾಡಲಾಗುತ್ತಿತ್ತು. ಇದಲ್ಲದೆ ಭಾರತೀಯ ಸಿಪಾಯಿಗಳ ವೇತನ ಕೇವಲ ರೂ.7 ಮಾತ್ರವಾಗಿತ್ತು. ಅವರು ಎಷ್ಟೇ ಧೈರ್ಯ ಪರಾಕ್ರಮಗಳಿಂದ ಹೋರಾಡಿದರೂ ಅವರಿಗೆ ಬಡ್ತಿಯ ಅವಕಾಶಗಳಾಗಲಿ ಪ್ರೋತ್ಸಾಹಕ ಬಹುಮಾನಗಳಾಗಲಿ ದೊರೆಯುತ್ತಿರಲಿಲ್ಲ. ಜನಾಂಗೀಯ ತಾರತಮ್ಯ ಸೈನ್ಯದಲ್ಲಿ ತುಂಬಿ ತುಳುಕಾಡುತ್ತಿತ್ತು. ಭಾರತೀಯ ಮತ್ತುಬ್ರಿಟಿಷ್ ಸೈನಿಕರ ನಡುವೆ ವೇತನ ಮತ್ತು ಬಡ್ತಿಯಲ್ಲಿ ಅನ್ಯಾಯಕರ ನೀತಿಯನ್ನು ಅನುಸರಿಸಲಾಗುತ್ತಿತ್ತು. ಬಂಗಾಳ ಸೈನ್ಯವನ್ನು ಭಾರತವೇ ಅಲ್ಲದೇ ವಿದೇಶಗಳಲ್ಲೂ ಯುದ್ಧ ಮಾಡಲು ಕಳುಹಿಸಲಾಗುತ್ತಿತ್ತು. ಬಂಗಾಳದ ಸೈನ್ಯದಲ್ಲಿದ್ದ ಬ್ರಾಹ್ಮಣ ಸಿಪಾಯಿಗಳು ಸಮುದ್ರ ದಾಟುವ ಮೂಲಕ ತಮ್ಮ ಜಾತಿ ಭ್ರಷ್ಟಗೊಳ್ಳುತ್ತೆಂದು ಭಾವಿಸಿದ್ದರು.



ಈ ಎಲ್ಲ ಅಸಮಾಧಾನಗಳ ಹೊರೆ ಹೆಚ್ಚುತ್ತ ಬಂದು 34ನೇ ಎನ್.ಐ. ತುಕಡಿಯಲ್ಲಿ ಮಂಗಳ ಪಾಂಡೆ ಎಂಬ ಸಿಪಾಯಿಯ ಮೂಲಕ 29ನೇ ಮಾರ್ಚ್ 1857ರಲ್ಲಿ ಆಸ್ಫೋಟಿಸಿತು. ಅವನು ಸೈನಿಕ ತುಕಡಿಯ ಲೆಫ್ಟಿನೆಂಟ್ ಭಾಗ್ ಮೇಲೆ ಗುಂಡು ಹಾರಿಸುವ ಮೂಲಕ ಭಾರತದ ಮೊಟ್ಟ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಕಿಡಿ ಹಾರಿತು. ಬ್ರಿಟಿಷ್ ಸೈನಿಕರಿಂದ ಪ್ರತಿಧಾಳಿ ನಡೆಯಿತು. ಈ ಗುಂಡಿನ ಚಕಮಕಿಯಲ್ಲಿ ಮಂಗಳಪಾಂಡೆ ತೀವ್ರವಾಗಿ ಗಾಯಗೊಂಡ. ಶೇಕ್‌ಪುಲ್ಟು ಎಂಬ ಸೈನಿಕ ಮಂಗಳ ಪಾಂಡೆಯನ್ನು ಬಲವಾಗಿ ಹಿಡಿದುಕೊಂಡಿದ್ದರಿಂದ ಮಂಗಳಪಾಂಡೆ ಗಾಯಗೊಳಿಸಿದ ಇಬ್ಬರು ಬ್ರಿಟಿಷ್ ಅಧಿಕಾರಿಗಳು ಅವನ ಪ್ರಾಣಾಂತಿಕ ದಾಳಿಯಿಂದ ಪಾರಾಗಿ ತಪ್ಪಿಸಿಕೊಂಡರು. ಇಷ್ಟೆಲ್ಲಾ ಗದ್ದಲ ನಡೆದಾಗಲೂ ಯಾವ ಸಿಪಾಯಿಯೂ ಇಂಗ್ಲೀಷ್ ಅಧಿಕಾರಿಗಳ ಸಹಾಯಕ್ಕಾಗಲೀ ಮಂಗಳ ಪಾಂಡೆಯನ್ನು ಬಂಧಿಸಲಾಗಲಿ ಮುಂದೆ ಬರಲಿಲ್ಲ ಈ ಸುದ್ದಿಯನ್ನು ತಿಳಿದ ಜನರಲ್ ಹಿಯರ್‌ಸೈ ಕೆಲವು ಆಪ್ತ ಕಾವಲು ಭಟರೊಂದಿಗೆ ಮಂಗಳಪಾಂಡೆ ಮೇಲೆ ದಾಳಿ ಮಾಡಿದ. ತೀವ್ರವಾಗಿ ಗಾಯಗೊಂಡ ಅವನನ್ನು ಸುತ್ತುವರಿದು ಬಂಧಿಸಿದರು. ಮಂಗಳಪಾಂಡೆಯನ್ನು ನಂತರ ಸೈನಿಕ ನ್ಯಾಯಾಲಯಲದಲ್ಲಿ ವಿಚಾರಣೆಗೆ ಗುರಿಪಡಿಸಿ ರಾಷ್ಟ್ರದ್ರೋಹಿಯೆಂದು ತೀರ್ಮಾನಿಸಿ ಕೊಲ್ಲುವ ಮೂಲಕ ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಿಡಿಯನ್ನು ಹೊಸಕಿ ಹಾಕಲು ಪ್ರಯತ್ನಿಸಲಾಯಿತು. ಆದರೆ ಈ ಕಿಡಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಒಂದು ಬೃಹತ್ ದಾವಾನಲವನ್ನು ಆ ವೇಳೆಗಾಗಲೇ ಹೊತ್ತಿಸಿ ಬಿಟ್ಟಿತು.

34ನೇ ಎನ್.ಐ. ತುಕಡಿಯನ್ನು 9ನೇ ತುಕಡಿಯಂತೆ ವಿಸರ್ಜಿಸಲಾಯಿತು. ದಾಸ್ಯದ ಸಂಕೋಲೆಗಳಿಂದ ಬಿಡಗಡೆ ಪಡೆದ ಸೈನಿಕರು ತಮ್ಮ ಹಳ್ಳಿಗಳಿಗೆ ತೆರಳಿ ಸೈನ್ಯದಲ್ಲಾಗುತ್ತಿದ್ದ ಬೆಳವಣಿಗೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಿಕೊಂಡು ತಿರುಗಾಡಿದರು. ಈ ಸುದ್ದಿ ದೇಶದ ಉದ್ದಗಲಕ್ಕೆಲ್ಲಾ ಹರಡಿ ಬ್ಯಾರಕ್ ಪುರದ ಘಟನೆಗಳು ಮಾರ್ಚ್ ಕೊನೆಯ ಹೊತ್ತಿಗೆ ಅಂಬಾಲಾದಂತಹ ಮತ್ತೊಂದು ತುದಿಯಲ್ಲೂ ಪ್ರತಿಧ್ವನಿಸಲಾರಂಭಿಸಿದವು. ಇದಾದ ಸ್ವಲ್ಪ ಸಮಯದಲ್ಲೇ ಇದೇ ರೀತಿಯ ಘಟನೆಗಳು ಮೇ 2ರಂದು 7ನೇ ಔದ್ ರೆಜಿಮೆಂಟಿನಲ್ಲಿ ಘಟಿಸಿದವು. ಇಲ್ಲಿಯ ಸಿಪಾಯಿಗಳು ಕೊಬ್ಬು ಸವರಲ್ಪಟ್ಟ ಮದ್ದುಗುಂಡುಗಳನ್ನು ಕಚ್ಚಿ ಬಳಸಲು ನಿರಾಕಸಿದರು. ಮಾರನೆಯ ದಿನ ಸಿಪಾಯಿಗಳು ಅಧಿಕಾರಿಗಳನ್ನು ಕೊಲ್ಲುವ ಬೆದರಿಕೆ ಹಾಕಿದರು. ಔದ್‌ನ ಪ್ರಧಾನ ಆಯುಕ್ತ ಶೀಘ್ರ ಕಾರ್ಯಾಚರಣೆ ಬಂಡಾಯಗಾರರು ಪಲಾಯನ ಮಾಡಿದರು. ಉಳಿದವರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಳಿಸಿ ಶರಣಾಗತರಾದರು. ನಂತರ ಈ ತುಕಡಿಯನ್ನು ವಿಸರ್ಜಿಸಲಾಯಿತು.

ಏಪ್ರಿಲ್ 24 ರಂದು ದೆಹಲಿಯಿಂದ 40 ಮೈಲಿ ದೂರದಲ್ಲಿದ್ದ ಮೀರತ್ ಸೈನಿಕ ಕಂಟೋನ್ಮೆಂಟ್‌ನಲ್ಲಿದ್ದ 3ನೇ ಅಶ್ವಪಡೆಯ 900 ಸಿಪಾಯಿಗಳ ಪೈಕಿ 85 ಸಿಪಾಯಿಗಳು ಕವಾಯಿತು ಮೈದಾನದಲ್ಲಿ ಪ್ರಾಣಿಗಳ ಕೊಬ್ಬ ಸವರಲ್ಪಟ್ಟ ಮದ್ದುಗುಂಡುಗಳನ್ನು ಬಳಸಲು ನಿರಾಕರಿಸಿದರು. ಅವರನ್ನು ಸೈನಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ 10 ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಮೇ 5 ರಂದು ಅವರಿಗೆ ಅತ್ಯಂತ ಹೀನಾಯವಾಗಿ ಸಂಕೋಲೆಗಳನ್ನು ತೊಡಿಸಿ ಸರಪಳಿಗಳಿಂದ ಬಿಗಿದು ಮೆರವಣಿಗೆ ಮಾಡಿ ಬಂದೀಖಾನೆಗೆ ತಳ್ಳಲಾಯಿತು. ಬ್ರಿಟಿಷರಿಗೆ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದ ತಮ್ಮ ಪ್ರಾಣವನ್ನೇ ಪಣಕ್ಕೊಡ್ಡಿ ಅವರ ಸಾಮ್ರಾಜ್ಯ ವಿಸ್ತರಣೆಗೆ ಸಹಕರಿಸಿ, ದೇಶಿಯ ಜನರ ಆಕ್ರೋಶವನ್ನು ಮೈ ಮೇಲೆ ತೆಗೆದುಕೊಂಡು ಮಾನಸಿಕವಾಗಿ ದ್ವಂದ್ವಮಯ ಪರಿಸ್ಥಿತಿಯಲ್ಲಿದ್ದ ಸಹ ಸಿಪಾಯಿಗಳಲ್ಲಿ ಇದು ಸಹಾನುಭೂತಿಯ ಬುಗ್ಗೆಯನ್ನೆಬ್ಬಿಸಿತು. ಈ ಎಲ್ಲಾ ಸೈನಿಕ ಪರಿಸ್ಥಿತಿಗಳು ಸೈನಿಕ ಬಂಡಾಯಕ್ಕೆ ನಾಂದಿ ಹಾಡಿದವು ○

ಕ್ಯಾತೆ

'ಒಂದು ಸಾವಿರ ಕೋಟಿ ಸಾಲಕ್ಕೆ ಗ್ಯಾರಂಟಿ ಕೊಡ್ತೀರಾ ?'

(ಜನಶಕ್ತಿ ಪ್ರತಿನಿಧಿ ಈ ಪತ್ರವನ್ನು ಮುಖ್ಯಮಂತ್ರಿ ಕಚೇರಿಯಿಂದ ಕದ್ದು ತಂದಿದ್ದಾನೆ)

ಮಾನ್ಯ ಮುಖ್ಯಮಂತ್ರಿಗಳೇ,

ನಾನೊಬ್ಬ ಬೀದರ ಜಿಲ್ಲೆಯ ಹಣಕುಣಿ ಗ್ರಾಮದ ಬಡ ರೈತ. ನಾನು ಪಡೆದ 50 ಸಾವಿರ ಸಾಲಕ್ಕೆ ಬ್ಯಾಂಕ್ ಅಧಿಕಾರಿಗಳು ನನ್ನ ಬೆನ್ನ ಹಿಂದೆ ಬಿದ್ದಿದ್ದಾರೆ. ಸಾವಿರಾರು ಕೋಟಿ ರೂಪಾಯಿ ಸಾಲ ಪಡೆದು ರಾಜಾರೋಷವಾಗಿ ಓಡಾಡುತ್ತಿರುವುದನ್ನು ರೈತರು ಮಾದರಿಯಾಗಿ ತೆಗೆದುಕೊಳ್ಳಬೇಕು ಎಂಬ ನಿಮ್ಮ ಹೇಳಿಕೆ ಕೇಳಿ ರೋಮಾಂಚಿತನಾಗಿದ್ದೇನೆ. ಬ್ಯಾಂಕ್ ಅಧಿಕಾರಿಗಳಿಗೂ ಅದೇ ಹೇಳಿದೆ. ನೀನೂ ಸಾವಿರಾರು ಕೋಟಿ ಸಾಲ ತಗೋ. ಆಗ ನಾವು ಕೇಳಲ್ಲ ಅಂತ ಅಂದ್ರು. ಹಾಗಾದ್ರೆ ಒಂದು ಸಾವಿರ ಕೋಟಿ ಸಾಲ ಕೊಡಿ ಅಂದೆ. ಅದಕ್ಕೆ ಯಾರಾದ್ರು ಸಾವಿರಾರು ಕೋಟಿ ರೂಪಾಯಿ ಸಾಲ ಪಡೆದವರ ಅಥವಾ ಮಂತ್ರಿಗಳ ಗ್ಯಾರಂಟಿ ಬೇಕು ಅಂದ್ರು. ಸಾವಿರಾರು ಕೋಟಿ ರೂಪಾಯಿ ಸಾಲ ಪಡೆದವರು ಯಾರೂ ನನಗೆ ಗೊತ್ತಿಲ್ಲ. ಇಷ್ಟು ಸಾಲ ಪಡೆಯಬಹುದು. ಸಾಲ ವಾಪಸು ಮಾಡದೆ ರಾಜಾರೋಷವಾಗಿ ಓಡಾಡಬಹುದು. ಅಂತ ನನಗೆ ಗೊತ್ತೇ ಇರಲಿಲ್ಲ. ಮಂತ್ರಿಗಳೂ ಯಾರೂ ಗೊತ್ತಿಲ್ಲ. ರೈತರಿಗಾಗಿ ಹಗಲೂ ರಾತ್ರಿ ದುಡಿಯುತ್ತಿರುವ ನೀವೊಬ್ಬರೇ ಗೊತ್ತು. ಒಂದು ಸಾವಿರ ಕೋಟಿ ಸಾಲಕ್ಕೆ ನೀವು ಗ್ಯಾರಂಟಿ ಕೊಡುತ್ತೀರಾ ?

ನಿಮಗೆ ವಿಪರೀತ ಕೆಲಸ ಅಂತ ನನಗೆ ಗೊತ್ತು. ಇಡೀ ರಾಜ್ಯದ ಭಾರ ನಿಮ್ಮ ತಲೆ ಮೇಲ ಇದೆ. ರಾಜ್ಯ ಇಡೀ ಸುತ್ತುತ್ತಾ ಇರುತ್ತೀರಿ. ನೀವು ನಮ್ಮ ಹಳ್ಳಿ?ಗೆ ಗ್ರಾಮ ವಾಸ್ತವ್ಯಕ್ಕೆ ಬಂದಿದ್ದಿರಂತೆ. ಅಲ್ಲಿಂದಲೇ ಈ ಹೇಳಿಕೆ ಕೊಟ್ಟಿರಿ ಅಂತ ಗೊತ್ತಾಯ್ತು. ನಾನು ಬ್ಯಾಂಕ್ ಅಧಿಕಾರಿಗಳಿಂದ ತಪ್ಪಿಸಲು ಪಕ್ಕದ ಹಳ್ಳಿಗೆ ಹೋಗಿದ್ದೆ. ವಿಷಯ ಗೊತ್ತಾಗಿ ನಿಮ್ಮನ್ನು ಭೇಟಿ ಮಾಡಲು ಓಡಿ ಬಂದ್ರೆ ನೀವು ಆಗಲೇ ಹೋಗಾಯ್ತು ಅಂತ ಗೊತ್ತಾಯ್ತು. ನೀವು ಈಗ ಉಳ್ಳಾಲದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಲು ಕ್ಯಾಂಪ್ ಮಾಡಿದ್ದೀರಿ ಅಂತ ಕೇಳಿದೆ. ನಿಮಗೆ ಹಗಲು ರಾತ್ರಿ ರಾಜ್ಯದ ಚಿಂತೆ. ಯಾವ ಮಂತ್ರಿ ಎಲ್ಲಿ ಗಣಿ ನಡೆಸ್ತಾ ಇದ್ದಾನೆ ? ಎಲ್ಲಿ ಭೂಮಿ ಗುಳುಂ ಮಾಡ್ತಾನೆ ? ಎಲ್ಲಿ ಕೋಮು ಗಲಭೆ ಮಾಡಿಸ್ತಾನೆ ? ಯಾರಿಗೆ ಮುತ್ತು ಕೊಟ್ಟು ಫೋಟೊ ತೆಗೆಸಿಕೊಳ್ತಾನೆ ? ಅಂತ ಗಮನಿಸ್ತಾ ಇರಬೇಕು. ಇದರಿಂದ ನಿಮ್ಮ ಮುಖ್ಯಮಂತ್ರಿಗಿರಿಗೆ ಕುತ್ತೋ ಅಥವಾ ಅದನ್ನ ಬಳಕೆ ಮಾಡಬಹುದಾ ಅಂತ ತಲೆ ಕೆಡಿಸಿಕೊಳ್ಳಬೇಕು. ನಿಮ್ಮನ್ನು ಭೇಟಿ ಮಾಡುವುದು ಕಷ್ಟ. ಆದ್ದರಿಂದ ಈ ಪತ್ರ.

ರೈತರ ಆತ್ಮಹತ್ಯೆ ಹೀಗೆ ಮುಂದುವರಿದರೆ ರಾಜೀನಾಮೆ ಕೊಡುತ್ತೇನೆ ಅಂತಲೂ ಹೇಳಿದ್ದಿರಂತೆ. ಒಂದು ಸಾವಿರ ಕೋಟಿ ಸಾಲಕ್ಕೆ ನೀವು ಗ್ಯಾರಂಟಿ ಕೊಟ್ಟರೆ ನಾನು ನನ್ನ 50 ಸಾವಿರ ಸಾಲದ ಭಾರದಿಂದ ಬಿಡಿಸಿಕೊಳ್ಳಬಹುದು. ಇಲ್ಲದಿದ್ದರೆ ನಮ್ಮ ಹಳ್ಳಿಯಲ್ಲಿ ಸಾಲ ವಸೂಲಿಗೆ ಗ್ರಾಮ ವಾಸ್ತವ್ಯ ಹೂಡಿರುವ ಬ್ಯಾಂಕ್ ಅಧಿಕಾರಿಗಳಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಳ್ಳದೆ ವಿಧಿ ಇಲ್ಲ. ಹಾಗಂತ ನಾನು ನಿಮ್ಮನ್ನು ಬೆದರಿಸುತ್ತಿಲ್ಲ. ಆದರೆ ನನ್ನಿಂದಾಗಿ ರಾಜ್ಯ ಒಬ್ಬ ಒಳ್ಳೆಯ ಮುಖ್ಯಮಂತ್ರಿ ಕಳೆದುಕೊಳ್ಳಬಾರದು ಅಂತ ನನ್ನ ಚಿಂತೆ. ಅದೂ 20 ತಿಂಗಳ ಅವಧಿ ಮೊದಲೇ. ಹಾಗಾದರೆ ಒಂದು ಸಾವಿರ ಕೋಟಿ ಸಾಲಕ್ಕೆ ಗ್ಯಾರಂಟಿ ಕೊಡುತ್ತೀರಾ?

ನಿಮಗೆ ಈ ಪತ್ರ ತಲುಪದಿದ್ದರೆ ಅಥವಾ ತಲುಪುವ ಮೊದಲು (ಪತ್ರ ತಲುಪಿದರೆ ನೀವು ಗ್ಯಾರಂಟಿ ಕೊಡುತ್ತೀರಿ ಅಂತ ನನಗೆ ಗ್ಯಾರಂಟಿ ಇದೆ) ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದರೆ ಇದನ್ನೇ ಆತ್ಮಹತ್ಯೆ ಚೀಟಿ ಅಂತ ತಗೊಳ್ಳಿ. ಇದನ್ನು ನೀವು ಹೇಗೆ ಬೇಕಾದರೂ ಬಳಸಿಕೊಳ್ಳಿ. ಇಲ್ಲೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ರಂಗದ ಸರಕಾರ ಮುಂದುವರೆಯಬಾರದು. ಇನ್ನೊಂದು ರಂಗದ ಸರಕಾರ ಬರಬೇಕು ಎನ್ನಿರಿ ಬೇಕಾದರೆ. ಅಲ್ಲಿ ನೀವು ಮುಖ್ಯಮಂತ್ರಿಯಾಗಿ ಅಥವಾ ಕನಿಷ್ಠ ಉಪ ಮುಖ್ಯಮಂತ್ರಿಯಾಗಿ ಮುಂದುವರಿದರೆ ನನ್ನ ತ್ಯಾಗ ವ್ಯರ್ಥವಾಗಲಿಲ್ಲ ಎಂದುಕೊಳ್ಳುತ್ತೇನೆ.

ಇತಿ

ಹಣಕುಣಿಯ ಬಡ ರೈತ

ಒತ್ತುವರಿಯಿಂದ ಬಿಡಿಸಿರುವ ಭೂಮಿಯನ್ನು ಬಿಲ್ಡರ್‌ಗಳಿಗೆ ಹರಾಜು ಹಾಕುವ ಮೂಲಕ ಮಾರಲು ಸರ್ಕಾರ ಮುಂದಾಗಿದೆ. ಬಡವರಿಗೆ ಭೂಮಿ ಇಲ್ಲ ಎಂದು ಸರ್ಕಾರ ಈ ಮೂಲಕ ಸಾರಿ ಹೇಳುತ್ತಿದೆ

ತಿಮಿಂಗಿಲಗಳ ಬಾಯಿಗೆ ಸರ್ಕಾರದ ಭೂಮಿ

ಕೆ.ಪ್ರಕಾಶ್

"ಮುಖ್ಯಮಂತ್ರಿ ಬರೋವರ್ಗೂ ನಾನು ಹೋಗೋಲ್ಲ.... ಇಲ್ಲೇ ಇರ್ತೀನಿ... ಎಷ್ಟು ವರ್ಷದಿಂದ ಒಂದು ಜಾಗಕ್ಕಾಗಿ ಕಾಯೋದು..." 60 ವರ್ಷದ ಅಜ್ಜಿಯೊಬ್ಬರ ಆಕ್ರೋಶದ ಮಾತುಗಳಿವು. ಬಡವರಿಗೆ ನಿವೇಶನ ಬೇಕು ಮತ್ತು ಸರ್ಕಾರಿ ಭೂಮಿ ಹರಾಜು ಹಾಕಬಾರದು ಎಂದು ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳು ಜಂಟಿಯಾಗಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಹಗಲು ರಾತ್ರಿ ಧರಣಿಯನ್ನು ಅಂತ್ಯಗೊಳಿಸುವಾಗ ಕೇಳಿಬಂದು ಮಾತುಗಳಿವು. 50-60 ವರ್ಷಗಳ ದುಡಿತದ ಜೀವ ಸವೆಸಿದರೂ ನಿಲ್ಲಲು ನೆಲೆಯಿಲ್ಲ. ಬಡವರ ನೆಲೆಯನ್ನು ಶಾಶ್ವತವಾಗಿ ನಾಶಮಾಡುವ ಹುನ್ನಾರಕ್ಕೆ ರಾಜ್ಯದ ಜೆಡಿ(ಎಸ್) ಬಿಜೆಪಿ ಸಮ್ಮಿಶ್ರ ಸರ್ಕಾರ ಕೈ ಹಾಕಿದೆ. ಸರ್ಕಾರಿ ಭೂಮಿ ಸರ್ಕಾರದ ಬಳಿ ಇದ್ದರೆ ಇಂದಲ್ಲ ನಾಳೆ ಒಂದು ಚಿಕ್ಕ ನೆಲೆಯಾದರೂ ಸಿಗಬಹುದೇನೋ... ಸರ್ಕಾರದ ಬಳಿ ಭೂಮಿಯೇ ಇಲ್ಲದಿದ್ರೆ.... ಎಲ್ಲಿ ನೆಲೆ? ಯಾವ ಮನೆ? ಬೆಂಗಳೂರಿನ ಬಡವರನ್ನು ಕಾಡುತ್ತಿರುವ ಪ್ರಶ್ನೆಯಿದು.

ಇಂದು ಬೆಂಗಳೂರಿನ ಭೂಮಿಗೆ ಚಿನ್ನದ ಬೆಲೆ ಬಂದಿದೆ. ಜಾಗತಿಕ ಬಂಡವಾಳಗಾರರು ಮತ್ತು ದೇಶೀಯ ದೊಡ್ಡ ಬಂಡವಾಳಗಾರರು ಗಣನೀಯ ಪ್ರಮಾಣದಲ್ಲಿ ಬೆಂಗಳೂರನ್ನು ಪ್ರವೇಶಿಸುತ್ತಿರುವುದರಿಂದ ಭೂಮಿಯನ್ನು ದುಡಿಯುವ ಜನರಿಂದ ದೂರ ಮಾಡಲಾಗುತ್ತಿದೆ. ನಿವೇಶನ ಮತ್ತು ವಸತಿ ಸಮಸ್ಯೆಯು ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ. ಬೆಂಗಳೂರಿನ ಸುತ್ತ 10-15 ಲಕ್ಷ ರೂ.ಗಳಿಗಿಂತ ಕಡಿಮೆಗೆ ಒಂದು ಸಣ್ಣ ಸೈಟನ್ನು ಯೋಚಿಸುವುದೂ ಸಹ ಕಷ್ಟದ ವಿಚಾರ. ಇಂತಹ ಸಂದರ್ಭದಲ್ಲಿ ಕೈಗಾರಿಕಾ ಕಾರ್ಮಿಕರು, ಕೂಲಿಕಾರರು, ಆಟೋ ಚಾಲಕರು, ಬೀಡಿ-ಅಗರ್‌ಬತ್ತಿ, ಗಾರ್ಮೆಂಟ್ ಕಾರ್ಮಿಕರು, ಕೊಳಚಿ ನಿವಾಸಿಗಳು ಬಡದಲಿತರು ಮುಂತಾದವರು ಭವಿಷ್ಯದಲ್ಲಿ ಸ್ವಂತ ಸೂರಿನ ಕನಸು ಕಾಣುವುದಾದರೂ ಹೇಗೆ?

ಧುತ್ತೆಂದು ಅಪಾರ ಲಾಭ ಗಳಿಸಬೇಕೆನ್ನುವ ಈ ಜೂಜು ಬಂಡವಾಳದ ಅಂತರ್ಗತ ಒತ್ತಡಗಳೇ ಬೆಂಗಳೂರಿನ ಬಡವರ ದುಡಿಯುವ ವರ್ಗಗಳ ನಿವೇಶನ ವಸತಿ ಕನಸನ್ನೂ ಮರೀಚಿಕೆಯನ್ನಾಗಿ ಮಾರ್ಪಡಿಸಿದೆ.

ಭೂ ಸುಧಾರಣಾ ಕಾಯ್ದೆ ಭೂ ಮಿತಿ ಕಾನೂನು ರದ್ದತಿ, ಭೂ ಕಬಳಿಕೆ, ಸರ್ಕಾರಿ ಭೂಮಿ ಹರಾಜು ಮುಂತಾದ ಸರ್ಕಾರ ಕ್ರಮಗಳ ಹಿಂದಿರುವ ತತ್ವ ಇದೇ. ಈ ಜೂಜು ಬಂಡವಾಳದ ಇಂದಿನ ಲಾಭ ಅವತಾರಗಳಿಗೆ ಪಾಲುದಾರರಾಗಿ ಸ್ಥಳೀಯ ಅಧಿಕಾರಸ್ಥ ರಾಜಕಾರಣಿಗಳು, ಭೂಗಳ್ಳರು, ಭೂ ಮಾಫಿಯಾಗಳು, ಅಧಿಕಾರಿಗಳು ಮುಂತಾದವರು ಶಾಮೀಲಾಗಿದ್ದಾರೆ.

ವಿಧಾನಸಭೆಯಲ್ಲಿ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಈ ಗಂಭೀರ ಸಮಸ್ಯೆಯ ಬಗ್ಗೆ ಹಾಗೂ ಬೆಂಗಳೂರು ನಗರ ಮತ್ತು ಸುತ್ತಮುತ್ತ ಆಗುತ್ತಿರುವ ಭೂ ಕಬಳಿಕೆ ವಿರುದ್ಧ ಚರ್ಚಿಸಿದ ಪರಿಣಾಮವಾಗಿ ಸರ್ಕಾರಿ ಭೂಮಿ ಒತ್ತುವರಿ ಕುರಿತು ಜಂಟಿ ಸಮಿತಿ ನೇಮಕವಾಯ್ತು. ಇದು ಜಿಲ್ಲೆಯಲ್ಲಿರುವ ಒಟ್ಟು 1.18 ಲಕ್ಷ ಎಕರೆ ಸರ್ಕಾರಿ ಜಮೀನಿನಲ್ಲಿ 13,614 ಎಕರೆ ಒತ್ತುವರಿಯಾದ ಬಗ್ಗೆ ತನ್ನ ಮಧ್ಯಂತರ ವರದಿಯಲ್ಲಿ ತಿಳಿಸಿತ್ತು. ಪೂರ್ಣ ತನಿಖೆ ಮುಗಿದಾಗ ಇದು ಎರಡು ಪಟ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಒತ್ತುವರಿಯಾದ ಭೂಮಿಯನ್ನು ವಶಪಡಿಸಿಕೊಂಡು ಬಹಿರಂಗ ಹರಾಜಿನ ಮೂಲಕ ರಿಯಲ್ ಎಸ್ಟೇಟ್‌ನಲ್ಲಿ ಜೂಜು ಬಂಡವಾಳ ಹೂಡುವವರ ವಶಕ್ಕೆ ಒಪ್ಪಿಸುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ. ಬಹಿರಂಗ ಹರಾಜು ಹಾಕುವ ಸರ್ಕಾರದ ಈ ಕ್ರಮವೇ ಈಗ ಹೆಚ್ಚು ವಿರೋಧಕ್ಕೆ ಒಳಗಾಗಿರುವುದು. ಹರಾಜು ವಿರೋಧಿ ಹೋರಾಟಕ್ಕೆ ಸಿಪಿಐ(ಎಂ) ನೇತೃತ್ವ ನೀಡಿದೆ.

ಸರ್ಕಾರದ ಮತ್ತು ದುಡಿಯುವ ಬಡ ಜನರ ನಡುವಿನ ವೈರುಧ್ಯ ಏನು? ಈಗಿನ ಪರಿಸ್ಥಿತಿಯಲ್ಲಿ ಸರ್ಕಾರಿ ಭೂಮಿಯನ್ನು ಒಂದು ಬಾರಿ ಮಾರಾಟ ಮಾಡಿದ ನಂತರ ಪುನಃ ವಾಪಸ್ ಪಡೆಯಲು ಅಸಾಧ್ಯ. ಬಡವರಿಗೆ ನಿವೇಶನ ವಸತಿ ನೀಡಲು ಜಾಗಬೇಕು, ಶಾಲೆ ಕ್ರೀಡಾಂಗಣ, ಪಾರ್ಕ್, ಆಸ್ಪತ್ರೆ, ಸ್ಮಶಾನ ಮುಂತಾದ ಸಮುದಾಯಕ ಉದ್ದೇಶಗಳಿಗೆ ಜಾಗ ಬೇಕು..... ಇವೆಲ್ಲಕ್ಕೂ ಭೂಮಿಯನ್ನು ಹೊಸದಾಗಿ ಸೃಷ್ಟಿಸಲು ಆಗದು. ಆದ್ದರಿಂದ ಒತ್ತುವರಿ ಭೂಮಿ ಮಾರಾಟ ಮಾಡುವುದನ್ನು ನಿಲ್ಲಿಸಬೇಕು. ಒಟ್ಟು ಇರುವ ಭೂಮಿಯಲ್ಲಿ ಯಾವ ಉದ್ದೇಶಕ್ಕೆ ಎಷ್ಟು ಭೂಮಿ ಬೇಕೆಂಬುದನ್ನು ಅಂದಾಜು ಮಾಡಬೇಕು. ಬಗರ್‌ಹುಕುಂ, ಸಾಗುವಳಿದಾರರು ಮತ್ತು ಬಡನಿವೇಶನದಾರರಿಗೆ ರಿಯಾಯಿತಿ ಕೊಟ್ಟು ಸಮುದಾಯಿಕ ಉದ್ದೇಶಗಳಿಗೆ ಸಾಧ್ಯವಿಲ್ಲದ ಭೂಮಿಯನ್ನು ಮಾತ್ರ, ಅಗತ್ಯವನ್ನು ಅನುಸರಿಸಿ ಹರಾಜಿಗೆ ಒಳಪಡಿಸುವುದು ಸೂಕ್ತ. ಈಗಿರುವ ಸರ್ಕಾರಕ್ಕೆ ಅಂತಹ ಯಾವುದೇ ನಿರ್ದಿಷ್ಟ ಯೋಜನೆಯಿಲ್ಲ. ಆದರೆ ಸರ್ಕಾರ ಇದಾವುದನ್ನೂ ಲೆಕ್ಕಿಸದೆ ಮೂರು ಕಾಸು ಆರು ಕಾಸಿಗೆ ಹರಾಜು ಹಾಕುತ್ತಿದೆ. ಇದರಲ್ಲಿ ಲೂಟಿ ಮಾಡುವ ಉದ್ದೇಶವಲ್ಲದೆ ಬೇರೇನಿಲ್ಲ.

ಒತ್ತುವರಿ ತನಿಖೆಗೆ ಜಂಟಿ ಸದನ ಸಮಿತಿಯನ್ನು ರಚಿಸಿದ್ದು ಶಾಸನಸಭೆ. ಇದು ಇನ್ನೂ ಪೂರ್ಣ ವರದಿಯನ್ನು ಕೊಟ್ಟಿಲ್ಲ. ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿಲ್ಲ ಚರ್ಚಿಸಿಲ್ಲ, ಕೇವಲ ಮಧ್ಯಂತರ ವರದಿಯ ಮೇಲೆ, ಚರ್ಚೆಯನ್ನು ಮಾಡದೆ ತರಾತುರಿಯಲ್ಲಿ ಹರಾಜು ಹಾಕಲಾಗುತ್ತಿದೆ. ಈ ಆತುರದ ಹಿಂದಿರುವ ಉದ್ದೇಶವೇನು? ಇದಕ್ಕೆ ಪುಷ್ಠಿಕೊಡುವ ರೀತಿಯಲ್ಲಿ, ಹರಾಜು ಹಾಕಲು ಗುರುತಿಸಿರುವ ಭೂಮಿಯ ಸ್ವರೂಪ ಮತ್ತು ಹರಾಜು ನಡೆಯುತ್ತಿರುವ ರೀತಿಯನ್ನು ಗಮನಿಸಿದರೆ ಅನುಮಾನಗಳು ಗಟ್ಟಿಗೊಳ್ಳುತ್ತದೆ. ರೈತರು ಉಳುಮೆ ಮಾಡುತ್ತಿರುವ ಮತ್ತು ಬಗರ್‌ಹುಕುಂ ಅರ್ಜಿ ಹಾಕಿರುವ ಭೂಮಿ, ಬಡವರು ವಾಸ ಮಾಡುತ್ತಿರುವ ನಿವೇಶನ ಭೂಮಿ, ಇವು ಹರಾಜಾಗುತ್ತಿದೆ. ಆದರೆ ಶ್ರೀಮಂತರು ಮತ್ತು ಭೂಗಳ್ಳರು ಕದ್ದಿರುವ ಭೂಮಿಯನ್ನು ಮುಟ್ಟಲು ಸರ್ಕಾರ ಧೈರ್ಯ ತೋರುತ್ತಿಲ್ಲ. ಹಸಿರುಪಟ್ಟಿಯಲ್ಲಿರುವ ಭೂಮಿಯನ್ನೇ ಹೆಚ್ಚಾಗಿ ಹರಾಜಿಗೆ ಇಡಲಾಗಿದೆ. ನಗರಾಭಿವೃದ್ಧಿ ಯೋಜನೆಯಡಿ ಹಾಗೂ ಹಸಿರು ವಲಯದ ನಿಯಮದಡಿ ನಿರ್ದಿಷ್ಟ ಉದ್ದೇಶಗಳಿಗೆ ಗುರುತಿಸಲಾಗಿರುವ ಭೂಮಿಯನ್ನು ಕೊಳ್ಳುವ ರಿಯಲ್ ಎಸ್ಟೇಟ್ ಕುಳಗಳು ಅದನ್ನು ಕಾಪಾಡುತ್ತಾರೆಂದು ಹೇಳುವುದು ಕಣ್ಣಿದ್ದೂ ಕುರುಡರಾಗಿ ವರ್ತಿಸುವುದರ ಸಂಕೇತವಲ್ಲವೇ?

ಮತ್ತೊಂದು ಕಡೆ, ಮಾರಾಟ ಮಾಡುವ ಆತುರದ ಮತ್ತು ಲೂಟಿಯ ಕ್ರಮವನ್ನು ಸಮರ್ಥಿಸಿ ಕೊಳ್ಳಲು ರೈತರ ಸಾಲಮನ್ನಾ ಕಾರ್ಯಕ್ರಮವನ್ನು ಅಡ್ಡಹಿಡಿಯುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ. ಜೊತೆಗೆ ಸಾರಾಯಿ/ಲಾಟರಿ ನಿಷೇಧದಿಂದ ಉಂಟಾಗುವ ಕೊರತೆಯನ್ನು ಇದರಿಂದ ತುಂಬುವುದಾಗಿ ಮಂತ್ರಿಗಳು ಮಾತನಾಡುತ್ತಿದ್ದಾರೆ. ರೈತರು, ಬಡವರು, ಮಹಿಳೆಯರು, ದಲಿತರು ಮುಂತಾದ ವರ್ಗಗಳಿಗೆ ಮಾಡುವ ಸಾಮಾಜಿಕ ವೆಚ್ಚವನ್ನು ಸರ್ಕಾರಿ ಆಸ್ತಿಗಳ ಮಾರಾಟದಿಂದ ನಿಭಾಯಿಸುತ್ತೇವೆನ್ನುವ ಈ ಸರ್ಕಾರ ನಿಜಕ್ಕೂ ಬೌದ್ಧಿಕವಾಗಿ ದಿವಾಳಿಯೆದ್ದಿದೆ. ಇದೊಂದು ಸ್ಪಷ್ಟ ಧ್ಯೇಯಗಳಿಲ್ಲದ ಅಸಮರ್ಥ ಸರ್ಕಾರ.

ಈ ಹಿನ್ನೆಲೆಯಲ್ಲಿ ಜೆಡಿ(ಎಸ್) ಬಿಜೆಪಿ ಸರ್ಕಾರದ ದಿವಾಳಿಕೋರ ನೀತಿಗಳ ವಿರುದ್ಧ ಜನಪರ ಪರ್ಯಾಯಗಳಿಗಾಗಿ ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳು ಹೋರಾಟದ ಹಾದಿಯನ್ನು ತುಳಿದಿವೆ. ಹಲವು ಹಂತಗಳ ಹೋರಾಟಗಳನ್ನು ನಡೆಸಲಾಗಿದೆ. ಮುಖ್ಯಮಂತ್ರಿಯವರು ಮೇ 31ಕ್ಕೆ ಮಾತುಕತೆಗೆ ಆಹ್ವಾನಿಸಿದ್ದಾರೆ. ಮತ್ತೊಂದು ಕಡೆ ಹರಾಜನ್ನು ಮುಂದುವರಿಸಿದ್ದಾರೆ. ಹರಾಜು ನಡೆಸುತ್ತಲೇ ಮಾತುಕತೆ ನಡೆಸುವುದು ಸೌಜನ್ಯವಲ್ಲ ಸರಿಯಾದ ಕ್ರಮವೂ ಅಲ್ಲ. ಸರ್ಕಾರ ಹರಾಜು ನಿಲ್ಲಿಸಿ ಮಾತುಕತೆ ಮಾಡಬೇಕು. ಇಲ್ಲದಿದ್ದಲ್ಲಿ ವ್ಯಾಪಕವಾದ ರಾಜಕೀಯ ಪ್ರಚಾರದ ಮೂಲಕವೇ ಈ ಭಂಡ ಸರ್ಕಾರಕ್ಕೆ ಉತ್ತರಿಸಬೇಕಾಗುತ್ತದೆ. ಬಡವರಿಗೆ ಭೂಮಿ ಎಂಬುದು ಕೇವಲ ಒಂದು ಜಾಗದ ಪ್ರಶ್ನೆಯಲ್ಲ. ಅದು ಮಾನವ ಹಕ್ಕುಗಳ ಪ್ರಜಾಪ್ರಭುತ್ವದ ಪ್ರಶ್ನೆ.



ಕಬಳಿಸಲಾದ ಭೂಮಿ

ಭೂಮಿ ಹರಾಜಿಗೆ ಪ್ರತಿರೋಧ

ಬೆಂಗಳೂರು ಸುತ್ತಮುತ್ತ ಶ್ರೀಮಂತರು ಅಕ್ರಮವಾಗಿ ಕಬಳಿಸಿರುವ ಒಟ್ಟಾರೆ ಸರ್ಕಾರಿ ಭೂಮಿ 31 ಸಾವಿರ ಎಕರೆ ಎಂದು ಸರ್ಕಾರವೇ ನೇಮಿಸಿದ್ದ ಜಂಟಿ ಸದನ ಸಮಿತಿ ಅಧಿಕೃತವಾಗಿ ಹೇಳಿದೆ.

ಹರಾಜು ತಡೆಯುವ ಹೋರಾಟಕ್ಕೆ ಧುಮುಕಿದ ಸಿಪಿಐ(ಎಂ)

ಏಪ್ರಿಲ್ 25 ರಂದು ವಶಪಡಿಸಿಕೊಳ್ಳಲಾದ ಸರ್ಕಾರಿ ಭೂಮಿಯನ್ನು ಹರಾಜು ಹಾಕಲು ಸರ್ಕಾರ ಸಂಚು ರೂಪಿಸಿದಾಗಲೇ, ಅದನ್ನು ತಡೆಗಟ್ಟಬೇಕೆಂದು ಯೋಜನೆಯನ್ನು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ರೂಪಿಸಿತು. ಅದರಂತೆ ಅಂದು ಸರ್ಕಾರ ಭೂಮಿ ಹರಾಜು ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು. ಇತ್ತ ಸರ್ಕಾರಿ ಭೂಮಿಯನ್ನು ಬಡವರಿಗೆ ಹಂಚಬೇಕು ಬೇಡಿಕೆಯೊಂದಿಗೆ ಸಿಪಿಐ(ಎಂ) ಕಾರ್ಯಕರ್ತರು ಹೋರಾಟಕ್ಕೆ ಧುಮುಕಿದರು. ಮಾತ್ರವಲ್ಲ ಜಿಲ್ಲಾಧಿಕಾರಿ ಕಛೇರಿಗೂ ನುಗ್ಗಿ ತೀವ್ರ ಸಂಘರ್ಷಕ್ಕೆ ಕಾರಣರಾದರು. ಹೋರಾಟದಲ್ಲಿ ಹತ್ತಾರು ಮಹಿಳಾ ಕಾರ್ಯಕರ್ತರೂ ಹೋರಾಟ ದಲ್ಲಿದ್ದರೂ ಅವರನ್ನು ಬಂಧಿಸಲು ಮಹಿಳಾ ಸಿಬ್ಬಂದಿಯನ್ನು ನೇಮಿಸದೇ ಅವರೊಂದಿಗೆ ಅಸಭ್ಯವಾಗಿ ವರ್ತಿಸಲಾಯಿತು. ಪೋಲಿಸರ ಈ ಕ್ರಮವನ್ನು ಕಾರ್ಯಕರ್ತರು ತೀವ್ರವಾಗಿ ಪ್ರತಿಭಟಿಸಿದಾಗ ಅನಿವಾರ್ಯವಾಗಿ ಮಹಿಳಾ ಸಿಬ್ಬಂದಿಯನ್ನು ಕರೆಸಲಾಯಿತು. ಮತ್ತು ಅಂತಿಮವಾಗಿ ಹೋರಾಟ ನಿರತ ಸುಮಾರು 50ರಿಂದ 60 ಕಾರ್ಯಕರ್ತರನ್ನು ಬಂಧಿಸಲಾಯಿತು. ನಂತರ ಹಲವು ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಈ ಚಳುವಳಿ ಜೊತೆ ಕೈ ಜೋಡಿಸಲು ಮುಂದೆ ಬಂದವು.

ಮತ್ತೆ ಹೋರಾಟ : ಮಹಿಳಾ ಕಾರ್ಯಕರ್ತರೊಂದಿಗೆ ಅಸಭ್ಯವಾಗಿ ವರ್ತಿಸಿದ ಪೋಲೀಸ್‌ರ ಕ್ರಮದ ವಿರುದ್ಧ ಮತ್ತು ಜನಪರ ಬೇಡಿಕೆಗಳಿಗಾಗಿ ಒತ್ತಾಯಿಸಿ ಏಪ್ರಿಲ್ 27 ರಂದು ಮತ್ತೆ ಪ್ರತಿಭಟನೆ ನಡೆಸಲಾಯಿತು. ಅಲ್ಲದೆ ಭೂ ಹರಾಜು ಪ್ರಕ್ರಿಯೆಯನ್ನು ನಿಲ್ಲಿಸದ ಸರ್ಕಾರದ ತೀರ್ಮಾನದ ವಿರುದ್ಧ ವಿಶಾಲ ಹೋರಾಟ ನಡೆಸುವ ತೀರ್ಮಾನ ಮಾಡಲಾಯಿತು.

ಹೋರಾಟಕ್ಕೆ ಹೊಸ ದಿಕ್ಕು ನೀಡಿದ 'ದುಂಡು ಮೇಜಿನ ಸಭೆ' : ಹೋರಾಟವನ್ನು ವಿಶಾಲ ತಳಹದಿಯಲ್ಲಿ ನಡೆಸಲು ನಿರ್ಧರಿಸಿದೆ. ಮೇ 9 ರಂದು ಬೆಂಗಳೂರಿನಲ್ಲಿ ದುಂಡು ಮೇಜಿನ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಮಾಜಿ ಸಚಿವರೂ ಹಾಗೂ ಶಾಸಕರಾದ ಪಿ.ಜಿ.ಆರ್.ಸಿಂಧ್ಯಾ, ಶಾಸಕರಾದ ಡಾ: ಎಲ್ ಹನುಮಂತಯ್ಯ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಜಿ.ವಿ.ಶ್ರೀರಾಂರೆಡ್ಡಿ ಅಲ್ಲದೆ, ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀನಿವಾಸಗೌಡ, ಪ್ರಜಾವಿಮೋಚನಾ ಚಳುವಳಿಯ ಪಟಾಪಟ್ ನಾಗರಾಜ್, ಸಂಯುಕ್ತ ಜನತಾದಳದ

ಪುಟ 10ಕ್ಕೆ



ಜನಶಕ್ತಿ ಕನ್ನಡ ವಾರಪತ್ರಿಕೆ

ಜೂನ್ 3, 2007

ಉಳ್ಳಾಲ ಉಪ ಚುನಾವಣೆ

ಉಳ್ಳಾಲ ಉಪ ಚುನಾವಣೆ ಹಲವು ಕಾರಣಗಳಿಗಾಗಿ ಮಹತ್ವ ಪಡೆದಿದೆ. ಉಳ್ಳಾಲದ ಒಳಗಿನ ಪರಿಸ್ಥಿತಿ ಏನು?

ಜನರ ಐಕ್ಯತೆಗಾಗಿ ಹೋರಾಟ

ವಸಂತ ಆಚಾರಿ

ಉಳ್ಳಾಲ ಕ್ಷೇತ್ರದ ಹಾಲಿ ಶಾಸಕ ವಯೋವೃದ್ಧ ಯು.ಟಿ. ಫರೀದ್‌ರವರ ಮರಣದಿಂದ ತೆರವಾಗಿರುವ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ. ಕಳೆದ ಬಾರಿ ಭಾರಿ ಪೈಪೋಟಿ ಸೀಟಿಗಾಗಿ ಕಾಂಗ್ರೆಸ್‌ನೊಳಗಡೆ ಇತ್ತು. ಸ್ವತಃ ಫರೀದ್‌ರ ಮಗ (ಕಾಂಗ್ರೆ ಅಭ್ಯರ್ಥಿ ಯು.ಟಿ.ಖಾದಿರ್)ಕೂಡ ಆಕಾಂಕ್ಷಿಯಾಗಿದ್ದ. ಈ ಪೈಪೋಟಿ ತಡೆಯಲು ಕೊನೆಗೆ ಅನಾರೋಗ್ಯದಿಂದ ಚಟುವಟಿಕೆ ನಡೆಸಲು ಅಸಾಧ್ಯ ಸ್ಥಿತಿಯಲ್ಲಿದ್ದ ಯು.ಟಿ.ಫರೀದ್‌ರವರಿಗೆ ಸೀಟ್ ನೀಡಲಾಯಿತು. ಚುನಾವಣೆಯಲ್ಲಿ ಕಾಂಗ್ರೆ ನಾಲಾಯಕ್ಕು ಪಕ್ಷವಾಗಿದ್ದರೂ ಕೋಮುವಾದಿ ಬಿಜೆಪಿ ಸೀಟ್ ಗೆಲ್ಲಬಹುದು ಎಂಬ ಏಕೈಕ ಕಾರಣಕ್ಕೆ ಕಾಂಗ್ರೆಗೆ ಅಲ್ಪ ಸಂಖ್ಯಾತರು ಮತ ನೀಡಿದ್ದರಿಂದ ಕಾಂಗ್ರೆ ಗೆದ್ದಿತು. ಗೆದ್ದ ತರುವಾಯ ತಂದೆಯ ಹೆಸರಿನಲ್ಲಿ ಮಗನದ್ದೆ ಕಾರುಬಾರು. ಟೇಪು ಕಟ್ ಮಾಡುವುದು, ದೇವಸ್ಥಾನ, ಮಸೀದಿಗಳಿಗೆ ಸಹಾಯಧನ ನೀಡುವುದು ಇತ್ಯಾದಿಗೆ ಸೀಮಿತ. ಶಾಸನ ಸಭೆಯಲ್ಲಿ ಗರ್ಜಿಸಬೇಕಿದ್ದ ಶಾಸಕ ಉಳ್ಳಾಲದ ಮತದಾರರಿಗೆ ಕರ್ನಾಟಕದ ಜನತೆಗೆ ನಿಷ್ಪ್ರಯೋಜಕರಾದರು. ಈ ದುಸ್ಥಿತಿಗೆ ಜನರು ತಿಲಾಂಜಲಿ ಹಾಕಬೇಕಿದೆ. ಶಾಸನ ಸಭೆಗಳು ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಗರಡಿಯಾಗಬೇಕು. ಜನಪರ ಕಾನೂನು ರಚನೆಯಾಗಲು ವೇದಿಕೆಯಾಗಬೇಕು. ಶಾಸಕರು ಲವಲವಿಕೆಯಿಂದ ಸ್ಪಂದಿಸಿದರೆ ಮಾತ್ರ ಜನತೆ ಓಟ್ ನೀಡಿದ್ದಕ್ಕೆ ಸಾರ್ಥಕ.

ಅಪಾರ ದುಡ್ಡಿನ ರಣರಂಗವಾಗಿ ಮಾರ್ಪಡಲು ಈಗಾಗಲೇ ಉಳ್ಳಾಲ ಕ್ಷೇತ್ರ ಸಜ್ಜಾಗಿದೆ. ಆದರೆ ದುಡ್ಡಿನ ಕಿತಾಪತಿ ಬಹಿರಂಗವಾಗಿ ಪ್ರಕಟಿಸಲು ಚುನಾವಣಾ ನೀತಿ ಸಂಹಿತೆಯ ತಡೆ ಇದೆ. ಆದರೂ ಒಳಗೊಳಗೆ ದುಡ್ಡು ಪ್ರವಾಹೋಪಾದಿಯಲ್ಲಿ ಇಷ್ಟೊಂದು ದುಡ್ಡು ಹರಿದಾಡುತ್ತಿದೆ. ಕಾಂಗ್ರೆ, ಬಿಜೆಪಿ, ಜೆಡಿ(ಎಸ್)ಗೆ ಇಷ್ಟೊಂದು ದುಡ್ಡು ಇಲ್ಲಿಂದ ಬಂದಿದೆ? ಯಾಕಾಗಿ ಬಂದಿದೆ ಈ ದುಡ್ಡು. ಜನ ಪ್ರಶ್ನಿಸಬೇಕಾಗಿದೆ.

ಕೋಮು ಗಲಭೆಯ ರಾಜಕೀಯ

ಉಳ್ಳಾಲ ಕ್ಷೇತ್ರವು ಹಲವು ಬಾರಿ ತೀವ್ರ ಕೋಮುಗಲಭೆಗೆ, ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಗೆ ಒಳಗಾಗಿದೆ. 2006 ರ ಅಕ್ಟೋಬರ್ ತಿಂಗಳಲ್ಲಿ ಅದು ಕೋಮು ಗಲಭೆಗೆ ನಲುಗಿದೆ. ಸಂಘ ಪರಿವಾರ ತಿಳಿದೇ ಈ ಗಲಭೆಯನ್ನು ಹುಟ್ಟು ಹಾಕಿದೆ. ಶಾಸಕರು ಸಾಯುತ್ತಾರೆ, ಚುನಾವಣೆ ಬರುತ್ತೆ, ಬಿಜೆಪಿ ಗೆಲ್ಲಬೇಕು. ಹಿಂದೂ ಮುಸ್ಲಿಂ ಮತ ವಿಭಜನೆಯಾದರೆ ಬಿಜೆಪಿಗೆ ಹಿಂದುಗಳ ಓಟ್ ಸಿಗಲು ಸಾಧ್ಯ ಎಂಬ ಕುತಂತ್ರ ರಾಜಕೀಯ. ಕಾಂಗ್ರೆ ಏಕೈಕ ಜಾತ್ಯಾತೀತ (ಬಲಿಷ್ಠ) ಪಕ್ಷ ಎನ್ನುತ್ತಿದ್ದ ಅದರ ಮುಖಂಡರಿಂದ ಹಿಡಿದು ಕಾರ್ಯಕರ್ತರ ತನಕ ಹಿಂದು ಮುಖಂಡರು ಹಿಂದುಗಳಾದರು, ಮುಸ್ಲಿಂ ಮುಖಂಡರು ಮುಸ್ಲಿಂರಾದರು. ಅದನ್ನು ಕೋಮುವಾದದತ್ತ ವಾಲಿಸಲು ತಾವೇ ತುಪ್ಪ ಸುರಿದರು. 'ಕೆಎಫ್‌ಡಿ' ಎಂಬ ಮುಸ್ಲಿಂ ಮೂಲಭೂತವಾದಿ ಸಂಘಟನೆಗೆ ಪ್ರಚೋದನೆ, ಪ್ರೋತ್ಸಾಹವನ್ನು ನೀಡಿ 'ಶಿಖಂಡಿ'ಗಳಾದರು. ಕುತ್ತಾರು ಎಂಬ ಪ್ರದೇಶದಲ್ಲಿ ಸದಾ ಜಾತ್ಯಾತೀತ ನೆಲೆಯಲ್ಲಿ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಹೋರಾಡುತ್ತಿದ್ದ ಕಮ್ಯುನಿಸ್ಟ್ ಹಿಂದುಗಳ ಅಂಗಡಿಗಳಿಗೆ ಬೆಂಕಿ ಇಕ್ಕಿದರು. ಹೇಗಿದೆ ಕಾಂಗ್ರೆಸ ಜಾತ್ಯಾತೀತ ಧೋರಣೆ? ಸಂಘ ಪರಿವಾರದವರು ಈ ಘಟನೆಯಿಂದ ಲಾಭಪಡೆಯಲು ಪ್ರಯತ್ನ ಪಟ್ಟರು. ಕಮ್ಯುನಿಸ್ಟರು ಅವರಿಗೆ ಸೊಪ್ಪು ಹಾಕಲಿಲ್ಲ. ನಿಮ್ಮ ಕೋಮುವಾದವೇ ಇದಕ್ಕೆಲ್ಲ ಕಾರಣವೆಂದು ಬೊಟ್ಟು ಮಾಡಿ ತೋರಿಸಿ ಸಿಪಿಐ(ಎಂ) ಧೋರಣೆಯನ್ನು ಎತ್ತಿ ಹಿಡಿದರು. ಅಲ್ಪಸಂಖ್ಯಾತರ ಮನೆಗೆ ದಾಳಿ ಆಗುವಾಗ ಅವರ ಮನೆಗಳಿಗೆ ಗುಂಪಾಗಿ ಹೋಗಿ ರಕ್ಷಣೆ ನೀಡಿದರು. ಜಾತ್ಯಾತೀತ ವ್ಯಕ್ತಿಗಳನ್ನು ಅಣಿ ನೆರೆಸಿ ಕೋಮು ಗಲಭೆ ಹರಡದಂತೆ ತಡೆ ಒಡ್ಡಿದರು. ಶಾಂತಿ ಸಭೆ, ಪಾದಯಾತ್ರೆ ನಡೆಸಿದರು. ಹಿಂದೂ ಧರ್ಮ ಅಂದರೇನು? ಹಿಂದುತ್ವ ಅಂದರೇನು? ಎಂಬುದನ್ನು ಸ್ಪಷ್ಟವಾಗಿ ಜನರಿಗೆ ವಿವರಿಸಲು ಪ್ರಯತ್ನಿಸಿದರು. ಉಳ್ಳಾಲ ಕ್ಷೇತ್ರ ವ್ಯಾಪಿಯಾಗಿ ಸಂಘ ಪರಿವಾರ 'ಹಿಂದೂ ಸಮಾಜೋತ್ಸವ'ದ ಹೆಸರಿನಲ್ಲಿ ಕೇಸರೀಕರಣಗೊಳಿಸಿದಾಗ ಈ ಕಾಂಗ್ರೆ ಜೆಡಿ(ಎಸ್)ಗಳು ಅದರೊಂದಿಗೆ ಸೇರಿಕೊಂಡರು. ಜಾತ್ಯಾತೀತ ಧೋರಣೆಯನ್ನು ಗಾಳಿಗೆ ತೂರಿದರು. ಅದರ ಫಲವನ್ನು ಈ ಚುನಾವಣೆಯಲ್ಲಿ ಉಣ್ಣುವ ಸ್ಥಿತಿ ನಿರ್ಮಾಣವಾಗಿದೆ. ನಾಗರಾಜ ಶೆಟ್ಟಿ ಎಂಬ ಮೋದಿ ಶಿಷ್ಯ ಉಸ್ತುವಾರಿ ಸಚಿವನಾಗಿ ಪೋಲೀಸ್ ಇಲಾಖೆಯನ್ನು ಉಪಯೋಗಿಸಿ ಇಡೀ ಉಳ್ಳಾಲ ದರ್ಗಾದ ಬಳಿ ಇರುವ ರಸ್ತೆ ಬದಿಯ ಮನೆ ಮಟ್ಟುಗಳಿಗೆ ನುಗ್ಗಿ ಕನ್ನಡಿ, ಬಾಗಿಲು ಒಡೆದು ಭಯದ ವಾತಾವರಣ ಸೃಷ್ಟಿಸಿದಾಗ ಕಾಂಗ್ರೆ ಶಾಸಕ, ಅವರ ಮಗ ಸಂಪೂರ್ಣ ಮಾಯ. ರಾಜಕೀಯವಾಗಿ ಎದುರಿಸಲು ಕಾಂಗ್ರೆ ಸಂಪೂರ್ಣ ವಿಫಲ. ಜನ ಕೇಳುತ್ತಿದ್ದಾರೆ ಈ ಕಾಂಗ್ರೆ ಬೇಕಾ?

ದುಡಿಯುವ ವರ್ಗದ ಪಕ್ಷವಾದ ಸಿಪಿಐ(ಎಂ) ಉಳ್ಳಾಲ ವಿಧಾನಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕ ಚಳುವಳಿಯ ಪ್ರಭಾವಿ ನಾಯಕ, ಪಕ್ಷದ ರಾಜ್ಯ ಸಮಿತಿ ಸದಸ್ಯ, ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ಸದಸ್ಯ, ಜಿಲ್ಲಾ ಕಾರ್ಯದರ್ಶಿ ಹಾಗೂ ಪಕ್ಷದ ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಜೆ.ಬಾಲಕೃಷ್ಣಶೆಟ್ಟಿಯವರು ಅಭ್ಯರ್ಥಿಯಾಗಿರುತ್ತಾರೆ. ಚುನಾವಣೆ ಕಣದಲ್ಲಿ ಬಿರುಸಿನ ಪ್ರಚಾರ ಸಿಪಿಐ(ಎಂ) ಪಕ್ಷದಿಂದಲೂ ನಡೆಯುತ್ತಿದೆ.

ಸಿಪಿಐ(ಎಂ) ಕಾರ್ಮಿಕರ ಐಕ್ಯತೆ ಕಾಪಾಡಲು ಪ್ರಯತ್ನ ನಡೆಸಿದೆ. ಮುಸ್ಲಿಂರಲ್ಲಿ ಮೂಲಭೂತವಾದಿಗಳ ಹಿಡಿತ ಅಪಾಯಕಾರಿ ಎಂಬ ಅರಿವು ಮೂಡಿಸಲು ಶ್ರಮಿಸಿದೆ. ಸರಕಾರಿ ಯಂತ್ರವನ್ನು ಕೋಮುವಾದಿಗಳ ಕಪಿಮುಷ್ಠಿಯಿಂದ ಹೊರತರಲು ಪ್ರಯತ್ನಿಸಿದೆ. ಕಮ್ಯುನಿಸ್ಟರು ಕೋಮು ಗಲಭೆ ಸಂಭವಿಸಿದಾಗ ಹಿಂದೂಗಳಾಗದೆ, ಮುಸ್ಲಿಂರಾಗದೆ ಜಾತ್ಯಾತೀತ ವ್ಯಕ್ತಿ, ಶಕ್ತಿಗಳಾಗಿ ಹಿರಿಯ ಕಿರಿಯರನ್ನು ಭೇಟಿಯಾದರು. ನಿರಾಶ್ರಿತರಾದ ಹಿಂದುಗಳ ಛತ್ರಕ್ಕೆ ತೆರಳಿ ಆಹಾರ, ಧನ ಸಹಾಯ ನೀಡುವಲ್ಲಿ ಕೂಡಾ ಹಿಂದೆ ಬೀಳಲಿಲ್ಲ. ಈ ರೀತಿ ರಾಜಕೀಯವಾಗಿ ಕೋಮುವಾದವನ್ನು ಎದುರಿಸಿರುವ ಕಮ್ಯುನಿಸ್ಟ್ ಪಕ್ಷವನ್ನು ಅಲ್ಪಸಂಖ್ಯಾತರು, ಬಹುಸಂಖ್ಯಾತ ಜಾತ್ಯಾತೀತ ಮತದಾರರು ಈ ಬಾರಿ ಬೆಂಬಲಿಸುವ ನಿರೀಕ್ಷೆಯಿಂದ ಈ ಚುನಾವಣಾ ಸ್ಪರ್ಧೆ ನಡೆಯುತ್ತದೆ.


ಕೋಮು ಸಾಮರಸ್ಯದಿಂದ ಸ್ವಾತಂತ್ರ್ಯ ಹೋರಾಟಕ್ಕೆ ರಾಣಿ ಅಬ್ಬಕ್ಕರಂತ ಧೀರ ಮಹಿಳೆ ಕೊಡುಗೆ ನೀಡಿದ ಕ್ಷೇತ್ರ ಉಳ್ಳಾಲ. ದುಡಿದು ಬದುಕುವ ಕಾರ್ಮಿಕರು, ಕೂಲಿಗಾರರು, ರೈತರು, ಮೀನುಗಾರರು ಅಪಾರ ಸಂಖ್ಯೆಯಲ್ಲಿರುವ ಈ ಕ್ಷೇತ್ರ ಎಂದೂ ಕೋಮುಗಲಭೆಗೆ ಅವಕಾಶ ನೀಡದ ಕ್ಷೇತ್ರವಾಗಿತ್ತು. ಆದರೆ ಸಂಘ ಪರಿವಾರ ಪದೇ ಪದೇ ಧಾರ್ಮಿಕ ಸಭೆ, ಕಾರ್ಯಕ್ರಮಗಳಲ್ಲಿ 'ಹಿಂದುತ್ವದ' ಆಕ್ರಮಣಕಾರಿ ಭಾಷಣ, ಹಿಂದೂ ಮುಸ್ಲಿಂರ ಮಧ್ಯೆ ಒಡಕು ಸೃಷ್ಟಿಸುತ್ತಾ ಕೋಮು ಬಣ್ಣ ನೀಡುತ್ತಾ, ಸಂಕುಚಿತ, ಸೂಕ್ಷ್ಮ ವಿಷಯಗಳ ಬಗ್ಗೆ ವೈಭವೀಕರಿಸುತ್ತಾ ಒಂದು ಬಾರಿ ಬಿಜೆಪಿ ಗೆದ್ದಿತು. ಈ ಗುಂಗಿನಲ್ಲಿಯೇ ಇರುವ ಬಿಜೆಪಿ ಸಂಘಪರಿವಾರ ಶ್ರೀರಾಮಚಂದ್ರನ ದೇವಾಲಯ ಹೆಸರಿನಲ್ಲಿ ವಾರ್ಡ್‌ವಾರು, ಬೂತುವಾರು ರಾಜಕೀಯ ನಡೆಸಿದೆ. ಜಾತ್ಯಾತೀತ ಶಕ್ತಿಗಳ ಮೌನವು ಬಹುಸಂಖ್ಯಾತ ಕೋಮುವಾದಿಗಳಿಗೆ ವಿಜೃಂಭಿಸಲು ಅವಕಾಶ ನೀಡಿದೆ ಎಂದರೂ ತಪ್ಪಾಗಲಾರದು.

'ಜನಗಳ ಸಮಸ್ಯೆಗಳ ಪ್ರಸ್ತಾಪವಿಲ್ಲ'

ಬಿಜೆಪಿಯ ಅಭ್ಯರ್ಥಿ ಮಹಾ ಭ್ರಷ್ಟಾಚಾರಿ. ಪಂಚಾಯತ್ ಕಾಮಗಾರಿ ಹೆಸರಿನಲ್ಲಿ ಲಕ್ಷಗಟ್ಟಲೆ ಹಣ ದುರುಪಯೋಗ ಮಾಡಿರುವುದರ ವಿರುದ್ಧ ಪ್ರತಿಭಟನೆಗಳು ಕೂಡಾ ನಡೆದಿದೆ. ಮಾತ್ರವಲ್ಲದೆ ಅಭ್ಯರ್ಥಿ ಚಂದ್ರಶೇಖರ ಉಚ್ಚಿಲ್ ಕೆಲವರಿಗೆ ಪಂಗನಾಮ ಹಾಕಿದ್ದಕ್ಕೆ ಹಲ್ಲೆಗೊಳಗಾಗಿದ್ದಾನೆ ಎಂಬುದು ಕೂಡಾ ಜಗಜ್ಜಾಹೀರವಾಗಿದೆ. ಬಿಜೆಪಿಗೆ ಅಭ್ಯರ್ಥಿಗಳು ಇಂತವರೇ ಬೇಕು. ಆತನ ಪ್ರಚಾರ ವೈಖರಿ ಕೂಡಾ ಈ ರೀತಿ ಇದೆ. 'ನೀವು ಕಮ್ಯುನಿಸ್ಟರಿಗೆ ಮತ ಹಾಕಿದರೆ ಬ್ಯಾರಿಗಳು ಬರುತ್ತಾರೆ. ಆದುದರಿಂದ ಹಿಂದುಗಳು ಕಮ್ಯುನಿಸ್ಟರಿಗೆ ಮತ ಹಾಕಬೇಡಿ' ಶ್ರೀಮಂತ ಕುಳ ಅಬೂಬಕ್ಕರ್. ನಾಟಕಲ್ ಎಂಬುವರನ್ನು ಬಿಜೆಪಿಯ ನಾಗರಾಜಶೆಟ್ಟಿಯವರ ಕುತಂತ್ರದಿಂದ ಜೆಡಿ(ಎಸ್) ಅಭ್ಯರ್ಥಿಯಾಗಿ ನಿಲ್ಲಿಸಲಾಗಿದೆ ಎಂಬ ಪ್ರಚಾರ ಕೂಡ ಇದೆ. ಕಾಂಗ್ರೆಗೆ ಬೀಳುವ ಅಲ್ಪಸಂಖ್ಯಾತ ಓಟನ್ನು ಒಡೆಯುವ ತಂತ್ರ ಮಂಗಳೂರಿನ ಮೋದಿಯದ್ದಾಗಿದೆ ಎಂಬ ಆರೋಪ ಕೇಳಿ ಬರುತ್ತಿದೆ. ಸಮ್ಮಿಶ್ರ ಸರಕಾರದ ಪಾಲುದಾರರು ಓಟ್‌ಗಾಗಿ ಆರೋಪ ಪ್ರತ್ಯಾರೋಪಗಳನ್ನು ನಡೆಸುತ್ತಿಲ್ಲ. ಎರಡು ಪಕ್ಷಗಳು ಕಾಂಗ್ರೆ ಮತ್ತು ಕಮ್ಯುನಿಸ್ಟರನ್ನು ಮಾತ್ರ ಟೀಕಿಸುವುದು. ಒಂದು ಕಾಲದಲ್ಲಿ ಕಮ್ಯುನಿಸ್ಟರನ್ನು ಆಯ್ಕೆ ಮಾಡುತ್ತಿದ್ದ ಮತದಾರರು ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ರಾಜಕೀಯಕ್ಕೆ ತಿಲಾಂಜಲಿ ನೀಡಿ, ಕೇರಳದ ಮಂಜೇಶ್ವರದ ಮತದಾರರಂತೆ ಮಾರ್ಕ್ಸಿಸ್ಟ್ ಪಕ್ಷವನ್ನು ಗೆಲ್ಲಿಸುವುದು ಅಗತ್ಯ.

ಇದು ಕುಡಿಯುವ ನೀರಿಗೆ ಹಾಹಾಕಾರವಿರುವ ಕ್ಷೇತ್ರ. ಬಡ ಜನರಿಂದ ರೇಷನ್ ಕಿತ್ತುಕೊಂಡ ಸರಕಾರ, ಬಡ ಜನರು ಕೇರಿಗಳಲ್ಲಿ ದಿನಾ ಕತ್ತಲೆಯಲ್ಲಿ ಕಳೆಯುತ್ತಿದ್ದಾಗ ಸ್ಪಂದಿಸದ ಉಸ್ತುವಾರಿ ಸಚಿವರು ಚುನಾವಣೆ ಘೋಷಣೆ ಆದ ತರುವಾಯ ಮೆಸ್ಕಾಂ ಅಧಿಕಾರಿಗಳಿಗೆ ಬೆದರಿಕೆ ಹಾಕಿ ವಿದ್ಯುತ್ ದೀಪ ಅಳವಡಿಕೆ ಮಾಡಿಸಿದ್ದಾರೆ. ಕಡಲು ಕೊರೆತ ಈ ಪ್ರದೇಶದ ಜನತೆಗೆ ಶಾಪ ಎಂದಾದರೆ ಆಳುವ ನಾಯಕರಿಗೆ ಚುನಾವಣಾ ಸಂದರ್ಭದಲ್ಲಿ ಮಾತ್ರ ಆಶ್ವಾಸನೆ ನೀಡುವ ವಿಷಯ; ಲಕ್ಷಗಟ್ಟಲೆ ಸರ್ಕಾರದ ಹಣ ವೆಚ್ಚ ಮಾಡಿ ಮನುಷ್ಯರಿಗೆ ವಾಸ ಮಾಡಲು ಸಾಧ್ಯವಾಗದ ಹೊಸ ಗೂಡಂಗಡಿ ಮನೆಗಳು ಸ್ಮಶಾನವಾಗಿ ಮಾರ್ಪಾಡಾಗಿವೆ. ಹಲವಾರು ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ವಾಸವಾಗಿ ಜೀವನ ನಡೆಸುತ್ತಿರುವ ನಾಗರೀಕರಿಗೆ ಹಕ್ಕು ಪತ್ರವೇ ನೀಡಿಲ್ಲ, ಮೀನುಗಾರರಿಗೆ ಮೂಲಭೂತ ಸೌಲಭ್ಯವನ್ನೇ ನೀಡದೆ ಸಮಸ್ಯೆಗಳ ದಿಕ್ಕು ತಪ್ಪಿಸಲಾಗುತ್ತಿದೆ. ಬೆಂಗರೆ ಎಂಬ ದ್ವೀಪ ಕುಗ್ರಾಮವೇ ಆಗಿದೆ. ಈ ಸಮಸ್ಯೆಗಳು ಚುನಾವಣಾ ವಿಷಯವಾಗುತ್ತಿಲ್ಲ ಇದು ದುರಂತ.

ಸಿಪಿಐ(ಎಂ) ಅಭ್ಯರ್ಥಿ ಜೆ.ಬಾಲಕೃಷ್ಣ ಶೆಟ್ಟಿ



ಸದಾ ನಗುಮುಖದ ಬಡ ಜನತೆಯ ಪಕ್ಷಪಾತಿ ಸಿಪಿಐ(ಎಂ) ಪಕ್ಷಕ್ಕೆ ತನ್ನನ್ನು ಸಮರ್ಪಿಸಿರುವ ನಾಯಕ ಜೆ.ಬಾಲಕೃಷ್ಣಶೆಟ್ಟಿ ಈ ಬಾರಿ ಉಳ್ಳಾಲ ವಿಧಾನಸಭಾ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ.

ಯುವಜನ, ಕಾರ್ಮಿಕ, ಮಧ್ಯಮವರ್ಗದ ಜನರೊಂದಿಗೆ ಬೆರೆಯುತ್ತಿರುವ ಜೆ.ಬಾಲಕೃಷ್ಣ ಶೆಟ್ಟಿ ಯವರು ಆಟೋರಿಕ್ಷಾ ಚಾಲಕರ ಸಂಘಟಕನಾಗಿ ಅವರಿಗಾಗಿ ದುಡಿಯುತ್ತಾ, ಬೀಡಿ ಕಾರ್ಮಿಕ ಹಲವಾರು ಸಮಸ್ಯೆಗಳ ಬಗ್ಗೆ ಮನಗಂಡು ಬೀಡಿ ಕಾರ್ಮಿಕರನ್ನು ಸಂಘಟಿಸಿರುವುದು ಮಾತ್ರವಲ್ಲದೆ ಬೀಡಿ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಲಗಾವು ಆಗಬೇಕೆಂಬ ಸಿಐಟಿಯುನ ಹೋರಾಟದ ಭಾಗವಾಗಿ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಏಳು ದಿನಗಳ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಿ ಯಶಸ್ವಿ ಹೋರಾಟಕ್ಕೆ ನೇತೃತ್ವ ನೀಡಿದ್ದುದರಿಂದ ಇಂದು ಬೀಡಿ ಕಾರ್ಮಿಕರು ಪ್ರಾವಿಡೆಂಟ್ ಫಂಡ್, ಪಿಂಚಣಿ ಪಡೆಯು ವಂತಾಯಿತು. ಅಸಂಘಟಿತ ಬೀಡಿ ಕಾರ್ಮಿಕರಿಗೆ ಹೆರಿಗೆ ಭತ್ಯೆ, ತುಟ್ಟಿ ಭತ್ಯೆ, ಇನ್ನಿತರ ಸವಲತ್ತುಗಳಲ್ಲದೆ ಕೂಲಿ ಹೆಚ್ಚಳಕ್ಕಾಗಿ ನಿರಂತರ ಹೋರಾಟಕ್ಕೆ ನೇತೃತ್ವ ನೀಡಿದ ಸಂಗಾತಿ.

ಕೆಂಬಾವುಟದ ನೇತೃತ್ವದ ಹೋರಾಟದಲ್ಲಿ ಕಾರ್ಮಿಕನಾಗಿ, ಕಾರ್ಯಕರ್ತನಾಗಿ, ನಾಯಕನಾಗಿ ದುಡಿದಿರುವ ಶೆಟ್ಟಿಯವರು ಪ್ರಸ್ತುತ ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ, ರಾಜ್ಯ ಸಮಿತಿ ಸದಸ್ಯ, ಅಖಿಲ ಭಾರತ ಜನರಲ್ ಕೌನ್ಸಿಲ್‌ನ ಸದಸ್ಯರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಷನ್‌ನ ಅಧ್ಯಕ್ಷರಾಗಿರುತ್ತಾರೆ. ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುತ್ತಾರೆ. ನಾಗುರಿ ವ್ಯವಸಾಯ ಬ್ಯಾಂಕ್‌ನ ನಿರ್ದೇಶಕರಾಗಿರುವ ಇವರು ಸದಾ ಬಡ ಜನರ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಜೆ.ಬಾಲಕೃಷ್ಣಶೆಟ್ಟಿಯವರಿಗೆ ಮತ ನೀಡಿ ಜನತೆ ಶಾಸನ ಸಭೆಯಲ್ಲಿ ದುಡಿಯುವ ಜನತೆಯ ದನಿಯನ್ನು ಬಲಗೊಳಿಸಬೇಕಾಗಿದೆ.

ವ್ಯವಸ್ಥೆ

ಅರೆಹೊಟ್ಟೆ ಉಣ್ಣುತ್ತ ದುಡಿವವರು ಕೀಳು
ಆ ದುಡಿತ ಕಸಿದುಂಬ ಮಂದಿಗಳು ಮೇಲು
ಹೃದಯವೇ ಇಲ್ಲದಿಹ ಮಂದಿಗಳು ಕೂಡಿ
ರೂಪಿಸಿದ ಸಮಾಜ ವ್ಯವಸ್ಥೆಯಿದು ನೋಡಿ

- ವಿಡಂಬಾರಿ

ಯುಪಿಎ ಸರ್ಕಾರಕ್ಕೆ ಮೂರು ವರ್ಷ

ಈಡೇರದ ಭರವಸೆಗಳು

ನಿತ್ಯಾನಂದಸ್ವಾಮಿ

ಯುಪಿಎ ಸರ್ಕಾರ ಮೂರು ವರ್ಷಗಳನ್ನು ಪೂರೈಸಿದೆ. 2004ರ ಜನಾದೇಶವನ್ನು ಜಾರಿಗೊಳಿಸುವತ್ತ ಇದು ಸಣ್ಣ ಅವಧಿಯೇನಲ್ಲ. ಸರ್ಕಾರದ ಸಫಲತೆ ಮತ್ತು ಮೂರು ವರ್ಷಗಳ ಅದರ ಸಾಧನೆಯನ್ನು ಅಳೆಯಲು ಅದು ಅಂಗೀಕರಿಸಿದ ಮತ್ತು ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡುತ್ತಿರುವ ಎಡಪಕ್ಷಗಳು ಅನುಮೋದಿಸಿದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವೇ ಅಳತೆಗೋಲು.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭರವಸೆಗಳಿಗೆ ಬದ್ಧವಾಗಿ ಯುಪಿಎ ಸರ್ಕಾರ ನಡೆದುಕೊಂಡಿದೆಯಾ? ಎಡಪಕ್ಷಗಳ ಒತ್ತಡದ ಅಡಿಯಲ್ಲಿ ಅದು ಕೆಲವು ಸಕಾರಾತ್ಮಕ ಕ್ರಮಗಳನ್ನು ಕೈಗೊಂಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ರೂಪಿಸಿ ಜಾರಿಗೆ ತಂದಿದೆ. ಮಾಹಿತಿ ಹಕ್ಕು ಕಾಯ್ದೆ ಯನ್ನು ಪಾಸುಮಾಡಿದೆ. ಬುಡಕಟ್ಟುಗಳ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಅಂಗೀಕರಿಸಲಾಗಿದೆ. ಹಿಂದಿನ ವಾಜಪೇಯಿ ಸರ್ಕಾರದ ಲಂಗುಲಗಾಮು ಇಲ್ಲದ ಖಾಸಗೀಕರಣ ನೀತಿಯನ್ನು ಸ್ವಲ್ಪಮಟ್ಟಿಗಾದರೂ ತಡೆಹಿಡಿಯ ಲಾಗಿದೆ. ಕೆಲವು ರೋಗಗ್ರಸ್ತ ಘಟಕಗಳನ್ನು ಪುನಃಶ್ಚೇತನಗೊಳಿಸುವ ಮೂಲಕ ಸಾರ್ವಜನಿಕ ರಂಗಕ್ಕೆ ಸೀಮಿತವಾಗಿಯಾದರೂ ರಕ್ಷಣೆಯನ್ನು ನೀಡಲಾಗಿದೆ. ಆದರೆ ಸಾರ್ವಜನಿಕ ರಂಗದ ಲಾಭದಾಯಕ ಘಟಕಗಳ ಖಾಸಗೀಕರಣ ಅಥವಾ ಬಂಡವಾಳ ಹಿಂಪಡೆತ ಮಾಡಲಾಗದು ಎಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭರವಸೆ ನೀಡಲಾಗಿದ್ದರೂ, ಅದನ್ನು ಉಲ್ಲಂಘಿಸುವ ಪ್ರಯತ್ನ ಮುಂದುವರೆದಿದೆ.

ಬಗೆಹರಿಸದ ಕೃಷಿ ಬಿಕ್ಕಟ್ಟು

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಪ್ರಮುಖ ಭರವಸೆಗಳು ಭರವಸೆಗಳಾಗಿಯೇ ಉಳಿದಿವೆ. ಈ ಸಲದ ಬಜೆಟ್‌ನಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಲಾಗಿದ್ದರೂ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಲಾಗಿದ್ದ ಒಟ್ಟು ಆಂತರಿಕ ಉತ್ಪಾದನೆಯ ಶೇ.6 ಮತ್ತು ಶೇ.3ರ ಭರವಸೆಯ ಮಟ್ಟಕ್ಕೆ ಅದು ಬರಲೇ ಇಲ್ಲ.

ಮುಂದುವರೆಯುತ್ತಿರುವ ಕೃಷಿ ರಂಗದ ನಿರ್ಲಕ್ಷ ಅತ್ಯಂತ ಗಂಭೀರ ವಿಷಯವಾಗಿದೆ. ರೈತರ ಆತ್ಮಹತ್ಯೆಗಳು, ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ ಮತ್ತು ಅದರ ಪರಿಣಾಮವಾಗಿ ಭಾರತದ ಆಹಾರ ಭದ್ರತೆಗೆ ಅಪಾಯವನ್ನೊಡ್ಡುವ ಆಹಾರದ ತಲಾ ಲಭ್ಯತೆಯ ಕುಸಿತ ಮೊದಲಾದವುಗಳಲ್ಲಿ ವ್ಯಕ್ತವಾಗುತ್ತಿರುವ ಕೃಷಿ ಬಿಕ್ಕಟ್ಟು ಆಳವಾಗುತ್ತಾ ಸಾಗುತ್ತಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮವು ಮುಖ್ಯವಾಗಿ ಗ್ರಾಮೀಣ ಮೂಲ ಸೌಕರ್ಯಗಳಿಗೆ ಹಾಗೂ ನೀರಾವರಿಗಾಗಿ ಸಾರ್ವಜನಿಕ ಹೂಡಿಕೆಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವ ಭರವಸೆಯನ್ನು ನೀಡಿತ್ತು. ಆದರೆ ಅಗತ್ಯ ಮಟ್ಟಕ್ಕೆ ಅದು ಏರಲೇ ಇಲ್ಲ. ರೈತರಿಗೆ ಒದಗಿಸಲಾಗುತ್ತಿರುವ ಸಾಂಸ್ಥಿಕ ಸಾಲ ಹೆಚ್ಚಾಗಿದ್ದರೂ ಇನ್ನೂ ಮೂರರಲ್ಲಿ ಎರಡರಷ್ಟು ರೈತರು ದುಬಾರಿ ಬಡ್ಡಿ ದರಗಳ ಸಾಲಕ್ಕಾಗಿ ಖಾಸಗಿ ಲೇವಾದೇವಿಗಾರರನ್ನು ಅವಲಂಬಿಸುತ್ತಿದ್ದಾರೆ. ರೈತರ ಆತ್ಮಹತ್ಯೆಗಳಿಗೆ ಸಾಲದ ಬಾಧೆಯೇ ಕಾರಣ ಎಂದು ಈಗ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ರೈತರ ಉತ್ಪನ್ನಗಳಿಗೆ ಯೋಗ್ಯ ಮತ್ತು ಲಾಭದಾಯಕ ಬೆಲೆ ದೊರೆಯುವಂತೆ ಮಾಡುವ, ಸರ್ಕಾರ ರೈತರು ಬೆಳೆಯುವ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವ, ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವಾಗ,



ಈ ಸಂದರ್ಭದಲ್ಲಿ ಯುಪಿಎ ಸರ್ಕಾರ ಸ್ವವಿಮರ್ಶೆ ಮಾಡಿಕೊಳ್ಳಬೇಕು. ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಭರವಸೆಗಳ ಈಡೇರಿಕೆಗೆ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲವಾದರೆ ಹೊಳೆಯುವ ಭಾರತ ಮತ್ತು 'ನರಳು ಭಾರತ'ದ ನಡುವಿನ ಅಂತರವನ್ನು ತೊಡೆದು ಹಾಕಲು ಸಾಧ್ಯವಿಲ್ಲ.

ವಿಶೇಷವಾಗಿ ಅಂತರಾಷ್ಟ್ರೀಯ ಬೆಲೆಗಳು ಕುಸಿದಾಗ, ನಮ್ಮ ರೈತರಿಗೆ ರಕ್ಷಣೆ ಒದಗಿಸುವ ಪ್ರಸ್ತಾವಗಳಿದ್ದವು. ಈ ವಿಷಯಗಳಲ್ಲಿ ಗಮನಾರ್ಹವಾದದ್ದೇನೂ ಆಗಿಲ್ಲ. ಪಂಜಾಬಿನ ಗೋಧೀ ಬೆಳೆಯುವ ರೈತರಿಗೆ ಕ್ವಿಂಟಾಲಿಗೆ ಕೇವಲ ರೂ.850 ಕೊಡುವ ಈ ಸರ್ಕಾರ ವಿದೇಶದಿಂದ ಆಮದು ಮಾಡುವ ಗೋಧಿಯನ್ನು ಕ್ವಿಂಟಾಲಿಗೆ ರೂ.1200 ಕ್ಕಿಂತ ಹೆಚ್ಚು ಕೊಟ್ಟು ತರುತ್ತಿದೆ. ರೈತರಿಂದ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವ ಕಾರ್ಯಕ್ರಮವನ್ನು ನಿರ್ಲಕ್ಷಿಸಿರುವುದರಿಂದ ಸಾರ್ವಜನಿಕ ವಿತರಣಾ (ರೇಷನ್) ವ್ಯವಸ್ಥೆ ಹೆಚ್ಚೆಚ್ಚು ಹದಗೆಡುತ್ತಿದೆ. ದೇಶಾದ್ಯಂತ, ವಿಶೇಷವಾಗಿ ಅತ್ಯಂತ ಬಡ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ರೇಷನ್ ವ್ಯವಸ್ಥೆಯನ್ನು ಬಲಪಡಿಸುವ ಭರವಸೆಯನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಲಾಗಿತ್ತು. ಸತತವಾಗಿ ಆಹಾರದ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಧಾನ್ಯ ಬ್ಯಾಂಕುಗಳ ಸ್ಥಾಪನೆ ಮಾಡುವ ಆಶ್ವಾಸನೆ ನೀಡಲಾಗಿತ್ತು. ಆದರೆ ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆ ಗಣನೀಯವಾಗಿ ದುರ್ಬಲಗೊಂಡಿದೆ. ಒಟ್ಟಾರೆಯಾಗಿ ಕೃಷಿ ಬಿಕ್ಕಟ್ಟು ಬಗೆಹರಿಯುವ ಬದಲು ಇನ್ನಷ್ಟು ಭೀಕರವಾಗುತ್ತಿದೆ.

ಸುಧಾರಣೆಗಳೆಂಬ ಮಾಯಾ ಮೃಗ

ಅಸಂಘಟಿತ ವಲಯದ ಕಾರ್ಮಿಕರಿಗೆ ರಕ್ಷಣೆಯನ್ನು ಒದಗಿಸುವ ಕಾಯ್ದೆ, ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರ ಶಾಸನ, ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಲೋಕ್‌ಪಾಲ್ ಮಸೂದೆ, ಕೋಮುಗಲಭೆ ತಡೆಗಟ್ಟುವ ಮಸೂದೆ ಮೊದಲಾದ ಹೊಸ ಶಾಸನಗಳನ್ನು ರೂಪಿಸಿ ಜಾರಿಗೆ ತರುವ ಭರವಸೆಗಳು ಅಧಿಕಾರದ ಅರ್ಧ ಅವಧಿ ಮುಗಿದು ಹೋದರೂ ಜಾರಿಯಾಗಲಿಲ್ಲ.

ಇದಕ್ಕೂ ಹೆಚ್ಚು ಆತಂಕದ ವಿಷಯವೆಂದರೆ, ನವ ಉದಾರವಾದಿ ಸುಧಾರಣೆಗಳೆಂಬ ಮಾಯಾಮೃಗವನ್ನು ಬೆನ್ನುಹತ್ತಿರುವುದು! ಕಳೆದ ಮೂರು ವರ್ಷಗಳಲ್ಲಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ), ವಿಮೆಯಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಳ , ನೌಕರರ ಪೆನ್ಶನ್ ನಿಧಿಯ ಖಾಸಗೀಕರಣ, ಆಂತರಿಕ ಖಾಸಗಿ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳು ವಹಿಸಿಕೊಳ್ಳುವುದು ಮೊದಲಾದವು ಗಳಿಗಾಗಿ ಪ್ರಯತ್ನ ನಡೆಯುತ್ತಲೇ ಇದೆ. ಎಡ ಪಕ್ಷಗಳ ಪ್ರತಿರೋಧ ಇಲ್ಲದೆ ಹೋಗಿದ್ದರೆ, ಈ ಜನ ವಿರೋಧಿ ಕ್ರಮಗಳು ಇಷ್ಟರಲ್ಲಿ ಜಾರಿಯಾಗಿ ಬಿಡುತ್ತಿದ್ದವು. ಈಗಲೂ ಸಹ ದೇಶದ ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ತರುವ ಇಂತಹ ಸುಧಾರಣೆಗಳನ್ನು ಹೇಗಾದರೂ ಮಾಡಿ ಜಾರಿಗೆ ತರಲು ಸರ್ಕಾರ ಭರದಿಂದ ಪ್ರಯತ್ನ ಮಾಡುತ್ತಿದೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ತಾನು ಬದ್ಧವಾಗಿದ್ದೇನೆ ಎಂದು ಯುಪಿಎ ಸರ್ಕಾರ ಆಗಾಗ ಘೋಷಿಸುತ್ತಿದ್ದರೂ ಅದರ ಪ್ರಮುಖ ಅಂಗವಾದ ಯೋಜನಾ ಆಯೋಗವು ಉದಾರೀಕರಣದ ನೀತಿಗಳನ್ನೇ ಅನುಸರಿಸುತ್ತಿದೆ. ಅತ್ಯಂತ ನಿರ್ಣಾಯಕವಾದ ಮೂಲ ಸೌಕರ್ಯಗಳ ಅಭಿವೃದ್ಧಿ ರಂಗದಲ್ಲಿ ಸಾರ್ವಜನಿಕ-ಖಾಸಗಿ ಪಾಲುದಾರಿಕೆ (public-private partnership) ಮಾದರಿ ಇರಲೇಬೇಕೆಂದು ಅದು ಪ್ರತಿಪಾದಿಸುತ್ತದೆ. ಸಾರ್ವಜನಿಕ ರಂಗದ ಯೋಜನೆಗಳಿಗೆ ಖಾಸಗಿ ಹಣವನ್ನು ಪಡೆಯುವ ಹೆಸರಿನಲ್ಲಿ ಸಾರ್ವಜನಿಕ ಹಣವನ್ನು ಖಾಸಗಿ ಲಾಭಕ್ಕೆ ಒದಗಿಸುವುದನ್ನೇ ಪ್ರೋತ್ಸಾಹಿಸುತ್ತದೆ.

ಈ ವಿನಾಶಕಾರಿ ನವ ಉದಾರೀಕೃತ ಸುಧಾರಣೆಗಳಿಗೆ ಯುಪಿಎ ಸರ್ಕಾರ ಗಂಟು ಬಿದ್ದಿರುವುದರಿಂದ ಇಂದಿನ ಹತೋಟಿ ಮೀರಿದ ಹಣದುಬ್ಬರವನ್ನು ನಿಯಂತ್ರಿಸಲು ಅದು ವಿಫಲವಾಗಿದೆ. ದೇಶದಲ್ಲಿ ಈಗ ಹೆಚ್ಚು ಅಭಿವೃದ್ಧಿ ಸಾಧ್ಯವಾಗಿದ್ದು ಅದರ ಪರಿಣಾಮವಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಸರಿದೂಗಲು ಪೂರೈಕೆಯಲ್ಲಿ ಹೆಚ್ಚಳ ಸಾಧ್ಯವಾಗದಿರುವುದೇ ಈ ಹಣದುಬ್ಬರಕ್ಕೆ ಕಾರಣ ಎಂದು ಹಣಕಾಸು ಮಂತ್ರಿ ಚಿದಂಬರಂ ಹೇಳುತ್ತಿದ್ದಾರೆ. ಇದು ಶುದ್ಧ ತಪ್ಪು ವಿಶ್ಲೇಷಣೆ. ಜನರ ಕೈಯಲ್ಲಿ ಹೆಚ್ಚು ಹಣ ಇರುವುದರಿಂದ ಹಣದುಬ್ಬರ ಉಂಟಾಗಿದೆ ಎನ್ನುವ ಅವರ ವಾದ ದಾರಿ ತಪ್ಪಿಸುವ ವಾದವಾಗಿದೆ.

ಹೆಚ್ಚುತ್ತಿರುವ ಗ್ರಾಮೀಣ ಬಡತನ, ಮುಂದುವರೆದಿರುವ ಆತ್ಮಹತ್ಯೆಗಳು, ಜನ ದಿಕ್ಕೆಟ್ಟು ವಲಸೆ ಹೋಗುತ್ತಿರುವುದು ಅಭಿವೃದ್ಧಿಯ ಸಂಕೇತಗಳೇ? ಜನರಿಗೆ ತಿನ್ನಲು ಬ್ರೆಡ್ ಇಲ್ಲದಿದ್ದರೆ ಅವರು ಕೇಕ್ ತಿನ್ನಲಿ' ಎಂದು ಫ್ರಾನ್ಸ್ ಕ್ರಾಂತಿಯ ಸಮಯದಲ್ಲಿ ರಾಣಿ ಹೇಳಿದ ಮಾತನ್ನು ಇದು ನೆನಪಿಸುತ್ತದೆ. ಇಂದು ಹಣದುಬ್ಬರ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿ ಜನಸಾಮಾನ್ಯರನ್ನು ಬಾಧಿಸುತ್ತಿದೆ. ಅಗತ್ಯ ವಸ್ತುಗಳ ಮುಂಗಡ ವ್ಯಾಪಾರವೇ ಈ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಇದನ್ನು ನಿಲ್ಲಿಸದೆ ಹಣದುಬ್ಬರವನ್ನು ತಡೆಗಟ್ಟಲಾಗದು.

ಭ್ರಮನಿರಸನಗೊಳ್ಳುತ್ತಿರುವ ಜನತೆ

ಸರ್ಕಾರದ ವಿಫಲತೆಯಿಂದಾಗಿ ಜನ ಹೆಚ್ಚೆಚ್ಚು ಭ್ರಮನಿರಸನಗೊಳ್ಳುತ್ತಿದ್ದಾರೆ. ಇತ್ತೀಚಿನ ಕೆಲವು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಯುಪಿಎ ಅಂಗಪಕ್ಷಗಳಿಗೆ ಉಂಟಾಗಿರುವ ಸೋಲಿನಲ್ಲಿ ಇದು ವ್ಯಕ್ತವಾಗಿದೆ. ಜನರ ಅತೃಪ್ತಿಯ ಲಾಭ ಪಡೆಯಲು ಬಿಜೆಪಿ ತುದಿಗಾಲ ಮೇಲೆ ಓಡಾಡುತ್ತಿದೆ. ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದದ್ದೇ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಹೊರಗಿಡುವುದಕ್ಕಾಗಿ, ಯುಪಿಎ ಸರ್ಕಾರದ ನೀತಿಗಳಿಂದ ಕೋಮುವಾದಿ ಶಕ್ತಿಗಳಿಗೆ ಲಾಭವಾಗುವಂತಾದರೆ, ಯುಪಿಎ ಸರ್ಕಾರ ತಾನು ಕುಳಿತುಕೊಂಡಿರುವ ಮರವನ್ನು ಬುಡದಿಂದಲೇ ಕಡಿದು ಹಾಕುವ ಕೆಲಸ ಮಾಡಿದಂತೆ!

ಆದ್ದರಿಂದ, ಯುಪಿಎ ಸರ್ಕಾರ ಅಧಿಕಾರದಲ್ಲಿ ಮೂರು ವರ್ಷಗಳ ಅವಧಿಯನ್ನು ಪೂರೈಸುವ ಈ ಸಂದರ್ಭದಲ್ಲಿ ಗಂಭೀರವಾದ ಸ್ವವಿಮರ್ಶೆ ಮಾಡಿಕೊಳ್ಳಬೇಕು. ಮೇಲೆ ಉಲ್ಲೇಖಿಸಲಾದ ಪ್ರಶ್ನೆಗಳಲ್ಲದೆ, ಕೋಮುವಾದಿ ಶಕ್ತಿಗಳನ್ನು, ಮತ್ತು ಆಂತರಿಕ ಭದ್ರತೆಗೆ ಬೆದರಿಕೆ ಒಡ್ಡುತ್ತಿರುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಕೊಟ್ಟ ಭರವಸೆಯಂತೆ ಒಂದು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುಸರಿಸಲು ಸರ್ಕಾರ ದಿಟ್ಟವಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು. ಸರ್ಕಾರದ ಮೇಲೆ ಜನತೆಯ ಒತ್ತಡವನ್ನು ತೀವ್ರಗೊಳಿಸುವ ಮತ್ತು ವ್ಯಾಪಕ ಗೊಳಿಸುವ ಮೂಲಕ ಮಾತ್ರ ಅದರ ಭರವಸೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯ ಮತ್ತು ಆ ಮೂಲಕ ಮಾತ್ರ 'ಹೊಳೆಯುವ' ಭಾರತ ಹಾಗೂ 'ನರಳುವ' ಭಾರತದ ನಡುವಿನ ಅಂತರವನ್ನು ತೊಡೆದು ಹಾಕಲು ಸಾಧ್ಯ. ■

ಇದು ನಿಮಗೆ ಗೊತ್ತೆ?

ದೇಶದಲ್ಲಿ ಪ್ರತಿ ಏಳು ನಿಮಿಷಕ್ಕೊಬ್ಬ ಗರ್ಭಿಣಿ ಸಾವು

ವೈದ್ಯಕೀಯ ವಿಜ್ಞಾನ ಇಷ್ಟು ಮುಂದುವರೆದಿದ್ದರೂ ಗರ್ಭಾವಸ್ಥೆಗೆ ಸಂಬಂಧಿಸಿದ ತೊಂದರೆಗಳಿಂದಾಗಿ ದೇಶದಲ್ಲಿ ಪ್ರತಿ ಏಳು ನಿಮಿಷಕ್ಕೆ ಒಬ್ಬ ಮಹಿಳೆ ಸಾವಿಗೆ ಶರಣಾಗುತ್ತಿದ್ದಾಳೆ. ಇತ್ತೀಚೆಗೆ ಲೋಕಸಭೆಯಲ್ಲಿ ಸ್ವತಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಪನಬಾಕ ಲಕ್ಷ್ಮಿ ಈ ವಿಷಯ ತಿಳಿಸಿದ್ದಾರೆ. ಪ್ರತಿವರ್ಷ 77 ಸಾವಿರ ಗರ್ಭಿಣಿಯರ ಸಾವು ಸಂಭವಿಸುತ್ತಿದೆ. ಇದರಲ್ಲಿ ಹೆರಿಗೆ ಸಮಯದಲ್ಲಿ ಉಂಟಾಗುವ ಸಾವಿನ ಸಂಖ್ಯೆಯೂ ಬೃಹತ್ ಸಂಖ್ಯೆಯಲ್ಲಿದೆ. ಈ ಸಾವುಗಳು ಹೆಚ್ಚಾಗಿ ಸಂಭವಿಸುವುದು ಹಳ್ಳಿಗಳಲ್ಲಿ.

ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗಿರುವ ನೀತಿಗಳನ್ನು ಬದಲಾಯಿಸದೇ ಆಡಳಿತ ಪ್ರಜಾಸತ್ತಾತ್ಮಕ ಗೊಳಿಸದೇ ಊರೂರುಗಳಲ್ಲಿ ಮಲಗಿ ಎದ್ದರೆ ಸಮಸ್ಯೆ ನೀಗುವುವೇ? ಮುಖ್ಯಮಂತ್ರಿಗಳ ವಾಸ್ತವ್ಯದ ವಾಸ್ತವವೇನು?



ಗ್ರಾಮ ವಾಸ್ತವ್ಯ CM ಸ್ಟಂಟ್

ಎಸ್.ವೈ.ಗುರುಶಾಂತ್

ಕರುನಾಡಿನ ಮಣ್ಣಿನಲ್ಲೊಂದು ಊರು ಹಂದಿಗೋಡು. ಈ ಊರಿನ ಹೆಸರು ಗೊತ್ತಿರುವುದೇ ಒಂದು ವಿಚಿತ್ರ ರೋಗದಿಂದ. ಅದಕ್ಕೆ 'ಹಂದಿಗೋಡು ಖಾಯಿಲೆ' ಎಂದೇ ಕರೆಯುತ್ತಾರೆ. ಎಲ್ಲಾ ಹಳ್ಳಿಗಳಂತೆ ಶಿವಮೊಗ್ಗದ ಈ ಹಳ್ಳಿಯು ಒಂದು ಕುಗ್ರಾಮವೇ. ಇಲ್ಲಿ ಸರಿಯಾದ ರಸ್ತೆಯಿಲ್ಲ, ಕುಡಿಯಲು ನೀರಿಲ್ಲ, ಕೈಗೊಡುವ ವಿದ್ಯುತ್ - ಇದ್ದರೂ ಸಂಪರ್ಕ ಪಡೆದುಕೊಳ್ಳಲಿಕ್ಕಾಗದ ಜನ. ಶುಚಿತ್ವ ಎಷ್ಟಿದೆಯೋ ಅದೇ! ಊರಿಗೊಂದು ಕೇರಿ ಇದ್ದೇ ಇದೆ. 26 ದಲಿತರ ಮನೆಗಳು, ಅಸ್ಪೃಶ್ಯತೆಯ ಮುಳ್ಳ ಬೇಲಿಯ ಮನೆಗಳಲ್ಲಿ ಬಂಧಿಸಲ್ಪಟ್ಟಿವೆ. ಮೇಲಾಗಿ ಈ ಕೇರಿಯ ಜನಕ್ಕೆ ಹಂದಿಗೋಡು ರೋಗ ಹೆಚ್ಚು. ಆ ಕಾರಣದಿಂದಲೂ ಚುಚ್ಚು ಮಾತುಗಳು, ಅಂತರ ಇನ್ನಷ್ಟು.... ಕೆಲವರಿಗೆ ಅಷ್ಟಿಷ್ಟು ಜಮೀನಿದೆ, ಬಹಳಷ್ಟು ಜನಕ್ಕೆ ಕೂಲಿ-ನಾಲಿಯೇ ಗಂಜಿ ಗಳಿಕೆಯ ಸಾಧನ - ಅದೂ ರಟ್ಟೆಯಲ್ಲಿ ಕಸುವಿದ್ದರೆ.

ಜಾತ್ರೆಯೋ ಜಾತ್ರೆ

ಇಂತಹ ಒಂದು 'ಮಾದರಿ ಹಳ್ಳಿ'ಯಲ್ಲಿ ಇತ್ತೀಚೆಗೆ ಮೇ 17 ರಂದು ಮಿಂಚಿನ ಸಂಚಾರವಾಯಿತು. ಈ ಬೆಳಕಿನಲ್ಲಿ ಸಮಸ್ಯೆಗಳು ಕಾಣತೊಡಗಿದವು. ಇದನ್ನು ಅರಿಯಲೆಂದೇ ನಾಡಿನ 'ದೊರೆ' (ಮಾಧ್ಯಮಗಳ ಪರಾಕು ಪದ) ಮೇ 18 ರಂದು ಖುದ್ದಾಗಿ ಅಲ್ಲಿಗೆ ಬಂದು ಕಷ್ಟಸುಖ ಅರಿತು ಪರಿಹಾರ ನೀಡಲಿದ್ದಾರೆ; ಬರುತ್ತಿದ್ದಾರೆ... ಬರುತ್ತಿದ್ದಾರೆ' ಎಂದು ಸಾರಿದರು. ರಸ್ತೆಗಳು ರಿಪೇರಿಯಾದವು, ಬೀದಿ ಬೆಳಗಿತು, ಕಸವನ್ನು ಹಿಂದಕ್ಕೆ ತಳ್ಳಿ - ತಳಿರು ತೋರಣ ಕಟ್ಟಲಾಯಿತು. ಸಿಂಗಾರಗೊಂಡ ಊರಿಗೆ ದೊರೆ - ಕುಮಾರಸ್ವಾಮಿ ಬಂದೇ ಬಿಟ್ಟರು. ಅವರ ಹಿಂದೆ ವಂಧಿಮಾಗಧರು, ಅಧಿಕಾರಿಗಳ ದಂಡು! ಇದು ಜಾತ್ರೆಯೋ ಜಾತ್ರೆ ಎಂಬಂತಹ ಸಂಭ್ರಮ....

ಇದು ಮಾನ್ಯ ಮುಖ್ಯಮಂತ್ರಿಗಳ ರಾತ್ರಿಯಲ್ಲಿ ಗ್ರಾಮ ವಾಸ್ತವ್ಯದ ಕಾರ್ಯಕ್ರಮ. ಬಂದವರಿಗೆ ಉಳಿಯಲು ಜಾಗ ಬೇಡವೇ? ಆರಿಸಿಕೊಂಡಿದ್ದು ಸೀತಮ್ಮನವರ ಮನೆ.. ಈ ಸೀತಮ್ಮ ಬಡವಿ. ಕೂಲಿಕಾರಳ ಮನೆ ಹೇಗಿದ್ದೀತು. ಅಂತಹ ಮನೆಯಲ್ಲಿ



ದೊರೆ ಇರಲಾದೀತೆ? ಅದನ್ನೆಲ್ಲಾ ಅರಮನೆ ಮಾಡಲು ಸೀತಮ್ಮನಿಗೆ ಅಸಾಧ್ಯ, ಹಾಗೆಂದು ಅಧಿಕಾರಿಗಳು ಕೈಕಟ್ಟಿ ಕೂಡದೇ ಮನೆಯ 'ಶೇಪ'ನ್ನು ಬದಲಾಯಿಸಲು 'ಕಾಮಗಾರಿ' ನಡೆಸಿದರು. ವಿಚಿತ್ರವೆಂದರೆ 'ಮು.ಮಂ.' ಊಟ ನೀಡಲು ಸೀತಮ್ಮಳೇನೋ ಸಿದ್ಧವಾಗಿದ್ದಳು. ಆದರೆ ಅಧಿಕಾರಿಗಳು ಬಿಡಲಿಲ್ಲ, ಬೇಡವೆಂದರು 'ದೊರೆ'ಗೆ ಹೊರಗಿನ ಊಟ ಕೊಡಲಾಯಿತು. ಮನೆಗಳಿಗೆ ಮನೆಯೊಡತಿಯನ್ನೇ ಬಿಡಲಿಲ್ಲ ಎಂಬ ಮಾತುಗಳೂ ಕೇಳಿಬಂದವು..... ಮುಖ್ಯಮಂತ್ರಿ ಗ್ರಾಮ ವಾಸ್ತವ್ಯಕ್ಕೆ ಬಂದದ್ದು ಜನರ ಸಮಸ್ಯೆಗಳನ್ನು ಅರಿಯಲು, ಮತ್ತು ತಕ್ಷಣ ಪರಿಹಾರ ಕೊಡಲು. ಆದರೆ ಅಧಿಕಾರಿಗಳು, ಊರ ವಂಧಿ ಮಾಗಧರ ಉತ್ಸಾಹ ಹೇಗಿತ್ತೆಂದರೆ ಹಂದಿಗೋಡಿನಲ್ಲೂ ರಾಜಧಾನಿ 'ಹವಾ' ಸೃಷ್ಟಿಸುವ ತವಕ. ಹೀಗೇಕೆ ಎಂಬ ಪ್ರಶ್ನೆಗೆ ಸಮಜಾಯಿಸಿ, ಸಮರ್ಥನೆಯನ್ನು ಮುಂದಿನೂರಲ್ಲಿ ನೀಡಿದರು ಮುಖ್ಯಮಂತ್ರಿ....

ಬೆಳೆದುನಿಂತ ಬೇಲಿ

ಆ ರಾತ್ರಿ ಊರ ಜನರ ಕಷ್ಟಸುಖಗಳ ಅಹವಾಲು ಹೊತ್ತು ಬಂದವರು ನೂರಾರು ಜನ, ಅರ್ಜಿ ಸ್ವೀಕರಿಸುತ್ತಾ ಸುಸ್ತಾದರು ಮು.ಮಂ.ಗಳು. ನೀಡಿದ್ದು ಭರವಸೆ, ಒಂದೆರೆಡಕ್ಕೆ ಕ್ರಮಗಳು. ಹಂದಿಗೋಡು ರೋಗವನ್ನೇ ಮೂಲೋತ್ಪಾಟನೆ ಮಾಡುವ ಯೋಜನೆಯ ಭರವಸೆ.

ಮುಂದಿನೂರಿಗೆ ಪಾದ ಬೆಳೆಸಿದರು. ಬೀಡುಬಿಟ್ಟಿದ್ದ ಅಧಿಕಾರಿಗಳ ದಂಡು ಅವರ ಹಿಂದೆಯೇ ಹೋಯಿತು, ಹಂದಿಗೋಡು ಮತ್ತೆ ಎಂದಿನಂತಾಯಿತು. ಸೀತಮ್ಮ ಕೂಲಿ ಹುಡುಕಿ ಹೊರಟಳು.... ತೆರೆದಿದ್ದ ಬಾಯಿ, ಕಣ್ಣು ಮುಚ್ಚಿದವು. ಬೇಲಿಗಳೇ ಆಗ ಮಾತನಾಡತೊಡಗಿದವು.

ಇದು ಮುಖ್ಯಮಂತ್ರಿಯಾದ ಮೇಲೆ ಕುಮಾರಸ್ವಾಮಿ ಜನರ ಕಷ್ಟ ಅರಿಯಲೆಂದು ಗ್ರಾಮ ವಾಸ್ತವ್ಯದ ಪ್ರವಾಸವನ್ನು ಆರಂಭಿಸಿದ ಬಳಿಕ 28ನೇ ವಾಸ್ತವ್ಯವಿದು. ಕಳೆದ ವರುಷ ವಾಸ್ತವ್ಯ ಆರಂಭಿಸಿದಾಗ ಅದೊಂದು ಐತಿಹಾಸಿಕ ಘಟನೆ ಎಂಬಂತೆ ಟಿ.ವಿ. ಪತ್ರಿಕೆ ಮಾಧ್ಯಮಗಳು ಬಣ್ಣಿಸಿದವು. ಮೇಲ್ಜಾತಿಗಳ ಮನೆಯಲ್ಲೇ ವಾಸ್ತವ್ಯ ಯಾಕೆ ಎಂಬ ಟೀಕೆಗಳು ವ್ಯಾಪಕವಾಗಿ ಕೇಳಿ ಬಂದಿದ್ದರಿಂದ ದಲಿತರ ಮನೆಯಲ್ಲೂ ಉಳಿಯಲು ಮುಖ್ಯಮಂತ್ರಿಗಳು 'ಮನಸ್ಸು' ಮಾಡಿದರು! ಎಲ್ಲವೂ ಮಾಮೂಲಿನಂತೆ ವ್ಯವಸ್ಥೆ. ರಾತ್ರಿ ಮಲಗಿ ಬೆಳಿಗ್ಗೆ ಎದ್ದು ದೊರೆ ಹಲ್ಲುಜ್ಜಿ ಬಾಯಿ ತೊಳೆಯಲು 'ಬಿಸ್ಲೇರಿ ವಾಟರ್' ಬಳಸಿದರು. ಅಡುಗೆ ಸಿದ್ಧತೆಯನ್ನು ಬ್ರಾಹ್ಮಣ ಅಡುಗೆ ಭಟ್ಟರು ನೋಡಿಕೊಂಡರು. ದಲಿತರ ಮನೆಯಂಗಳದ ಶಾಮೀಯಾನದಲ್ಲಿ ರುಚಿಯಾದ ಭೋಜನವಾಯಿತು.

ಮುಖ್ಯಮಂತ್ರಿಗಳೂ ಹಳ್ಳಿಯ ಕಡೆಗೆ ಹೋಗುತ್ತಿದ್ದಾರೆ. ಹಳ್ಳಿಯ ಜನ ಸಂಕಟಗಳ ಮೂಟೆ ಹೊತ್ತು ಮುಖ್ಯಮಂತ್ರಿಯ ಮನೆ ಬಾಗಿಲಿಗೆ ಬಂದು ಮೊರೆ ಇಡುತ್ತಾರೆ. ಕಾರ್ಮಿಕರು ಬದುಕಲು ಬಿಡಿ ನ್ಯಾಯಕೊಡಿ ಎಂದು ಕೇಳಿ ಹೋರಾಟಕ್ಕೆ ಇಳಿದರೆ, 'ನಿಮಗೆ ಕೊಬ್ಬು ಹೆಚ್ಚಾಗಿದೆ, ಅಂತಾ ಮುಖ್ಯಮಂತ್ರಿಗಳು ದಬಾಯಿಸುತ್ತಾರೆ. ಅಂದರೆ ಹಳ್ಳಿಗಳಲ್ಲಿ ಮಲಗೋದು ಡೈಲಾಗ್ ಹೊಡೆಯೋದು ಬರೀ ರಾಜಕೀಯ ಸ್ಟಂಟೇ?

ಸಿನಿಮಾ ಡೈಲಾಗ್ ಇರಲ್ಲಿಕ್ಕಿಲ್ಲವೇ?

ಇಂತಹ ಭೇಟಿಗಳು ಹಲವು, ಕೆಲವು ವಿಶಿಷ್ಟ ಸಮಸ್ಯೆಗಳಿರುವ ಊರುಗಳಿಗೇನೋ (ವ್ಯವಸ್ಥೆ ಮಾಡುವ ಅಧಿಕಾರಿಗಳಿಗೆ ಅರಿವಿದೆ, 'ದೊರೆ'ಗಿಲ್ಲ)ಅವರು ಹೋಗಿದ್ದಾರೆ, ತಂಗಿದ್ದಾರೆ, ಇದೇ 2007 ರ ಜನವರಿ 24 ರಂದು ಬಾಗಲಕೋಟೆ ಜಿಲ್ಲೆಯ ಇಂಗಳಗಿ ಗ್ರಾಮದಲ್ಲಿ ಏಡ್ಸ್ ಪೀಡಿತ ಕುಟುಂಬದೊಂದಿಗೆ ವಾಸ್ತವ್ಯ ಮಾಡಿದ್ದಾರೆ. ಗೌರವ್ವ ಮಠಪತಿ, ಗಂಡ ಬಸಯ್ಯ, ಮಗ ರುದ್ರಯ್ಯ, ಸೊಸೆ ಶೋಭಾ ಇವರಿಗೆಲ್ಲಾ ಏಡ್ಸ್ ಸೋಂಕು ತಗಲಿದೆ. ಸಾಂತ್ವನ, ಧೈರ್ಯದ ಮಾತು ಹೇಳಿ ಮುಖ್ಯಮಂತ್ರಿಗಳು ಕುಟುಂಬಕ್ಕೆ 25,000 ರೂ. ನೀಡಿದ್ದಾರೆ, ಕುಟುಂಬದ ನಿರ್ವಹಣೆಗೆ ದೊಡ್ಡ ಮಗ ಶಿವಾನಂದನಿಗೆ ಒಂದು ನೌಕರಿ ಕೊಡ್ರೀ ಎಂದಾಗ ಸಕ್ಕರೆ ಕಾರ್ಖಾನೆಯಲ್ಲಿ ಉದ್ಯೋಗ ಕೊಡಿಸುವ ಭರವಸೆ ನೀಡಿದ್ದಾರೆ. 'ಈ ಮಣ್ಣಿನ ಮನೆ ನನ್ನ ಅರಮನೆಗಿಂತ ಶ್ರೇಷ್ಠ' ಎಂದೆಲ್ಲಾ ಹೇಳಿಕೆ ನೀಡಿದ್ದಾರೆ!

ಏಡ್ಸ್ ರೋಗದ ಬಗ್ಗೆ ಮುಖ್ಯಮಂತ್ರಿಗಳು ಹೀಗೆಲ್ಲಾ ಜಾಗೃತಿ - ಸಾಂತ್ವನ ಹೇಳುವುದು ಸಹಜ. ಆದರೆ ಈ 'ವಾಸ್ತವ್ಯ ಪ್ರಹಸನ' ಮುಗಿದು ಸಿ.ಎಂ. ಬಂದುಹೋದ ಬಳಿಕ 'ನಮನ್ನು ಜನ ಅಸ್ಪೃಶ್ಯರಂತೆ ನೋಡತೊಡಗಿದ್ದಾರೆ, ನಮ್ಮ ಮನೆಗೆ ಹೆಣ್ಣು ನೀಡುವುದಾಗಲೀ, ಪಡೆಯುವುದಾಗಲೀ ಹೇಂಗಾ... " ಎಂದು ಅಳಲು ತೋಡಿಕೊಂಡದ್ದು ಸನ್ನಿವೇಶದ ಭೀಕರತೆ ತೋರಿಸುತ್ತದೆ. ಇಲ್ಲಿ ಲಾಭವಾದದ್ದು ಯಾರಿಗೆ? ನಷ್ಟವಾದದ್ದು ಯಾರಿಗೆ?.....

ಈ ಗ್ರಾಮ ವಾಸ್ತವ್ಯಕ್ಕೆ ಪ್ರತಿಕ್ರಿಯೆಗಳೂ ಇನ್ನೂ ಭಿನ್ನ ಭಿನ್ನವಾಗಿವೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಚಿಲಕನಟ್ಟಿ ಗ್ರಾಮ ಪಂಚಾಯತ್‌ಗೆ

ಜನ ಹೀಗೇ ಉಳಿದರೆ.....?

ಮೊನ್ನೆ ಬೆಂಗಳೂರಿನ ಮನೆಯಲ್ಲಿ ಅರ್ಜಿ ಸ್ವೀಕರಿಸಿ ಮುಖ್ಯಮಂತ್ರಿಗಳು ಸುಸ್ತಾಗಿ ಹೋದರು. ಪ್ರತಿಬಾರಿಯೂ ಜನತಾದರ್ಶನದಲ್ಲಿ ಅರ್ಜಿ ಹಿಡಿದು ಪರಿಹಾರ ಬಯಸಿ ಬಂದವರ ಸಂಖ್ಯೆ ದಾಖಲೆಯನ್ನು ಸ್ಥಾಪಿಸುತ್ತಿದೆ. ಅದು ಹೆಚ್ಚುತ್ತಲೇ ಇದೆ.

ಜನರ ಅಹವಾಲು ತೀರಾ ಇಷ್ಟೆ. ನಮ್ಮೂರಿಗೆ ರಸ್ತೆ, ದೀಪ, ರೇಷನ್‌ಕಾರ್ಡ್, ತಮಗೊಂದು ವಾಸಿಸಲು ಮನೆ, ಒಂದು ಉದ್ಯೋಗ, ವ್ಯವಸಾಯಕ್ಕೆ ತುಂಡುಭೂಮಿ, ಸಾಲ, ಅನಾರೋಗ್ಯಕ್ಕೆ ಚಿಕಿತ್ಸೆಗೆ ಸಹಾಯ... ಇವುಗಳನ್ನು ಅವರಿರುವ ಊರಲ್ಲೇ ತಾಲ್ಲೂಕಿನಲ್ಲೇ ಜನಪ್ರತಿನಿಧಿಗಳು ಬಗೆಹರಿಸಬಹುದಿತ್ತಲ್ಲ. ಅಲ್ಲಿ ಇದ್ದೂ ಇಲ್ಲದಂತಿರುವ ಅಧಿಕಾರಿಗಳು ಕ್ಯಾರೆ ಎನ್ನದಿರುವಾಗ ಇಲ್ಲಿಯವರಿಗೂ ಪಾದ ಬೆಳೆಸುತ್ತಾರೆ.

ವಿಚಿತ್ರವೆಂದರೆ ಮುಖ್ಯಮಂತ್ರಿಗಳ ವಾಸ್ತವ್ಯಕ್ಕಾಗಿ ಗ್ರಾಮಗಳತ್ತ ಹೋಗುತ್ತಿದ್ದರೆ ಜನ ರಾಜಧಾನಿಯತ್ತ ಅಹವಾಲು ಹಿಡಿದು ಬರುತ್ತಾರೆ. ಅದು ಧರ್ಮದರ್ಶನದಲ್ಲಿ ಆಗಬಹುದು, ಬೇಡಿಕೆಗಳಿಗಾಗಿ ನಡೆಸುವ, ಮೆರವಣಿಗೆ - ಧರಣಿಗಳಲ್ಲಾಗಬಹುದು. ಇತ್ತೀಚೆಗಂತೂ ಇಂತಹ ಹೋರಾಟಗಳು ಮೆರವಣಿಗೆಗಳಿಲ್ಲದ ದಿನಗಳೇ ಇಲ್ಲ. ಸಾಕಲ್ಲವೇ ಸರ್ಕಾರದ ಜನಪ್ರಿಯತೆ, ಆಡಳಿತಕ್ಕೆ!

ಹಳ್ಳಿಗಳಲ್ಲಿ ನಿಂತು ಸಂಕಷ್ಟ ಪಡುವವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಮುಖ್ಯಮಂತ್ರಿ ಕುಮಾರಸ್ವಾಮಿ, ಬೆಂಗಳೂರಿನ ಕಾರ್ಮಿಕರು, ಅನಿವಾರ್ಯವಾಗಿ ಮುಷ್ಕರಕ್ಕಿಳಿದಾಗ ಮಧ್ಯ ಪ್ರವೇಶಿಸಿ ಬಗೆಹರಿಸಿ ಎಂದು ಕೇಳಿದರೆ ಕಾರ್ಮಿಕರಿಗೆ ಕೊಬ್ಬು ಹೆಚ್ಚಾಗಿದೆ ಎನ್ನುವ ಗೌಡರ ಜನ ಕಾಳಜಿ, ಎಷ್ಟರದ್ದು? ಮಾತಿನಲ್ಲಿ ಜನರ ಪ್ರೀತಿ, ಕೃತಿಯಲ್ಲಿ ಮಾಲೀಕರ ಒಲಿಸುವ ನೀತಿ...

ತಾವು ಹೋದಲೆಲ್ಲಾ ಜನ ಸಾವಿರಾರು ಸಂಖ್ಯೆಯಲ್ಲಿ ಬಂದು ತಮಗೆ ಮನವಿ ಸಲ್ಲಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆ. ಇದರಿಂದ ರಾಜ್ಯದ ಸಾಮಾನ್ಯ ಜನ ಎಷ್ಟೊಂದು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಇವರಲ್ಲಿ ಅನೇಕ ಜನ ಕಣ್ಣೀರು ಹಾಕುತ್ತಾರೆ. ಇನ್ನು ಕೆಲವರು ಮುಖ್ಯಮಂತ್ರಿಗಳ ಕಾಲು ಹಿಡಿಯುತ್ತಾರೆ. ಕುಮಾರಸ್ವಾಮಿ ಅಂತಹ ಪಾಳೆಗಾರಿ ಮನೋಭಾವದ ಮನುಷ್ಯ ಬಡವರ ಕಣ್ಣೀರನ್ನೇ ಬಂಡವಾಳ ಮಾಡಿಕೊಳ್ಳುತ್ತಾರೆ. ಇಂತವರು, ಬಡವರು ಅರ್ಜಿಗಳನ್ನು ಹಿಡಿದುಕೊಂಡು ತಮಗೋಸ್ಕರ ಕಾಯುವುದನ್ನು ಬಯಸುತ್ತಾರೆಯೇ ವಿನಹ ಬಡವರು ಸಂಘಟಿತರಾಗಿ, ತಮ್ಮ ಹಕ್ಕೋತ್ತಾಯ ಮಾಡುವುದನ್ನಲ್ಲ. ಅರ್ಜಿ ಕೊಟ್ಟವರು ಭರವಸೆಯನ್ನು ಪಡೆದು ಹಿಂತಿರುಗುತ್ತಾರೆ. ಭರವಸೆ ಈಡೇರದೆ ಹೋದಾಗ ತಮ್ಮ ಹಣೆಬರಹವನ್ನೇ ಶಪಿಸಿಕೊಳ್ಳುತ್ತಾರೆ. ಜನರ ಪ್ರಜ್ಞೆ ಹೀಗೇ ಉಳಿದರೆ ಕುಮಾರಸ್ವಾಮಿ ಅಂತವರು ವಿಜೃಂಭಿಸದೆ ಇರುತ್ತಾರೆಯೇ?

ಡಿಸೆಂಬರ್ 24, 2006 ರಂದು ವಾಸ್ತವ್ಯಕ್ಕೆ ಬಂದಾಗ ಅಲ್ಲಿ ಜೆಡಿಎಸ್-ಕಾಂಗ್ರೆಸ್ ನಡುವಿನ ರಾಜಕೀಯ ಭಿನ್ನಾಭಿಪ್ರಾಯ ಸ್ಫೋಟಗೊಂಡಿತು. ಕುಮಾರಸ್ವಾಮಿ ಅಭಿಮಾನಿ ಬಳಗವು ಸ್ವಾಗತಿಸಲು ಸಿದ್ಧವಾದರೆ, ಅಂದೇ ಕಾಂಗ್ರೆಸ್ ಪಕ್ಷ ಸಿದ್ಧರಾಮಯ್ಯನವರಿಗೆ ಸನ್ಮಾನ ಕಾರ್ಯಕ್ರಮವಿಟ್ಟುಕೊಂಡು, ಧಿಕ್ಕಾರ ಹೇಳಿತು. ಮಾತ್ರವಲ್ಲ ಈ ವಾಸ್ತವ್ಯಕ್ಕೆ ಸಹಕರಿಸದಿರಲು ನಿರ್ಧರಿಸಿತು. ಕುರುಬರು, ದಲಿತರು ಹೆಚ್ಚಾಗಿರುವ ಈ ಗ್ರಾಮದಲ್ಲಿ ಈ ರೀತಿ ಸ್ವಾಗತ! ಕುಡಿವ ನೀರಿನ ಬೇಡಿಕೆಯನ್ನು ಇಟ್ಟರಾದರೂ ಅದಿನ್ನೂ ದುರಸ್ತಿಯಾಗಬಹುದೇ ಎಂಬ ಪ್ರಶ್ನೆಗೆ ಜನ ನೂಕಲ್ಪಟ್ಟಿದ್ದಾರೆ.

ಇಂತಹ ಗ್ರಾಮ ವಾಸ್ತವ್ಯ ಜನರ ಕಷ್ಟ ಅರಿಯಲು, ಅವುಗಳನ್ನು ಬಗೆಹರಿಸಲು ಸಾಧ್ಯವಾಗಿದೆ ಎಂದೂ, ಆಡಳಿತ ಯಂತ್ರವನ್ನು ಜನರತ್ತ ಕೊಂಡೊಯ್ದಿದ್ದೇನೆಂದು ಮುಖ್ಯಮಂತ್ರಿಗಳು ಹೆಗ್ಗಳಿಕೆಯಿಂದೇನೋ ಹೇಳುತ್ತಾರೆ. ಸಮಸ್ಯೆಗಳ ಮನವಿಗಳು ಸಾವಿರಗಟ್ಟಲೆ ಬಂದಾಗ, ಇವನ್ನು ಪರಿಹರಿಸಲು ಅಸಾಧ್ಯವೆನಿಸಿಯೇ ಏನೋ ಸಮಸ್ಯೆಗಳಿಗೂ ಪರಿಹಾರವಾಗದೇ ಉಳಿದು ಬಿಡುವುದಕ್ಕೂ ಅಧಿಕಾರಿಗಳೇ ಕಾರಣವೆಂದು ಹರಿಹಾಯುತ್ತಾರೆ, ಕೆಲವೊಮ್ಮೆ ಕೆಳಹಂತದ ಅಧಿಕಾರಿಗಳನ್ನು - ಕೆಲವೊಮ್ಮೆ ಐಎಎಸ್ ನಂತಹ ಉನ್ನತ ಅಧಿಕಾರಿಗಳನ್ನು ! ವಾಸ್ತವ್ಯದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈಡೇರದ ಭರವಸೆಗಳೆಂದು ಗೊತ್ತಿದ್ದರೂ ಭರವಸೆ ನೀಡುತ್ತಾ ಹೋಗುವುದಕ್ಕೆ ಗದಗಿನ ತಹಶೀಲ್ದಾರ್ ಬಹಿರಂಗವಾಗಿಯೇ 'ಮುಖ್ಯಮಂತ್ರಿಗಳಿಗೆ ತಲೆ ಇಲ್ಲ, ಬುಡ ಇಲ್ಲ' ಎಂದು ಖಾರವಾಗಿ ಪ್ರತಿಕ್ರಿಯಿಸಿ ಭರವಸೆ ಈಡೇರಿಸಲು ಎಷ್ಟೆಲ್ಲಾ ಹಣಬೇಕು ಎಂಬಿತ್ಯಾದಿ ಆಕ್ಷೇಪ ಎತ್ತಿದರು. ಈ ಮಾತುಗಳ ಸತ್ಯ ಅರಿಯಲಾಗದ 'ಹಾಸನದ ಮರಿಗೌಡರು' ಅಧಿಕಾರದ ಗತ್ತಿನಲ್ಲಿ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದಾರೆ.....


ಮುಖ್ಯಮಂತ್ರಿ ವಾಸ್ತವ್ಯಕ್ಕೆ ಬರುವರೆಂದು ತಿಳಿದಾಗ ಪುಳಕಿತಗೊಳ್ಳುವ ಜನ, ಅವರು ಬಂದು ಹೋದ ಕೆಲವು ವಾರಗಳಲ್ಲಿ ಭ್ರಮನಿರಸನರಾಗಿ ಭೂಮಿಗೆ ಇಳಿಯುತ್ತಾರೆ.

ಇಂತಹ ನಿರೀಕ್ಷೆ ಬೆಲೂನು ಹರಿದು, ಸಹನೆಯ ಕಟ್ಟೆಯೊಡೆದಾಗ ಪ್ರತಿಭಟನೆಗೂ ಇಳಿದ ನಿದರ್ಶನ ಕಣ್ಣೆದುರೇ ಇದೆ. ತೀರಾ ಇತ್ತೀಚೆಗೆ ಸುಗ್ಗನಹಳ್ಳಿ ಗ್ರಾಮಸ್ತರು ಈಡೇರದ ತಮ್ಮ ಬೇಡಿಕೆಗಳ ಬಗ್ಗೆ ಬಹಿರಂಗವಾಗಿಯೇ ಧರಣಿ ನಡೆಸಿದ್ದು ಇದೆ. ಆದರೆ ಗ್ರಾಮವಾಸ್ತವ್ಯದ ಮೂಲಕ ಗಾಂಧೀಜಿಯವರ ರಾಮರಾಜ್ಯದ ಕಲ್ಪನೆ ಸಾಕಾರಗೊಳಿಸುವುದಾಗಿ ಮುಖ್ಯಮಂತ್ರಿಗಳು ಘೋಷಿಸುತ್ತಿರುವುದು ನಿಂತಿಲ್ಲ.

ಜನರ ನಡುವೆ ಬದುಕಬೇಕು, ಕಷ್ಟ ಸುಖ ಅರಿಯಬೇಕು ಎಂಬ ಕುಮಾರಸ್ವಾಮಿ ಬಯಕೆಯನ್ನು ವಿರೋಧಿಸಬೇಕಿಲ್ಲ. ಇದು ಪ್ಯಾಟಿ 'ಹೈ'-ದಗೆ ಅಗತ್ಯವೂ ಇರಬಹುದೇನೋ? ಅಥವಾ ಹಳ್ಳಿಗಳಲ್ಲೇ ಮತದಾರರು ಅಧಿಕವಿರುವಾಗ, ಜೆಡಿ(ಎಸ್) ಅದರ ಹೆಸರಲ್ಲೇ ರಾಜಕಾರಣ ಮಾಡುತ್ತಿರುವಾಗ ಇವೆಲ್ಲಾ ಬೇಕಿರಬಹುದು. ತಾವೊಬ್ಬರೇ ಗ್ರಾಮಗಳಲ್ಲಿ ವಾಸ್ತವ್ಯ ಹೂಡಿದ ದಾಖಲೆಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಅರ್ಥವಿಲ್ಲ. ಈ ಹಿಂದೆ ಕೇಂದ್ರ ಸಚಿವರಾಗಿದ್ದ ಜನಾರ್ಧನ ಪೂಜಾರಿಯವರು 'ಸಾಲಮೇಳ' ನಡೆಸಿ 'ಖ್ಯಾತಿ' ಪಡೆದಿದ್ದರು. (ಎಷ್ಟು ಜನರಿಗೆ ಸಾಲ ಸಿಕ್ಕಿತೋ?) ಹಿಂದೆ ದೇವೇಗೌಡರು ಮುಖ್ಯಮಂತ್ರಿ ಯಾಗಿದ್ದಾಗ ಜಿಲ್ಲೆಗಳಲ್ಲಿ 'ಅರ್ಜಿ ಮೇಳ' ನಡೆಸಿದ್ದರು - ಸ್ವಲ್ಪ ರಾಜಕೀಯ ಲಾಭ ಸಿಕ್ಕಿತ್ತು. ಕಾಲಾನುಕ್ರಮದಲ್ಲಿ ಆ ಅರ್ಜಿಗಳು ಅಲ್ಲೇ ತಿಪ್ಪೆಗೆ ಸಾಗಿಸಲ್ಪಟ್ಟಿದ್ದವು. ಈಗಲೂ ಕುಮಾರಸ್ವಾಮಿ ಹತ್ತಿರ ಹರಿದುಬರುವ ಅರ್ಜಿಗಳಿಗೆ 'ಮೋಕ್ಷ' ದ ಹಾದಿ ಯಾವುದು? ಒಬ್ಬ ಮುಖ್ಯಮಂತ್ರಿ 28 ಸಾವಿರ ಹಳ್ಳಿಗಳಲ್ಲಿ ವಾಸ್ತವ್ಯ ಮಾಡಲಾದೀತೆ? ಈಗಾಗಲೇ ಅಧಿಕಾರದ 15 ತಿಂಗಳು ಕಳೆದಾಗಿದೆ. ಉಳಿದದ್ದು 5 ತಿಂಗಳ ಅಧಿಕಾರ - ಅಂದರೆ 150 ದಿನಗಳು, ಈಗ ಘೋಷಿಸಿದಂತೆ 1200 ಹಳ್ಳಿಗಳನ್ನು

ಪುಟ -10ಕ್ಕೆ

ರಾಷ್ಟ್ರಪತಿ ಸ್ಥಾನ ಎಂದರೆ ಸುಮ್ಮನೇ ಏನಲ್ಲ. ಈ ಸ್ಥಾನದ ಪಾತ್ರ ರಬ್ಬರ್ ಸ್ಟ್ಯಾಂಪ್‌ನಂತಲ್ಲ. ಹಾಗಿದ್ದರೆ ಮತ್ತೇನು?



ನಮಗೆಂಥ ರಾಷ್ಟ್ರಪತಿ ಬೇಕು ?

ಜಿ.ಎನ್.ನಾಗರಾಜ್

ಈಗಾಗಲೇ ಹಲವು ತಿಂಗಳುಗಳಿಂದ ರಾಷ್ಟ್ರಪತಿ ಚುನಾವಣೆಯ ಮಾತು ಆರಂಭವಾಗಿದೆ. ಉತ್ತರ ಪ್ರದೇಶ ಚುನಾವಣೆಯ ಫಲಿತಾಂಶಗಳು ಹೊರಬಿದ್ದ ನಂತರವಂತೂ ರಾಷ್ಟ್ರ ರಾಜಕಾರಣದಲ್ಲಿ ರಾಷ್ಟ್ರಪತಿ ಚುನಾವಣೆಯ ಬಗೆಗಿನ ಚರ್ಚೆ ಮತ್ತಷ್ಟು ಬಿರುಸಾಗಿವೆ. ಹಲವಾರು ಹೆಸರುಗಳು ಕೇಳಿ ಬರುತ್ತಿವೆ. ಪಕ್ಷಗಳ ನಡುವೆ ಸಮಾಲೋಚನೆಗಳು ನಡೆಯುತ್ತಿವೆ.

ಮಾಧ್ಯಮಗಳಲ್ಲಿ ಪತ್ರಿಕೆಗಳಲ್ಲಿ ಚರ್ಚೆ ನಡೆಯುತ್ತಿರುವ ರೀತಿಯನ್ನು ನೋಡಿದರೆ ರಾಷ್ಟ್ರಪತಿಗಳ ಸ್ಥಾನ ಒಂದು ಗೌರವವಾದ ಸ್ಥಾನ, ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಒಂದು ಅಲಂಕಾರಿಕ ಸ್ಥಾನ. ಅದನ್ನು ತುಂಬಲು ಯಾರಾದರೂ ಒಬ್ಬ ಅಲಂಕಾರಿಕ ವ್ಯಕ್ತಿ ಸಾಕು ಎಂಬ ಭಾವನೆ ಹುಟ್ಟುತ್ತದೆ. ಸ್ವಾತಂತ್ರ್ಯ ನಂತರದ ದಿನಗಳಿಂದ ಇಲ್ಲಿಯವರೆಗೂ ಪತ್ರಿಕೆಗಳು ಮೂಡಿಸಿರುವ ಭಾವನೆ ಎಂದರೆ ಅದೊಂದು ರಬ್ಬರ್‌ಸ್ಟಾಂಪ್ ಹುದ್ದೆ. ಅವರಿಗೆ ಸ್ವತಂತ್ರವಾದ ತೀರ್ಮಾನ ತೆಗೆದುಕೊಳ್ಳುವ ಯಾವ ಅಧಿಕಾರವೂ ಇಲ್ಲ. ಸಚಿವ ಸಂಪುಟ ಮಾಡಿದ ತೀರ್ಮಾನಗಳಿಗೆ ಒಂದು ಮುದ್ರೆ ಹಾಕುವುದಷ್ಟೆ ಕೆಲಸ ಎಂದು.

ಆದರೆ ಸಂವಿಧಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಪೂರ್ತಿ ವ್ಯತಿರಿಕ್ತವಾದ, ಬೇರೆಯೇ ಆದ ಚಿತ್ರ ದೊರಕುತ್ತದೆ.

ಭಾರತೀಯ ಸಂವಿಧಾನದ ಪ್ರಕಾರ:



ಕೆ.ಆರ್.ನಾರಾಯಣನ್



ಅಬ್ದುಲ್ ಕಲಾಂ

1. ರಾಷ್ಟ್ರಪತಿಗಳು ಭಾರತದ ಕಾರ್ಯಾಂಗದ ಎಲ್ಲ ಅಧಿಕಾರದ ಮೂಲ ಬಿಂದು. ಎಲ್ಲ ಆಜ್ಞೆಗಳು, ಆದೇಶಗಳು, ಅಧಿಸೂಚನೆಗಳು, ಹೊರಡುವುದು ಇಡೀ ಕೇಂದ್ರ ಸರ್ಕಾರ ಕೆಲಸ ಮಾಡುವುದು ರಾಷ್ಟ್ರಪತಿಗಳ ಹೆಸರಿನಲ್ಲಿಯೇ. 53(1)ನೇ ಪರಿಚ್ಛೇದ

2. ಎಲ್ಲ ಮಿಲಿಟರಿ ಪಡೆಯ ಸರ್ವೋಚ್ಚ (ದಂಡನಾಯಕ) 53(2) ಮಿಲಿಟರಿ ಪಡೆಯ ಮೇಲೆ ಹತೋಟಿ ಎಂದರೆ ಸಾಮಾನ್ಯದ ಮಾತೇ.

3. ಅದೇ ರೀತಿ ರಾಜ್ಯ ಮಟ್ಟದಲ್ಲಿ ಕಾರ್ಯಾಂಗದ ಎಲ್ಲ ಅಧಿಕಾರದ ಮೂಲ ಬಿಂದು ರಾಜ್ಯಪಾಲರು(154ನೇ ಪರಿಚ್ಛೇದ) ಈ ರಾಜ್ಯಪಾಲರು ರಾಷ್ಟ್ರಪತಿಗಳಿಂದ ನಾಮಕಾರಣ ಗೊಳ್ಳುವವರು ಮತ್ತು ರಾಷ್ಟ್ರಪತಿಗಳ ಇಚ್ಛೆ ಇರುವವರೆಗೆ ಮಾತ್ರ ಅವರು ಅಧಿಕಾರದಲ್ಲಿರಬಲ್ಲರು (155 ಮತ್ತು 156(1).

4. ಪ್ರತಿರಾಜ್ಯದ ಹೈಕೋರ್ಟು ನ್ಯಾಯಾಧೀಶರನ್ನು ಹಾಗೂ ದೇಶದ ಸುಪ್ರೀಂಕೋರ್ಟ್ ನ್ಯಾಯಾಧೀಶರನ್ನು ಸರ್ವೋಚ್ಚ ನ್ಯಾಯಾಧೀಶರನ್ನು ನೇಮಿಸುವವರು ರಾಷ್ಟ್ರಪತಿಗಳೇ.

5. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸೇವೆಗಳ ನೇಮಕಾತಿ ಆಯೋಗವನ್ನು ನೇಮಿಸುವವರು ರಾಜ್ಯ ಮಟ್ಟದಲ್ಲಿ ರಾಜ್ಯ ಸೇವೆಗಳ ಆಯೋಗವನ್ನು ನೇಮಿಸುವುದು ರಾಷ್ಟ್ರಪತಿಗಳಿಂದ ನಾಮಕರಣಗೊಂಡ ರಾಜ್ಯಪಾಲರೇ.

ಅಧಿಕಾರದ ಅತೀ ಕೇಂದ್ರೀಕರಣ ರಾಷ್ಟ್ರಪತಿಗಳಲ್ಲಿ

ಪುಟ 12 ಕ್ಕೆ

ರಾಷ್ಟ್ರಪತಿ ಆಯ್ಕೆ ಹೀಗೆ ....

ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಈಗಾಗಲೇ ರಾಜಕೀಯ ಪಕ್ಷಗಳು ಬಿರುಸಿನ ತಯಾರಿ ನಡೆಸಿವೆ. ಮುಂದಿನ ರಾಷ್ಟ್ರಪತಿ ಯಾರು ಎಂಬ ಕುತೂಹಲ ಈಗ ಎಲ್ಲರಲ್ಲೂ. ಆದರೆ, ರಾಷ್ಟ್ರಪತಿ ಆಯ್ಕೆ ಹೇಗೆ, ಈ ಮಾಹಿತಿ ಹೆಚ್ಚಿನವರಿಗೆ ತಿಳಿದಿಲ್ಲ. ಈ ಬಗ್ಗೆ ಮಾಹಿತಿ ನೀಡುವ ಪ್ರಯತ್ನ ಇಲ್ಲಿದೆ.

ನಮ್ಮ ಸಂವಿಧಾನ ಪ್ರಕಾರ ಚುನಾಯಿತ ಜನಪ್ರತಿನಿಧಿಗಳೇ ರಾಷ್ಟ್ರಪತಿಯನ್ನು ಆರಿಸುತ್ತಾರೆ. ಸಂಸತ್ತಿನ ಉಭಯ ಸದನ, ಹಾಗೂ ರಾಜ್ಯ ವಿಧಾನಮಂಡಲದ ಚುನಾಯಿತ ಸದಸ್ಯರು ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನ ಮಾಡುತ್ತಾರೆ. ದೆಹಲಿ ಹಾಗೂ ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಯ ಜನಪ್ರತಿನಿಧಿಗಳು ಆಯ್ಕೆಯಲ್ಲಿ ಭಾಗವಹಿಸುತ್ತಾರೆ. ಆದರೆ ನಾಮ ನಿರ್ದೇಶನ ಸದಸ್ಯರಿಗೆ ಚುನಾವಣೆಯಲ್ಲಿ ಭಾಗವಹಿಸುವ ಅವಕಾಶ ಇಲ್ಲ.

ಮತದಾರರ ಸಂಖ್ಯೆ: ಲೋಕಸಭೆ 543, ರಾಜ್ಯಸಭೆ 233, ವಿವಿಧ ರಾಜ್ಯಗಳ ಶಾಸಕರು 4120, ಒಟ್ಟು 4896. ಪ್ರತಿ ಮತದಾರರ ಮತಗಳ ಸಂಖ್ಯೆ ಇಲ್ಲಿ ಪ್ರಾಮುಖ್ಯತೆ ಪಡೆದಿದೆ. ಮತಗಳಿಗೆ ಇಲ್ಲಿ ಬೇರೆ ಬೇರೆ ಮೌಲ್ಯವಿದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಮತಗಳ ಮೌಲ್ಯಕ್ಕೆ ಸಂವಿಧಾನವೇ ನಿಯಮ ರೂಪಿಸಿದೆ. ಇದರ ಪ್ರಕಾರ ಮತಗಳ ಸಂಖ್ಯೆ ನಿರ್ಧಾರವಾಗುತ್ತದೆ.

ಪ್ರತಿ ಮತದಾರ ಆತ ಎಷ್ಟು ಜನರನ್ನು ಪ್ರತಿನಿಧಿಸುತ್ತಾನೆ? ಈ ಸಂಖ್ಯೆಯ ಮೇಲೆ ಆತನ/ಆಕೆಯ ಮತ ಪ್ರಮಾಣ ಅವಲಂಬಿತ ವಾಗಿದೆ. ರಾಜ್ಯದ ಒಟ್ಟು ಜನರ ಸಂಖ್ಯೆಯನ್ನು 1000 ದಿಂದ ಭಾಗಿಸಿ, ಆ ಬಳಿಕ ಆ ರಾಜ್ಯ (ಮತದಾನ ಮಾಡುವ) ಶಾಸಕರ ಸಂಖ್ಯೆಯಿಂದ ಭಾಗಿಸಿದರೆ ಸಿಗುವ ಸಂಖ್ಯೆಯೇ ಆ ರಾಜ್ಯದ ಶಾಸಕರ ಮತಗಳ ಮೌಲ್ಯ. ಉದಾಹರಣೆಗೆ ಉತ್ತರ ಪ್ರದೇಶ 83.85 ದಶಲಕ್ಷ ಮತದಾರರನ್ನು ಹೊಂದಿದೆ. ಈ ಸಂಖ್ಯೆಯನ್ನು 1000 ದಿಂದ ಭಾಗಿಸಿ, ಬಳಿಕ ಅಲ್ಲಿನ ಶಾಸಕರ ಸಂಖ್ಯೆ(403)ಯಿಂದ ಭಾಗಿಸಿದರೆ ಸಿಗುವ ಮೊತ್ತ 208. ಇದು ಉತ್ತರ ಪ್ರದೇಶದ ಪ್ರತಿ ಶಾಸಕನ ಮತದ ಮೌಲ್ಯ.

ಇದೇ ರೀತಿ ಸಿಕ್ಕಿಂ ರಾಜ್ಯಕ್ಕೆ ಲೆಕ್ಕ ಹಾಕಿದರೆ ಅಲ್ಲಿನ ಶಾಸಕರು ಚಲಾಯಿಸಲಿರುವ ಮತದ ಮೌಲ್ಯ. ಕೇವಲ 7. ಹೀಗೆ ಒಟ್ಟು ದೇಶದ 4120 ಶಾಸಕರು ಚಲಾಯಿಸುವ ಮತಗಳ ಮೌಲ್ಯ 5,49,474. ಸಂಸದರ ಮತಗಳಿಗೂ ಇಷ್ಟೇ ಮೌಲ್ಯ. ಈ ಮತಗಳ ಸಂಖ್ಯೆಯನ್ನು ಮತದಾನ ಮಾಡಿದ ಸಂಸದರ ಒಟ್ಟು ಸಂಖ್ಯೆಯಿಂದ ಭಾಗಿಸಬೇಕು. ಆಗ ಸಿಗುವ ಮೊತ್ತ 708(549474 ÷776=708) ಅಂದರೆ, ಈ ಬಾರಿ ಮತದಾನ ಮಾಡುವ ಪ್ರತಿ ಸಂಸದ ರಾಷ್ಟ್ರಪತಿ ಆಯ್ಕೆಗೆ 708 ಮತ ಚಲಾಯಿಸಬಹುದು. ಅಂದರೆ ಸಂಸದರ ಒಟ್ಟು ಮತಗಳ ಸಂಖ್ಯೆ: 708 X 776 = 549408. ಈಗ ರಾಷ್ಟ್ರಪತಿ ಚುನಾವಣೆಯ **ಒಟ್ಟು ಮತಗಳ ಮೌಲ್ಯ.**

ಶಾಸಕರ ಮತಗಳ ಮೌಲ್ಯ 549474, ಸಂಸದರ ಮತಗಳ ಮೌಲ್ಯ 549408. ಒಟ್ಟು 1098882

ಯಾರ್‍ಯಾರು ಎಷ್ಟೆಷ್ಟು

ಕಾಂಗ್ರೆಸ್ ಮಿತ್ರಪಕ್ಷಗಳು(ಯುಪಿಎ) 4 ಲಕ್ಷ, ಎಡಪಕ್ಷಗಳು 1.1 ಲಕ್ಷ, ಬಿಜೆಪಿ ಮತ್ತು ಮಿತ್ರಪಕ್ಷ (ಎನ್‌ಡಿಎ)3.5, ಇತರರು 2.4 (ಇತರೆಯಲ್ಲಿ 61000 ಮತ ಹೊಂದಿರುವ ಬಿಎಸ್‌ಪಿ ಸೇರಿದೆ)

ಪ್ರಥಮ ಪ್ರಶಸ್ತ್ಯದ ಮತಗಳು:

ಸಂಸದರು ಪ್ರಾಶಸ್ತ್ಯದ ಮತಗಳನ್ನು ಚಲಾಯಿಸಬಹುದು. ಮೊದಲ ಹಂತದ ಮತ ಎಣಿಕೆಯಲ್ಲಿ ಕೋಟಾ ಪೂರ್ತಿಗಳಾದ ಅಭ್ಯರ್ಥಿಯನ್ನು ವಿಜೇತ ಎಂದು ಘೋಷಿಸಲಾಗುತ್ತದೆ. ಕೋಟಾ ಅಂದರೆ, ಮತದಾನವಾದ ಮತಗಳ ಅರ್ಧಕ್ಕಿಂತ ಹೆಚ್ಚು ಭಾಗ. ಒಂದು ವೇಳೆ ಮೊದಲ ಹಂತದಲ್ಲಿ ಯಾವುದೇ ಅಭ್ಯರ್ಥಿ ಕೋಟಾ ತಲುಪದಿದ್ದರೆ, ಆಗ ಎರಡನೇ ಹಂತದ ಮತ ಎಣಿಕೆ ನಡೆಯಲಿದೆ. ಇದರಲ್ಲಿ ಮೊದಲ ಹಂತದಲ್ಲಿ ಕನಿಷ್ಠ ಮತ ಪಡೆದ ಅಭ್ಯರ್ಥಿಗಳನ್ನು ಪ್ರತ್ಯೇಕಿಸಲಾಗುತ್ತದೆ. ಈ ಪ್ರತ್ಯೇಕಿಸಲ್ಪಟ್ಟ ಅಭ್ಯರ್ಥಿಗಳ ಎರಡನೇ ಪ್ರಾಶಸ್ತ್ಯದ ಮತಗಳನ್ನು ಸಂಬಂಧಿಸಿದ ಮುಂಚೂಣಿ ಅಭ್ಯರ್ಥಿಗಳಿಗೆ ನೀಡಲಾಗುತ್ತದೆ.

ಎರಡನೇ ಹಂತದಲ್ಲಿ ಯಾರೂ ಬಹುಮತ ಪಡೆಯದಿದ್ದರೆ, ಇದೇ ಪ್ರಕ್ರಿಯೆ ಮೂರನೇ ಹಂತಕ್ಕೆ ಮುಂದುವರಿಯುವುದು. ಆದರೆ, ಭಾರತದ ಇತಿಹಾಸದಲ್ಲಿ ಇದುವರೆಗೆ 3ನೇ ಹಂತದ ಮತ ಎಣಿಕೆಯ ಅಗತ್ಯ ಬಂದಿಲ್ಲ.

1969ರಲ್ಲಿ ವಿ.ವಿ.ಗಿರಿ ಎರಡನೇ ಪ್ರಾಶಸ್ತ್ಯದ ಮತಗಳಿಂದ ಜಯಗಳಿಸಿ ಇತಿಹಾಸ ನಿರ್ಮಿಸಿದ್ದಾರೆ. ಮೊದಲ ಹಂತದಲ್ಲಿ ವಿ.ವಿ.ಗಿರಿ 401515 ಮತ, ಪಡೆದಿದ್ದರೆ, ಸಮೀಪದ ಪ್ರತಿಸ್ಪರ್ಧಿ ನೀಲಂ ಸಂಜೀವರೆಡ್ಡಿ 313548 ಮತ ಪಡೆದಿದ್ದರು. 2ನೇ ಹಂತದಲ್ಲಿ ಗಿರಿ 420077 ಮತ ಪಡೆದರೆ, ರೆಡ್ಡಿ 405427 ಮತ ಪಡೆದು ನಿಕಟ ಸ್ಪರ್ಧೆ ನೀಡಿದ್ದರು.

ಭೂಮಿ ಹರಾಜಿಗೆ ಪ್ರತಿರೋಧ

ಜಿ.ಕೆ.ಎಸ್.ರೆಡ್ಡಿ, ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದದ) ಮಾವಳ್ಳಿ ಶಂಕರ್, ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಹಾಗೂ ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ, ಎಂ.ವೆಂಕಟಸ್ವಾಮಿ, ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷರಾದ, ಬಾಬುರೆಡ್ಡಿ, ಸ್ಲಂ ಕ್ರಿಯಾ ಸಮಿತಿ ಹಾಗೂ ಮಾನವ ಹಕ್ಕುಗಳ ಹೋರಾಟಗಾರ ಹಸನ್ ಮನ್ಸೂರ್ ಸರ್ವೋದಯ ಕರ್ನಾಟಕ ಪಕ್ಷದ ಎನ್.ವೆಂಕಟೇಶ್, ಸಾಹಿತಿ ಡಾ:ಕೆ. ಮರುಳಸಿದ್ದಪ್ಪ, ಸಿಪಿಐ ನ ಜಯರಾಂ, ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ. ಜಿ.ಸಿ. ಬಯ್ಯಾರೆಡ್ಡಿ, ಸೇರಿದಂತೆ ಹಲವಾರು ಜನ ಮುಖಂಡರು ಭಾಗವಹಿಸಿದ್ದರು. ದುಂಡು ಮೇಜಿನ ಸಭೆಯಲ್ಲಿ ಮೇ11 ರಿಂದ ಸರ್ಕಾರ ಆರಂಭಿಸಲು ಉದ್ದೇಶಿಸಿದ್ದ ಎರಡನೇ ಹಂತದ ಹರಾಜು ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು ಮತ್ತು ವಶಪಡಿಸಿಕೊಳ್ಳಲಾದ ಭೂ ಹಂಚಿಕೆ ಸಂಬಂಧ ಸ್ಪಷ್ಟವಾದ ಭೂ ನೀತಿಯನ್ನು ರೂಪಿಸಬೇಕು ಎಂದು ನಿರ್ಣಯ ಕೈಗೊಂಡಿತು. ಈ ಬೇಡಿಕೆಗಳ ಬಗ್ಗೆ ಒತ್ತಡ ಹಾಕಲು ಜಂಟಿ ಹಾಗೂ ವಿಶಾಲ ಹೋರಾಟಕ್ಕೆ ಮುಂದಾಗಲು ನಿರ್ಧರಿಸಿತು.

ಮೇ 11 ರ ಹೋರಾಟ; ಹರಾಜು ಮುಂದಕ್ಕೆ

ದುಂಡು ಮೇಜಿನ ಸಭೆ ನಿರ್ಧಾರದಂತೆ ಮೇ 11ರಂದು ನೂರಾರು ವಿವಿಧ ಪಕ್ಷಗಳ ಹಾಗೂ ಸಂಘಟನೆಗಳ ಕಾರ್ಯಕರ್ತರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯತ್ತ ಧಾವಿಸ ತೊಡಗಿದರು. ಮತ್ತು ಹರಾಜು ಪ್ರಕ್ರಿಯೆ ಮಾಡುವುದನ್ನು ನಿಲ್ಲಿಸಬೇಕೆಂದು ಜಿಲ್ಲಾಧಿಕಾರಿ ಕಛೇರಿಗಳಿಗೆ ಮುತ್ತಿಗೆ ಹಾಕಿದರು. ಅನಿವಾರ್ಯವಾಗಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ವಿಶೇಷ ಜಿಲ್ಲಾಧಿಕಾರಿ ಶಾಂತಪ್ಪರವರು ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿದೆ ಎಂಬುದನ್ನು ಪ್ರಕಟಿಸಿದರು.

ಮೇ 18 ರಂದು ಅಹೋರಾತ್ರಿ ಹೋರಾಟ:

ತೀವ್ರಗೊಳ್ಳುತ್ತಿರುವ ಹೋರಾಟಕ್ಕೆ ಮಣಿದು ಸರ್ಕಾರ ಭೂಮಿ ಹರಾಜನ್ನು ಮುಂದೂಡಿದರೂ ಮತ್ತೆ ಹರಾಜು ನಡೆಸುವುದು ಗ್ಯಾರಂಟಿಯಾಗಿಯೇ ಇತ್ತು. ಆದರೆ ಹರಾಜು ದಿನಾಂಕ ಯಾವಾಗ ಎಂಬುದು ಮಾತ್ರ ಗುಪ್ತವಾಗಿತ್ತು. ಆದರೆ ಸಿಪಿಐ(ಎಂ) ಸಮಾಜವಾದಿ ಪಕ್ಷ ಸಂಯುಕ್ತ ಜನತಾದಳ, ಸೇರಿದಂತೆ ವಿವಿಧ ದಲಿತ ಸಂಘಟನೆಗಳು ಹರಾಜು ಪ್ರಕ್ರಿಯೆ ದಿನಾಂಕ ಗೊತ್ತಾದ ಕ್ಷಣದಲ್ಲೇ ಹೋರಾಟ ರೂಪಿಸಲು ಯೋಜನೆ ರೂಪಿಸಿದ್ದವು. ಅಂದರಂತೆ ಮೇ 18 ರಿಂದ ಪುನಃ ಭೂಮಿ ಹರಾಜು ನಡೆಸಲಾಗುತ್ತಿದೆ ಎಂಬ ಸುದ್ದಿ ಗೊತ್ತಾಗುತ್ತಿದ್ದಂತೆ. 'ಅಹೋರಾತ್ರಿ' ಸತ್ಯಾಗ್ರಹಕ್ಕೆ ಹೋರಾಟ ಸಮಿತಿ ನಿರ್ಧರಿಸಿತು.

ಅದರಂತೆ, ಮೇ 18 ರಂದು ಸುಮಾರು 500 ಕ್ಕೂ ಹೆಚ್ಚು ಪ್ರತಿಭಟನಾಕಾರರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸುಡುವ ಬಿಸಿಲಲ್ಲಿ ಧರಣಿ ಆರಂಭಿಸಿದರು.

ಅಹೋರಾತ್ರಿ ಧರಣಿ ಆರಂಭಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ರಾಜ್ಯ ರೈತ ಸಂಘದ ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್, ಸಮತಾ ಸೈನಿಕ ದಳದ



ಅಹೋರಾತ್ರಿ ಧರಣಿ

ಎಂ.ವೆಂಕಟಸ್ವಾಮಿ ರೈತ ಸಂಘದ ಬಯ್ಯಾರೆಡಿ, ಹಾಪ್‌ಕಾಮ್ಸ್‌ನ ಬಾಬು, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸೇರಿದಂತೆ ಹಲವು ಮುಖಂಡರುಗಳು ಮಾತನಾಡಿ ಚಾಲನೆ ನೀಡಿದರು.

ಈ ಹೋರಾಟವನ್ನು ವಿಫಲಗೊಳಿಸಲು ಸರ್ಕಾರಿ ಅಧಿಕಾರಿಗಳು ಪೋಲೀಸ್ ಅಧಿಕಾರಿಗಳು ಏನೆಲ್ಲಾ ಪ್ರಯತ್ನ ನಡೆಸಿದರೂ ಜನ ಚಳುವಳಿ ಮುಂದೆ ಅವರು ಪ್ರಯತ್ನ ವಿಫಲವಾಯ್ತು. ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲೇ ಮಧ್ಯಾಹ್ನದ ಅಡುಗೆ ಮಾಡಿ ಊಟ ಮಾಡಿದ ಕಾರ್ಯಕರ್ತರು, ರಾತ್ರಿಯಿಡಿ ಅಲ್ಲೇ ಹಾಕಿದ್ದ ಟೆಂಟ್‌ನಲ್ಲಿಯೇ ವಾಸ್ತವ್ಯ ಮಾಡಿ ಭೂಮಿ ರಕ್ಷಿಸುವ ಹೋರಾಟಕ್ಕೊಂದು ಬಲ ತಂದರು.

ಹಠ ಬಿಡದ ಆಡಳಿತ :

ಮೇ 19 ರಂದು ಮತ್ತೆ ಹರಾಜು ಪ್ರಕ್ರಿಯೆ ನಡೆಯುತ್ತಿದ್ದಂತೆ ಆಕ್ರೋಶಗೊಂಡ ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿಗೆ ನುಗ್ಗಲು ಪ್ರಯತ್ನಿಸಿದರು. ಹೀಗಾಗಿ ಪೋಲೀಸರು ಮತ್ತು ಕಾರ್ಯಕರ್ತರ ಮಧ್ಯ ತೀವ್ರ ಸಂಘರ್ಷಕ್ಕೆ ಕಾರಣವಾಯಿತು.

ಈ ಹೋರಾಟದಿಂದಾಗಿ ಜಿಲ್ಲಾಡಳಿತ ಮೇ 31 ರಂದು ಮುಖ್ಯಮಂತ್ರಿ ಯವರೊಡನೆ ಮಾತುಕತೆಗೆ ದಿನಾಂಕ ನಿಗದಿ ಮಾಡಿತು.

ಮುಖ್ಯಮಂತ್ರಿ ಜೊತೆ ನಡೆಯುವ ಮಾತುಕತೆಯ ಫಲಿತಾಂಶ ನೋಡಿ, ಮತ್ತೆ ಹೋರಾಟದ ನಿರ್ಧಾರ ಮಾಡುವ ತೀರ್ಮಾನದೊಂದಿಗೆ 'ಅಹೋರಾತ್ರಿ ಧರಣಿ' ವಾಪಸ್ ಪಡೆಯಲಾಯಿತು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಈ ಹೋರಾಟ ಭೂ ಕಬಳಿಕೆದಾರರು ಹಾಗೂ ಆಳುವವರಿಗೆ ಚುರುಕು ಮುಟ್ಟಿಸಿದ್ದಂತೂ ಸತ್ಯ.

● ಗೌರಮ್ಮ

ಸಿ.ಎಂ.ಸ್ಟಂಟ್..........

ಮುಟ್ಟಲಾದೀತೆ? ಮಲಗಲಾದೀತೆ? ಎಂತಹ ಅವಾಸ್ತವ ಭರವಸೆ!

ಮುಖ್ಯಮಂತ್ರಿ ಬರುತ್ತಾರೆಂದು ಅವಸರದಲ್ಲಿ ಕಾಮಗಾರಿ ಆಗುತ್ತವೆ. ಕಂಟ್ರಾಕ್ಟ್ ಬಿಲ್ಲೂ ಮುಂಗಡವಾಗಿ ಹಂಚಿಕೆಯಾಗುತ್ತದೆ. ನಂತರ ಅದರತ್ತ ನೋಡುವವರು, ವ್ಯವಸ್ಥೆ ಮಾಡುವವರಾರು? ಇದಾದ ಬಳಿಕ ಯಾರು ತಿರುಗಿ ನೋಡುವುದಿಲ್ಲ. ಅಂದರೆ ಏನು ಪ್ರಯೋಜನ? ಇದನ್ನು ಸ್ಥಳೀಯ ಪಂಚಾಯತ್‌ಗಳು, ಆಡಳಿತ, ಜನ ಪ್ರತಿನಿಧಿಗಳು ನೋಡ ಬೇಕಾಗುತ್ತದೆ. ವಹಿಸಿ ಕೊಳ್ಳಬೇಕಾಗುತ್ತದೆ! ಅದಕ್ಕೆ ಹಣಕಾಸು ಬೇಕಾಗುತ್ತದೆ. ಇದಾಗದೇ ಏನು ಪ್ರಯೋಜನ?

ನೀರ ಮೇಲಿನ ಗುಳ್ಳೆ

ಹುಮ್ನಾಬಾದ್‌ನ ಹಣಕುಣಿಯಲ್ಲಿ ಆತ್ಮಹತ್ಯೆಗೀಡಾದ ರೈತನ ಮನೆಯಲ್ಲಿ ಉಳಿದು ಒಂದಿಷ್ಟು ಪರಿಹಾರ ಘೋಷಿಸಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ಮುಂದುವರಿದರೆ ಅಧಿಕಾರದಲ್ಲಿದ್ದು ಏನು ಪ್ರಯೋಜನ, ರಾಜೀನಾಮೆ ನೀಡುವೆ ಎಂಬಂತಹ ಮಾತು ಹೇಳಿದರೆ, ರೈತರ ಆತ್ಮಹತ್ಯೆಗಳು ನಿಲ್ಲುವವೆ? ಕೋಮುವಾದಿಗಳ ಕೈಹಿಡಿದ ಇವರಿಂದ ದಕ್ಷಿಣ ಕನ್ನಡದ ಉಳ್ಳಾಲದ (ಇದು ಚುನಾವಣಾ ಪೂರ್ವ ತಯಾರಿ) ಕೋಮುಗಲಭೆಗಳು ಅಲ್ಪಸಂಖ್ಯಾತರ ಮೇಲಿನ ನಿತ್ಯದ ಧಾಳಿಗಳು ನಿಂತು ಸಾಮರಸ್ಯ ಸ್ಥಾಪಿತವಾಗುವುದೇ? ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದೇ? ಹಳ್ಳಿಗಳು ಉದ್ಧಾರವಾಗುವವೇ? ಗ್ರಾಮ ವಾಸ್ತವ್ಯದ ಒಟ್ಟು ಅನುಭವ, ಅದರ ಫಲಿತಾಂಶ ಗಳನ್ನು ಗಮನಿಸಿದಾಗ ಇದು ಒಂದು ಕೇವಲ ಅಗ್ಗದ ಜನಪ್ರಿಯತೆಯ ಸ್ಟಂಟ್ ಎಂಬುದರಲ್ಲಿ ಅನುಮಾನವೇ ಇಲ್ಲ. ಕೆಲವೆಡೆ ಇಂತಹ ಗಿಮಿಕ್ಸ್‌ಗಳು ಜನರಲ್ಲಿ ಉತ್ಸಾಹ, ಆಸೆ ಮತ್ತು ಜನಪ್ರಿಯತೆ ಮೂಡಿಸಿರಲೂ ಬಹುದು, ಅದೆಲ್ಲಾ ನೀರ ಮೇಲಿನ ಗುಳ್ಳೆ ಅಷ್ಟೆ!

ಮುಖ್ಯಮಂತ್ರಿಗಳು ಗ್ರಾಮದಲ್ಲಿ ವಾಸ್ತವ್ಯ ಮಾಡುತ್ತಾ ಪ್ರಚಾರ ಗಿಟ್ಟಿಸುತ್ತಿದ್ದಾರೆ ಭಾಗೀದಾರ ಪಕ್ಷದ ಯಡಿಯೂರಪ್ಪನವರು, ಅದನ್ನೇ ಅನುಸರಿಸತೊಡಗಿದ್ದಾರೆ, ಬಳ್ಳಾರಿ ದಲಿತರ ಮನೆಯಲ್ಲಿ ಉಡುಪಿ ಹೋಟೇಲಿನಲ್ಲಿ ತಿಂಡಿ ತಿಂದು ದಲಿತ ಪ್ರೇಮ ತೋರಿಸಿಕೊಂಡರು. ಉಪ ಮುಖ್ಯಮಂತ್ರಿ ಕಿರುಬನ ಮೈಮೇಲೆ ಪಟ್ಟಿಗಳಿವೆ ಅಂತಾ ಮೈಗೆ ಬರೆ ಎಳೆದುಕೊಂಡ ಗುಳ್ಳೇ ನರಿ ಥರ ಇದಲ್ವೇ?

ಪ್ರಾಮಾಣಿಕತೆ ಇದೆಯೆ... ಹಾಗಾದರೆ...?

ಪ್ರವಾಹೋಪಾದಿಯಲ್ಲಿ ಹರಿದುಬರುವ ಜನ, ಅರ್ಜಿಗಳನ್ನು 'ಧರ್ಮದರ್ಶನ' ದಲ್ಲಿ ಸ್ವೀಕರಿಸಿ ಉಸ್ಸಪ್ಪಾ ಎಂದು ಸುಸ್ತಾಗುವುದು, ದಿನದ 20 ಗಂಟೆಗಳೂ ಕೆಲಸ ಮಾಡುವೆನೆಂಬ ಮು.ಮಂ. ಎಂಬ ಮಾತುಗಳು, ಸದ್ಯದ ಕಟು ವಾಸ್ತವವನ್ನು ಬದಲಾಯಿಸಲಾರದು. ನಿಜವಾಗಲೂ ಹಳ್ಳಿಗಳ ಭೇಟಿಯಿಂದ ಏನನ್ನಾದರೂ ಅರಿತಿದ್ದರೆ ಆ ಸ್ಥಿತಿಯನ್ನು ಬದಲಿಸಬೇಕೆಂಬ ಪ್ರಾಮಾಣಿಕ ಇಚ್ಛೆ ಇದ್ದರೆ ಊರೂರು ಸುತ್ತುವ ಬದಲು ಸರ್ಕಾರದ ನೀತಿಗಳಲ್ಲಿ ತುರ್ತು ಬದಲಾವಣೆ ತರಬೇಕು, ಈಗಿರುವ ಅಧಿಕಾರ, ಸಂಪನ್ಮೂಲಗಳ ಕೇಂದ್ರೀಕರಣ ತಡೆಯಬೇಕು, ಸಂಪನ್ಮೂಲಗಳು ಉತ್ಪಾದನೆಯನ್ನು ಹೆಚ್ಚಿಸಲು, ಉದ್ಯೋಗ ಸೃಷ್ಟಿಸಲು ಬಳಕೆಯಾಗಬೇಕು. ಅಂದರೆ ವಿದೇಶಿ ಹಣಕಾಸು ಸಂಸ್ಥೆಗಳ ಸಾಲಕ್ಕೆ ಕೈಯೊಡ್ಡಿ ಬಹುರಾಷ್ಟ್ರೀಯ, ಬಂಡವಾಳಗಾರರ ತಾಳಕ್ಕೆ ಕುಣಿಯುವ ಆರ್ಥಿಕ ಆಡಳಿತಾತ್ಮಕ ನೀತಿಗಳನ್ನು ಕೈಬಿಡಬೇಕು. ಇನ್‌ಫೋಸಿಸ್‌ನಂತಹ ಐಟಿ, ಬಿಟಿ ಕಂಪನಿಗಳ, ಯುಬಿ, ಸಾರಾಯಿ ಲಾಬಿಗಳಿಗೆ ಯಥೇಚ್ಛ ರಿಯಾಯಿತಿಗಳು ನಿಲ್ಲಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಸಾಮಾಜಿಕ - ಸಾಂಸ್ಕೃತಿಕ ಸಾಮರಸ್ಯ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸುವ, ರಕ್ಷಿಸುವ ನೀತಿ ಇರಬೇಕು.

ಇಂತಹ ಬದಲಾವಣೆಗಾಗಿ ಜನಪರ ನೀತಿಗಳ ಅನುಷ್ಠಾನಕ್ಕಾಗಿ ಆಡಳಿತವನ್ನು ಸಜ್ಜುಗೊಳಿಸಬೇಕು. ಅಧಿಕಾರಶಾಹಿಯನ್ನು ನಿರ್ಧರಿಸಿ, ಜನಪ್ರತಿನಿಧಿಗಳಿಗೆ - ಜನತಾಂತ್ರಿಕ ಶಕ್ತಿಗಳನ್ನು ಬಲಪಡಿಸಬೇಕು. ಇವನ್ನು ಮಾಡದೇ ಇಂತಹ ವಾಸ್ತವ್ಯಗಳು ಕೇವಲ ಜನರ ಕಣ್ಣಿಗೆ ಮಣ್ಣೆರೆಚುವ ಗಿಮಿಕ್ಸ್‌ಗಳು ಅಷ್ಟೇ.

ಬದುಕು ಕಂಡುಕೊಳ್ಳಲಿಕ್ಕೆ 28,000 ಹಳ್ಳಿಗಳಲ್ಲಿಯೇ ವಾಸ ಮಾಡಬೇಕಿಲ್ಲ. ಕ್ರಿಯಾಶೀಲರಾಗಲು ಒಂದು ಹಳ್ಳಿಯೂ ಸಾಕಾದೀತು. ಆದರೆ ಇವನ್ನು ಬದಲಾಯಿಸಿಕೊಳ್ಳಲು ಜೆಡಿ(ಎಸ್) ಸಿದ್ಧವಿಲ್ಲ. ಒಂದೆಡೆ ಇಂತಹ ಗ್ರಾಮ ವಾಸ್ತಾವ್ಯದ ಗಿಮಿಕ್ಸ್‌ನಿಂದ ಜನಬೆಂಬಲ ಹಿಡಿದಿಟ್ಟುಕೊಳ್ಳಲು ಜೆಡಿ(ಎಸ್) ಯತ್ನಿಸುತ್ತಿದ್ದರೆ ಅತ್ತ ಕೋಮು ವಿಭಜನೆಯ ಚಟುವಟಿಕೆಗಳಿಂದ ತನ್ನ ಅಜೆಂಡಾ ಪೂರೈಸಲು ಬಿಜೆಪಿ - ಸಂಘ ಪರಿವಾರ ಯತ್ನಿಸುತ್ತಿದೆ. ಅಂದರೆ ಕೋ-ಜಾ ಸರ್ಕಾರದಲ್ಲಿ ಜನಹಿತವೆಲ್ಲಿ?

○



ರೈತರ ಆತ್ಮಹತ್ಯೆಗೆ ಸಾಂತ್ವನವೊಂದೇ ಸಾಕೆ?

'ವಿಧಾನಸೌಧದ ಎ.ಸಿ.ರೂಮಿನಲ್ಲಿ ಕೂತು ಕಾರಿನಲ್ಲಿ ಓಡಾಡುವ ಐಎಎಸ್ ಅಧಿಕಾರಿಗಳಿಗೆ ವರ್ಷಕ್ಕೊಮ್ಮೆ ಸಂಬಳ ಹೆಚ್ಚಬೇಕು... ಇವರಿಗೆ ಗ್ರಾಮೀಣ ಜನರ ಕಷ್ಟದ ಅರಿವಿಲ್ಲ'.

ಮುಖ್ಯಮಂತ್ರಿ
ಹೆಚ್.ಡಿ.ಕುಮಾರಸ್ವಾಮಿ

★

ಮುಖ್ಯಮಂತ್ರಿಗಳು ಹೇಳಿಕೆ ಸರಿಯಲ್ಲ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ.

ಪಿ.ಬಿ. ಮಹಿಷಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ

★

'ನೆಟ್ಟಗೆ ಆಡಳಿತ ನಡೆಸುವುದನ್ನು ಕಲಿಬೇಕು. ನಾವು ಬಿಗಿಯಾಗಿದ್ದರೆ ಆಡಳಿತವೂ ಬಿಗಿಯಾಗಿರುತ್ತೆ ದೂಷಿಸುತ್ತಾ ಹೋಗೋದಲ್ಲ.......'

ಹೆಚ್.ಡಿ.ರೇವಣ್ಣ
ಮುಖ್ಯಮಂತ್ರಿ ಅಣ್ಣ
ಲೋಕೋಪಯೋಗಿ ಸಚಿವ

ಕನ್ನಡಿಯೊಳಗಣ ಬಿಂಬ ಪ್ರತಿಬಿಂಬ

'ಇದು ಔಟ್‌ಡೋರ್ (ಹೊರಾಂಗಣ ಚಿತ್ರೀಕರಣ) ಶೂಟಿಂಗ್'

- **ಧರಂಸಿಂಗ್**, ಮಾಜಿ ಮುಖ್ಯಮಂತ್ರಿ

'ಅಲ್ಲ ನಮ್ಮದು, ಇಂಡೋರ್ ಶೂಟಿಂಗ್ (ಒಳಾಂಗಣ ಚಿತ್ರೀಕರಣ)'


ಕುಮಾರಸ್ವಾಮಿ, ಮುಖ್ಯಮಂತ್ರಿ

ನಟನೆ ಔಟ್‌ಡೋರಾದರೇನು, ಇನ್‌ಡೋರಾದರೇನು ನಾಟಕ ನಾಟಕವೇ?

ಮತ್ತೊಮ್ಮೆ ಬಿಜೆಪಿ ಬಣ್ಣ ಬಯಲು ಮಾಡಿದ ಗುಜರಾತ್ ಎನ್‌ಕೌಂಟರ್‌ಗಳು

ಹಿಂದುತ್ವದ ಆಧಾರದ ಮೇಲೆ ರಾಷ್ಟ್ರ ಕಟ್ಟಲು ಹೊರಟಿರುವ ಬಿಜೆಪಿಯವರ ಬಣ್ಣ ಮತ್ತೆ ಮತ್ತೆ ಬಯಲಾಗುತ್ತಿದೆ. ಬಿಜೆಪಿಯ ಅಧ್ಯಕ್ಷ ಬಂಗಾರು ಲಕ್ಷ್ಮಣ್ ಲಂಚದ ನೋಟುಗಳನ್ನು ಬಾಚುತ್ತಿರುವುದನ್ನು ಟಿ.ವಿ.ಗಳಲ್ಲಿ ನೋಡಿದ್ದಾಯಿತು. ಲೋಕಸಭೆಯಲ್ಲಿ ಪ್ರಶ್ನೆಗಳನ್ನು ಕೇಳಲು ದುಡ್ಡಿಗೆ ಕೈಯೊಡ್ಡಿದ ಬಿಜೆಪಿಯ 6 ಜನ ಸಂಸತ್ ಸದಸ್ಯರು ವಜಾಗೊಂಡು ಮನೆಗೆ ಹೋದದ್ದನ್ನು ಕಂಡದ್ದಾಯಿತು. ಗುಜರಾತಿನಿಂದ ಸಂಸತ್ತಿಗೆ ಆಯ್ಕೆಯಾದ ಬಿಜೆಪಿ ಸದಸ್ಯ ವಿಶ್ವ ಹಿಂದೂ ಪರಿಷತ್ತಿನ ಮುಖಂಡ ಬಾಬು ಬಾಯಿ ಕಟಾರ ಮಾನವ ಸರಕು ಸಾಗಾಟದಲ್ಲಿ ಸಿಕ್ಕಿಬಿದ್ದು ಕಂಬಿ ಎಣಿಸುತ್ತಿರುವುದನ್ನು ನೋಡುತ್ತಿದ್ದೇವೆ. ಅದೇ ಗುಜರಾತ್ ಎಂಬ ಬಿಜೆಪಿಯ ಪ್ರಯೋಗಶಾಲೆಯಲ್ಲಿ, ನರಹಂತಕ ನರೇಂದ್ರ ಮೋದಿ ದರ್ಬಾರಿನಲ್ಲಿ ನಡೆಯುತ್ತಿರುವ ಎನ್‌ಕೌಂಟರ್ ಕೊಲೆಗಳು ಮತ್ತೊಮ್ಮೆ ಬಿಜೆಪಿಯ ನಿಜಬಣ್ಣವನ್ನು ಬಯಲು ಮಾಡಿವೆ. ಇತರ ಪಕ್ಷಗಳಿಂದ ನಾನು ಭಿನ್ನ ಎನ್ನುವ ಅದರ ಮುಖವಾಡ ಕಳಚಿ ಬಿದ್ದಿದೆ. ಅದೊಂದು ಕೆಟ್ಟ ಕೋಮುವಾದಿ ಪಕ್ಷ ಮಾತ್ರವಲ್ಲ ಕುಟಿಲತೆಗೆ ಕುಖ್ಯಾತವಾದ ಪಕ್ಷ ಎಂದು ಸ್ಪಷ್ಟವಾಗಿ ಸಾಬೀತಾಗಿದೆ.

ಭಯೋತ್ಪಾದಕರನ್ನು, ಕಾಡುಗಳ್ಳರನ್ನು, ಕಳ್ಳಸಾಗಣೆದಾರರನ್ನು ಭೂಗತ ಪಾತಕಿಗಳನ್ನು ಪೋಲೀಸರು ಬಂಧಿಸಲು ಮುಂದಾಗುವಾಗ ನಡೆಯುವ ದಾಳಿ ಪ್ರತಿದಾಳಿಯನ್ನು ಎನ್‌ಕೌಂಟರ್ ಎನ್ನಲಾಗುತ್ತದೆ. ಎನ್‌ಕೌಂಟರ್‌ಗಳ ರೀತಿಯಲ್ಲಿ ನಕಲಿ ಎನ್‌ಕೌಂಟರ್‌ಗಳನ್ನು ಸಹ ನಡೆಸಲಾಗುತ್ತದೆ. ಪೋಲೀಸರು ರಾಜಕಾರಣಿಗಳ ನಿರ್ದೇಶನದ ಮೇರೆಗೆ ಅಥವಾ ತಮ್ಮದೇ ಆದ ಉದ್ದೇಶಗಳಿಗೆ ಯಾರನ್ನಾದರೂ ಗುಂಡಿಟ್ಟು ಸಾಯಿಸಿ ಅದನ್ನು 'ಎನ್‌ಕೌಂಟರ್ ಸಾವು' ಎಂದು ಸಾಧಿಸುವುದು ನಕಲಿ ಎನ್‌ಕೌಂಟರ್. ಆರೋಪಿಯನ್ನು ಬಂಧಿಸಲು ಹೋದಾಗ, ಆತ ಪೋಲೀಸರ ಮೇಲೆ ದಾಳಿ ಮಾಡಿದನೆಂದೂ ಪೋಲೀಸರು ನಡೆಸಿದ ಪ್ರತಿದಾಳಿಯಲ್ಲಿ ಆತ ಮೃತಪಟ್ಟನೆಂದು ಕಥೆ ಕಟ್ಟಿ ಹೇಳಲಾಗುತ್ತದೆ. ಪೋಲೀಸ್ ಅತಿರೇಕದಿಂದ ಸಂಭವಿಸುವ ಲಾಕಪ್ ಸಾವುಗಳನ್ನು ಸಹ ಎನ್‌ಕೌಂಟರ್ ಸಾವುಗಳೆಂದು ಬಣ್ಣಿಸಿ ಪ್ರಕರಣಗಳನ್ನು ಮುಚ್ಚಿ ಹಾಕುವುದುಂಟು.



ಜೋಹ್ರಿ ಗುಡ್ ಬೈ

ಈ ನಡುವೆ ತನಿಖೆ ಉಸ್ತುವಾರಿ ವಹಿಸಿದ್ದ ಗೀತಾ ಜೋಹ್ರಿ ಸರ್ಕಾರ ಮತ್ತು ಹಿರಿಯ ಅಧಿಕಾರಿಗಳ ಹಸ್ತಕ್ಷೇಪದಿಂದ ಜಿಗುಪ್ಸೆಗೊಂಡು ಮೇ 22 ರಂದು ತನಿಖೆಗೆ ಗುಡ್‌ಬೈ ಹೇಳಿದ್ದಾರೆ ಎಂದು ತಿಳಿದುಬಂದಿದೆ. ಇದರಿಂದಾಗಿ ಸೊಹ್ರಾಬುದ್ದೀನ್ ಹಾಗೂ ಆತನ ಹೆಂಡತಿ ಕೌಸರ್‌ಬೀ ಮತ್ತು ತುಳಸಿರಾಂ ಪ್ರಜಾಪತಿಯನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದ ಪ್ರಕರಣ ಮತ್ತಷ್ಟು ಕಗ್ಗಂಟದಂತಾಗಿದೆ.


ಸೋಹ್ರಾಬುದ್ದೀನ್ ಗುಜರಾತಿನ ಅಮೃತಶಿಲೆ ಕಲ್ಲುಗಳ ವ್ಯಾಪಾರಿಗಳಿಂದ ಹಣ ಸುಲಿಯುತ್ತಿದ್ದನು. ಆದುದರಿಂದ ಆತನನ್ನು ಮುಗಿಸಲು ಈ ಅಮೃತಶಿಲೆ ವ್ಯಾಪಾರಸ್ಥರು ಈ ಪೋಲೀಸ್ ಅಧಿಕಾರಿಗಳಿಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಕೊಲೆಗಳನ್ನು ಮಾಡಿಸಿದ್ದಾರೆ ಎಂಬ ಸುದ್ದಿ ಗುಜರಾತ್‌ನಲ್ಲಿ ದಟ್ಟವಾಗಿ ಕೇಳಿ ಬರುತ್ತಿವೆ.

2002 ರ ಬಳಿಕ ಗುಜರಾತ್‌ನಲ್ಲಿ ಕನಿಷ್ಠ 31 ಜನರನ್ನು ನಕಲಿ ಎನ್‌ಕೌಂಟರ್‌ಗಳಲ್ಲಿ ಕೊಲ್ಲಲಾಗಿದೆ ಎಂದು ವಿಶ್ವದ ಅತಿ ದೊಡ್ಡ ಮಾನವ ಹಕ್ಕುಗಳ ವೇದಿಕೆ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದೆ. ಇವರೆಲ್ಲರೂ ಭಯಂಕರವಾದ ಭಯೋತ್ಪಾದಕರೆಂದೂ, ಇವರೆಲ್ಲರೂ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಹತ್ಯೆ ಮಾಡಲು ಬಂದವರೆಂದು ಗುಜರಾತ್ ಪೋಲಿಸರು ಕಥೆ ಕಟ್ಟಿದರು. ಸರ್ವೋಚ್ಚ ನ್ಯಾಯಾಲಯವು ಇತ್ತೀಚಿನ ಒಂದು ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಂಡಾಗ ಗುಜರಾತ್ ಪೋಲೀಸರ ಗುಟ್ಟುರಟ್ಟಾಯಿತು. ಈ ಪ್ರಕರಣದಲ್ಲಿ ಬಿಜೆಪಿ ಆಡಳಿತವಿರುವ ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ಥಾನ ಸರ್ಕಾರಗಳು ಭಾಗಿಯಾಗಿರುವುದು ಗಮನಿಸಬೇಕಾದ ವಿಷಯವಾಗಿದೆ.

ಸೊಹ್ರಾಬುದ್ದೀನ್, ಕೌಸರ್‌ಬೀ ಹತ್ಯೆ:

ಸೊಹ್ರಾಬುದ್ದೀನ್ ಶೇಖ್ ಮೂಲತಃ ಮಧ್ಯಪ್ರದೇಶದವನು. ರಾಜಮಾತೆ ಸಿಂಧಿಯಾ ಅವರ ಕುಟುಂಬದಿಂದ ಜಹಗೀರು ಪಡೆದಿದ್ದ ಮನೆತನಕ್ಕೆ ಸೇರಿದವನು. ಸಂಘಪರಿವಾರದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಮನೆತನ. ಕೆಲಕಾಲದಿಂದ ಈತ ತನ್ನ ಎರಡನೇ ಹೆಂಡತಿಯೊಂದಿಗೆ ಗುಜರಾತ್‌ನಲ್ಲಿ ವಾಸ ಮಾಡುತ್ತಿದ್ದ.

ಅಂದು ಸೊಹ್ರಾಬುದ್ದೀನ್, ಆತನ ಪತ್ನಿ ಕೌಸರ ಬೀ ಮತ್ತು ಆತನ ಸ್ನೇಹಿತ ತುಳಸಿರಾಂ ಪ್ರಜಾಪತಿ ಎಂಬ ಮೂವರು ಹೈದರಾಬಾದ್‌ನಿಂದ ಸಾಂಗ್ಲಿಗೆ ಹೋಗಲು ಬಸ್ಸಿನಲ್ಲಿ ಹೊರಟಿದ್ದರು. ಪೂರ್ವ ಯೋಜನೆಯಂತೆ ಅಲ್ಲಿಗೆ ಆಗಮಿಸಿದ್ದ ಗುಜರಾತ್ ಭಯೋತ್ಪಾದಕ ನಿಗ್ರಹ ದಳದ ಡಿಐಜಿ ಎನ್‌ಕೌಂಟರ್ ಪರಿಣಿತ ಎಂದೇ ಖ್ಯಾತನಾದ ಡಿ.ಜಿ. ವಂಝಾರ ಆ ಬಸ್ಸನ್ನು ನಿಲ್ಲಿಸಿ, ಆ ಮೂವರನ್ನು ಹೊರಗೆಳೆದು ತಮ್ಮ ವ್ಯಾನಿನಲ್ಲಿ ಹೇರಿಕೊಂಡು ಗುಜರಾತಿನ ಅಹಮದಾಬಾದಿನತ್ತ ಹೊರಟರು. ಸಬರ್‌ಕಾಂತಾ ಜಿಲ್ಲೆಯ ಇಲ್ಲೋಳ್ ಎಂಬ ಗ್ರಾಮದಲ್ಲಿ ಡಿ.ಐ.ಜಿ. ವಂಝಾರಗೆ ಸೇರಿದ ಕೃಷಿ ಭೂಮಿಯಲ್ಲಿರುವ ಒಂದು ಮನೆಯಲ್ಲಿ ಈ ಮೂವರನ್ನು ಇಡಲಾಯಿತು. ಮರುದಿನ ಅಂದರೆ 26.11.2005ರಂದು ಸೊಹ್ರಾಬುದ್ದೀನ್‌ನನ್ನು ಗುಂಡಿಕ್ಕಿ ಕೊಲ್ಲಲಾಯಿತು. ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಆತನ ಹೆಂಡತಿ ಕೌಸರ್‌ಬೀ ಮೇಲೆ ಅತ್ಯಾಚಾರ ಮಾಡಿ, ಬಲವಂತದಿಂದ ವಿಷ ಕುಡಿಸಿ ಸಾಯಿಸಲಾಯಿತು. ಶವವನ್ನು ಒಂದು ಬಾವಿಗೆ ಹಾಕಿ ಬಾವಿಯನ್ನು ಮಣ್ಣಿನಿಂದ ತುಂಬಿಸಿ ಅದರ ಮೇಲೆ ಒಂದು ಸಣ್ಣ ಮನೆಯನ್ನು ಸಹ ಕಟ್ಟಿಸಲಾಯಿತು. ಪತಿ ಪತ್ನಿಯರ ಜೊತೆಯಲ್ಲಿ ಬಂಧಿಸಲ್ಪಟ್ಟಿದ್ದ ತುಳಸಿರಾಂ ಪ್ರಜಾಪತಿಯನ್ನು ಯಾವ ನ್ಯಾಯಾಲಯಕ್ಕೆ ಹಾಜರುಪಡಿಸದೆ ಕೆಲಕಾಲ ಸಬರಮತಿ ಸೆಂಟ್ರಲ್ ಜೈಲ್‌ನಲ್ಲಿ ಇಡಲಾಗಿತ್ತು. ಅನಂತರ ಆತನನ್ನು ರಾಜಸ್ಥಾನದ ಉದಯಪುರ ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಲಾಗಿತ್ತು.



ನರಹಂತಕ ಮೋದಿ

ಮಧ್ಯಪ್ರದೇಶದಲ್ಲಿ ವಾಸವಿರುವ ಸೊಹ್ರಾಬುದ್ದೀನ್‌ನ ಸಹೋದರ ರುಬಾಬುದ್ದೀನ್ ತನ್ನ ಅಣ್ಣ ಮತ್ತು ಅತ್ತಿಗೆಯವರ ಸುಳಿವೇ ಇಲ್ಲದ ಕುರಿತು ಪೋಲೀಸರಿಗೆ ದೂರು ನೀಡಿದರು. ಏನೂ ಪ್ರಯೋಜನವಾಗಲಿಲ್ಲ. ಅನಂತರ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ 'ಹೆಬಿಯಸ್ ಕಾರ್ಪಸ್' ಅರ್ಜಿಯನ್ನು ಸಲ್ಲಿಸಿದನು. ಈ ಅರ್ಜಿಯ ವಿಷಯ ತಿಳಿದ ತಕ್ಷಣ ಗಲಿಬಿಲಿಗೊಂಡ ಡಿಐಜಿ ವಂಝಾರ



ಸೊಹ್ರಾಬುದ್ದೀನ್ ದಂಪತಿಗಳು

ಪ್ರಕರಣದ ಪ್ರತ್ಯಕ್ಷ ಸಾಕ್ಷಿ ತುಳಸಿರಾಂ ಪ್ರಜಾಪತಿಯನ್ನು 26.11.2006ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ವಾಪಸ್ ಕರೆದೊಯ್ಯುವಾಗ ನಕಲಿ ಎನ್‌ಕೌಂಟರ್ ನಡೆಸಿ ಸಾಯಿಸಿಬಿಟ್ಟ.

ಮೋದಿ ಸರ್ಕಾರದಿಂದ ತಪ್ಪೊಪ್ಪಿಗೆ: ಪ್ರಕರಣವನ್ನು ಎತ್ತಿಕೊಂಡ ಸರ್ವೋಚ್ಚ ನ್ಯಾಯಾಲಯವು ಪ್ರಕರಣದ ಕುರಿತು ತನಿಖೆ ನಡೆಸಲು ಉಚ್ಚ ಪೋಲೀಸ್ ಅಧಿಕಾರಿಯೊಬ್ಬರನ್ನು ನೇಮಿಸುವಂತೆ ಗುಜರಾತ್ ಸರ್ಕಾರಕ್ಕೆ ಆದೇಶ ನೀಡಿತು. ರಾಜ್ಯದ ಸಿಐಡಿ ಇಲಾಖೆಯ ಐಜಿಪಿ ಶ್ರೀಮತಿ ಗೀತಾ ಜೋಹ್ರಿ ಅವರು ಈ ಕೆಲಸಕ್ಕಾಗಿ ನೇಮಿಸಲ್ಪಟ್ಟರು. ಶ್ರೀಮತಿ ಗೀತಾ ಅವರ ತನಿಖೆ ತನ್ನ ವಿರುದ್ಧವಾಗಿಯೇ ಸಾಗುತ್ತಿದೆ ಎಂದು ತಿಳಿದ ತಕ್ಷಣ ಮೋದಿ ಸರ್ಕಾರ ಶ್ರೀಮತಿ ಗೀತಾ ಅವರನ್ನು ಆ ಹುದ್ದೆಯಿಂದ ವಜಾ ಮಾಡಿತು. ಸರ್ವೋಚ್ಚ ನ್ಯಾಯಾಲಯ ಮೋದಿ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿದಾಗ ಮೋದಿ ಸರ್ಕಾರ ಶ್ರೀಮತಿ ಗೀತಾ ಅವರನ್ನು ವಜಾಗೊಳಿಸಿದ ಆದೇಶವನ್ನು ಹಿಂದಕ್ಕೆ ಪಡೆಯಿತು. ಸೋಹ್ರಾಬುದ್ದೀನ್ ಮತ್ತು ಆತನ ಪತ್ನಿ ಕೌಸಿರ್‌ಬೀ ಅವರ ಹತ್ಯೆ ಪೋಲೀಸ್ ಅಧಿಕಾರಿಗಳಿಂದಲೇ ನಡೆಯಿತು ಎಂಬ ಶ್ರೀಮತಿ ಗೀತಾ ಅವರ ವರದಿ ಸರ್ವೋಚ್ಚ ನ್ಯಾಯಾಲಯದ ಕೈ ಸೇರಿತು. ವಿಧಿ ಇಲ್ಲದೆ ಮೋದಿ ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕಾಯಿತು. ಸರ್ಕಾರ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತದೆ ಎಂದು ತೋರಿಸಿಕೊಳ್ಳಲು ಮೂವರು ಹಿರಿಯ ಪೋಲೀಸ್ ಅಧಿಕಾರಿಗಳನ್ನು ಬಂಧಿಸಲು ಆದೇಶಿಸಲಾಯಿತು. ಅಂದಿನ ಡಿ.ಐ.ಜಿ. ವಂಝಾರ, ಗುಜರಾತಿನ ಇನ್ನೊಬ್ಬ ಪೋಲೀಸ್ ಅಧಿಕಾರಿ ಪಾಂಡ್ಯನ್ ಮತ್ತು ರಾಜಸ್ಥಾನದ ಪೋಲೀಸ್ ಅಧಿಕಾರಿ ದಿನೇಶ್ ಎಂಬುವರೇ ಈಗ ಕಂಬಿ ಎಣಿಸುತ್ತಿರುವ ಪೋಲೀಸ್ ಅಧಿಕಾರಿಗಳು.

ಸೋಹ್ರಾಬುದ್ದೀನ್ ಏಕೆ ಕೊಲೆಯಾದ?

ಸೋಹ್ರಾಬುದ್ದೀನ್ ಹಾಗೂ ಕೌಸರಬೀ ಕೊಲೆ ಪ್ರಕರಣದಲ್ಲಿ ಕೇವಲ ಪೋಲೀಸ್ ಅಧಿಕಾರಿಗಳ ವಿರುದ್ಧ ಮಾತ್ರ ಕ್ರಮ ಜರುಗುವಂತಾದರೆ ಸಾಲದು. ಇವರನ್ನು ಕೊಲ್ಲಲು ಮೋದಿ ಸರ್ಕಾರಕ್ಕೆ ಇದ್ದ ಒತ್ತಡ ಏನು ಎಂಬುದು ತನಿಖೆಯಿಂದ ಹೊರಬರಬೇಕಿದೆ. ಬಿಜೆಪಿಯ ಭಿನ್ನಮತಿಯರು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಹಾ ಅವರೇ ನಿರ್ದೇಶನ ನೀಡಿ ತನ್ನ ಅಣ್ಣನನ್ನು ಕೊಲ್ಲಿಸಿದ್ದಾರೆ ಎಂದು ಹೇಳುತ್ತಿರುವ ರುಬಾಬುದ್ದೀನ್ ಸಿಬಿಐ ತನಿಖೆಗೆ ಆಗ್ರಹಿಸಿದ್ದಾರೆ.

ಸೋಹ್ರಾಬುದ್ದೀನ್ ಗುಜರಾತಿನ ಅಮೃತಶಿಲೆ ಕಲ್ಲುಗಳ ವ್ಯಾಪಾರಿಗಳಿಂದ ಹಣ ಸುಲಿಯುತ್ತಿದ್ದನು. ಆದುದರಿಂದ ಆತನನ್ನು ಮುಗಿಸಲು ಈ ಅಮೃತಶಿಲೆ ವ್ಯಾಪಾರಸ್ಥರು ಈ ಪೋಲೀಸ್ ಅಧಿಕಾರಿಗಳಿಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಕೊಲೆಗಳನ್ನು ಮಾಡಿಸಿದ್ದಾರೆ ಎಂಬ ಸುದ್ದಿ ಗುಜರಾತ್‌ನಲ್ಲಿ ದಟ್ಟವಾಗಿ ಕೇಳಿ ಬರುತ್ತಿವೆ. ಇದರ ಜೊತೆಯಲ್ಲಿ, ಬಿಜೆಪಿಯ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿದ್ದ ಸಂಜಯ್ ಜೋಷಿ ಪ್ರಕರಣವೂ ಪ್ರಸ್ತಾಪಿಸಲ್ಪಡುತ್ತಿದೆ. ಜೋಷಿ ಆರ್.ಎಸ್.ಎಸ್.ನ ಪ್ರಮುಖ ಕಾರ್ಯಕರ್ತ. ಅಡ್ವಾಣಿಯವರು ಜಿನ್ನಾ ಅವರನ್ನು ಹೊಗಳಿ ನೀಡಿದ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಬಹಿರಂಗವಾಗಿ ಅಡ್ವಾಣಿ ಅವರ ರಾಜೀನಾಮೆಗೆ ಒತ್ತಾಯಿಸಿದ್ದು ಇದೇ ಜೋಷಿ. ಆಗ ಮೋದಿ ಕೂಡ ಪರೋಕ್ಷವಾಗಿ ಅಡ್ವಾಣಿ ಜತೆಗಿದ್ದರು. ಜೋಷಿಯಿಂದಾದ ಅವಮಾನವನ್ನು ಸಹಿಸಲಾರದ ಅಡ್ವಾಣಿ ಬಣವು ಜೋಷಿ ಒಬ್ಬ ಮಹಿಳೆಯೊಡನೆ ಕಾಮ ಕೇಳಿಯಲ್ಲಿ ತೊಡಗಿದ್ದ ದೃಶ್ಯಗಳುಳ್ಳ ಸಿಡಿಯೊಂದನ್ನು ಜೋಷಿ ವಿರುದ್ಧ ಪ್ರಯೋಗಿಸಿತ್ತು. ಇದಕ್ಕಾಗಿ ಸೋಹ್ರಾಬುದ್ದೀನನನ್ನು ಬಳಸಲಾಗಿತ್ತು. ಈತನನ್ನು ಉಳಿಯಲು ಬಿಟ್ಟರೆ ತಮ್ಮ ಗುಟ್ಟು ರಟ್ಟಾಗಬಹುದೆಂಬ ಭೀತಿಯಿಂದ ಮೋದಿ ಸೇರಿದಂತೆ ಅಡ್ವಾಣಿ ಬೆಂಬಲದ ಬಣ ಸಂಚು ರೂಪಿಸಿ, ಅಮೃತ ಶಿಲೆ ವ್ಯಾಪಾರಸ್ಥರಿಂದ ಸುಪಾರಿ ಕೊಡಿಸಿ ಈ ಕೊಲೆಗಳನ್ನು ಮಾಡಿಸಲಾಗಿದೆ ಎಂಬ ಗುಮಾನಿ ಬಲವಾಗಿದೆ.

● ನಿತ್ಯಾನಂದಸ್ವಾಮಿ

ಮೋದಿಯೇ ದಾರಿ

ಒಳಕಣ್ಣು ಕುರುಡಾದ ಈ ಕೋಮುವಾದಿ
ಜನಕ್ಕೆಲ್ಲ ಗುರುವಂತೆ ಗುಜರಾತ್ ಮೋದಿ
ಹಿಂಸೆಯಲಿ ಅಧಿಕಾರ ಗದ್ದುಗೆಯ ನೇರಿ
ಕೂಡ್ಸಲಿಕೆ ಮೋದಿಯೇ ಆಗಿಹನು ದಾರಿ

- ವಿಡಂಬಾರಿ

ಕೋಮುವಾದಿಗಳ ಜಾತಿ ರಾಜಕಾರಣ ಬಿಜೆಪಿ ಬಾಲ ಹಿಡಿದಿರುವ ಕಾಂಗ್ರೆಸ್

ರಾಜ್ಯದಲ್ಲಿ ಜೆಡಿ(ಎಸ್) ಮತ್ತು ಬಿಜೆಪಿ ಸಮ್ಮಿಶ್ರಸರ್ಕಾರ ಅಧಿಕಾರಕ್ಕೆ ಬಂದ ನಂತರ ಉತ್ತರ ಕನ್ನಡ ಜಿಲ್ಲೆಯ ರಾಜಕೀಯದಲ್ಲಿ ತೀವ್ರ ಬದಲಾವಣೆಗಳು ಘಟಿಸುತ್ತಿವೆ. ಸಂಘ ಪರಿವಾರ ತನ್ನ ನೆಲೆಯನ್ನು ಗಟ್ಟಿಗೊಳಿಸುವ ತೀವ್ರ ಪ್ರಯತ್ನ ನಡೆಸಿದೆ. ಇದಕ್ಕೆ ಜಾತ್ರೆಗಳನ್ನು, ದೇವಸ್ಥಾನಗಳಲ್ಲಿ ನಡೆಯುವ ಸಾರ್ವಜನಿಕ ಪೂಜೆಗಳನ್ನು ಉಪಯೋಗಿಸಿಕೊಳ್ಳುತ್ತಿದೆ ಭಗವಾಧ್ವಜಗಳನ್ನು ಎಲ್ಲಾ ದೇವಸ್ಥಾನಗಳ ಮೇಲೆ, ಮನೆಗಳ ಮೇಲೆ ಹಾರಿಸಲು ಮುಂದಾಗಿದೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ, ದೊಡ್ಡ ಊರುಗಳಲ್ಲಿ ಹಿಂದೂ ಸಮಾಜೋತ್ಸವ ನಡೆಸಲಾಗಿದೆ. ಸಮಾಜೋತ್ಸವ ನಡೆಯುವ ಪ್ರದೇಶವನ್ನು ಕೇಸರಿಮಯಗೊಳಿಸಲಾಗಿತ್ತು. ಹಲವಾರು ಪ್ರದೇಶಗಳಲ್ಲಿ ಮತ್ತು ಮನೆಗಳ ಮೇಲೆ ಒತ್ತಾಯಪೂರ್ವಕವಾಗಿ ಭಗವಾಧ್ವಜ ಹಾರಿಸಲಾಯಿತು. ಅವರು ಕೂಗುವ ಘೋಷಣೆಗಳು, ವೇಷ ಭೂಷಣಗಳು ಅಲ್ಪಸಂಖ್ಯಾತರಲ್ಲಿ, ಸಾಮಾನ್ಯ ಜನ ವಿಭಾಗಗಳ ಮಧ್ಯ, ಭಯ ಹುಟ್ಟಿಸುವ ರೀತಿಯಲ್ಲಿ ಇದ್ದವು. ಸಾವಿರಾರು ವಾಹನಗಳಲ್ಲಿ ಜನರನ್ನು ಕರೆ ತರಲು ಬಳಸಿದ್ದು, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೃಹತ್ ವೇದಿಕೆ ನಿರ್ಮಾಣ ಮಾಡಿದ್ದು, ಇದೆಲ್ಲಾ ಕೋಟ್ಯಾಂತರ ರೂಪಾಯಿ ಖರ್ಚಿನ ವ್ಯವಹಾರ. ಇದು ಹೇಗೆ ಸಾಧ್ಯವಾಯಿತು, ಇಷ್ಟು ಹಣ ಎಲ್ಲಿಂದ ಬಂತು ಎನ್ನುವ ಪ್ರಶ್ನೆ ಜನತೆಯ ಮುಂದೆ ಇದೆ. ಉತ್ತರ ಸ್ಪಷ್ಟವಿದೆ. ಸರ್ಕಾರ ಬಂದ ನಂತರ ಗುತ್ತಿಗೆದಾರರಿಂದ ಅಧಿಕಾರಿಗಳಿಂದ ಅಲ್ಲದೆ ಇತರ ಮೂಲದಿಂದ ಬೇನಾಮಿ ಹಣ ಸಂಗ್ರಹ ನಡೆಸಿರುವರು.

ಜಾತಿ ಸಂಘರ್ಷಕ್ಕೆ ಪ್ರಚೋದನೆ

ಇನ್ನೊಂದು ಕಡೆ ಬಿಜೆಪಿ ಜಿಲ್ಲೆಯಲ್ಲಿರುವ 4 ಎಂ.ಎಲ್.ಎ. ಹಾಗೂ ಒಬ್ಬ ಎಂ.ಪಿ.ಮೂಲಕ ಎಲ್ಲಾ ಸಣ್ಣಪುಟ್ಟ ಜಾತಿಗಳನ್ನು 'ಜಾತಿ ಸಂಘ' ಕಟ್ಟಿಕೊಳ್ಳುವಂತೆ ಪ್ರಚೋದಿಸುತ್ತಿರುವುದು ಇದರ ಭಾಗವಾಗಿ ಇತ್ತೀಚೆಗೆ ಕುಮಟಾದಲ್ಲಿ ಬೃಹತ್ 'ನಾಮಧಾರಿ' (ಈಡಿಗ)ಗಳ 'ಗುರುವಂದನಾ' ಕಾರ್ಯಕ್ರಮ. ಜಿಲ್ಲೆಯಲ್ಲಿ ನಾಮಧಾರಿಗಳು ಹಿಂದುಳಿದ ಜನಾಂಗ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದರೆ ಜನಸಂಖ್ಯೆಯಲ್ಲಿ ಒಂದನೇ ಸ್ಥಾನದಲ್ಲಿದ್ದಾರೆ. ಮತದಾರರು ಹೆಚ್ಚು. ಇದನ್ನು ಗಮನಿಸಿ, ಸಂಘ ಪರಿವಾರದ ಕಟ್ಟಾಳು, ಭಟ್ಕಳ ಎಂ.ಎಲ್.ಎ ಶಿವಾನಂದ ನಾಯ್ಕನನ್ನು ಮಂತ್ರಿ ಮಾಡಲಾಯಿತು. ಅವರ ಮೂಲಕವೇ 'ಗುರು ವಂದನಾ' ಕಾರ್ಯಕ್ರಮ ನಡೆಸಿ 'ವೋಟ್ ಬ್ಯಾಂಕ್' ನಿರ್ಮಾಣಕ್ಕೆ ಮುಂದಾಯಿತು.

ಕಾಂಗ್ರೆಸ್‌ನ ಕೆಲವು 'ನಾಮಧಾರಿ' ಜಾತಿಗೆ ಸೇರಿದ ಮುಖಂಡರು ಇದನ್ನು ಅರಿಯಲು ಸಂಪೂರ್ಣ ವಿಫಲರಾಗಿ ಗುರುವಂದನಾ ಕಾರ್ಯಕ್ರಮದ ಯಶಸ್ವಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬಿಜೆಪಿ ಮಡಿಲಿಗೆ ಬಹುಸಂಖ್ಯಾತ ನಾಮಧಾರಿಗಳನ್ನು ಅರ್ಪಿಸಿ ಬಿಡಲು ಯತ್ನಿಸಿದರು. ಈಗ ಒಂದು ಮಠ ಹಾಗೂ ಗುರುವನ್ನು ನೇಮಿಸಲು ತೀರ್ಮಾನಿಸಿದ್ದಾರೆ.

ಕಾಂಗ್ರೆಸ್‌ನ ದಿವಾಳಿತನ

ಇದು ಸಂಘ ಪರಿವಾರದ ಗುಪ್ತ ಅಜೆಂಡಾ ಜಾರಿ ಭಾಗವಾಗಿ ನಡೆಯುತ್ತಿರುವುದು. ಕಾಂಗ್ರೆಸ್‌ನ ಕೆಲ ಮುಖಂಡರು ಕುರಿಗಳು ಸಾಲಾಗಿ ಹಳ್ಳಕ್ಕೆ ಬಿದ್ದಹಾಗೆ ಬೀಳುತ್ತಿದ್ದಾರೆ, ಸೈದ್ಧಾಂತಿಕ ದಿವಾಳಿತನದಿಂದ. ಆದರೆ ಜಿಲ್ಲೆಯ ನಾಮಧಾರಿಗಳಲ್ಲಿ ಪ್ರಭಾವ ಹೊಂದಿರುವ ರಾಜಕಾರಣಿ ಎಸ್.ಬಂಗಾರಪ್ಪ 'ಗುರುವಂದನೆ' ಯಲ್ಲಿ ಭಾಗವಹಿಸದೇ ಇರುವುದು ಒಂದು ಗಮನಿಸಬೇಕಾದ ಅಂಶ.

ಇಷ್ಟೆಲ್ಲಾ ಸಂಘ ಪರಿವಾರ, ಬಿಜೆಪಿ ಕಸರತ್ತು ನಡೆಸುತ್ತಿದ್ದರು ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಹಲವಾರು ವೈಫಲ್ಯಗಳ ಬಗ್ಗೆ ಜನತೆ ಮಾತ್ರ ಪ್ರತಿಭಟನೆ ನಡೆಸುತ್ತಿದ್ದಾರೆ.

ರೇಷನ್ ಕಾರ್ಡ್ ಯೂನಿಟ್ ಪದ್ಧತಿ ಜಾರಿ ವಿರುದ್ಧ, ಕುಡಿಯುವ ನೀರು, ರಸ್ತೆಗಳು, ಮೀನುಗಾರರ ಸಮಸ್ಯೆ ಇತ್ಯಾದಿ ಬೇಡಿಕೆಗಳ ಮೇಲೆ ಜನ ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಬಿಜೆಪಿ ಯಲ್ಲಿರುವ ಒಳಜಗಳ ಸಹ ಅವರಿಗೆ ಆಪತ್ತಾಗಿ ಬರುತ್ತಿದೆ.

ಶಾಂತಾರಾಮ ಎಸ್.ನಾಯಕ

ನಮಗೆಂಥ ರಾಷ್ಟ್ರಪತಿ ಬೇಕು ?

ಪುಟ 9 ರಿಂದ

ಹೀಗೆ ರಾಷ್ಟ್ರಪತಿಗಳು ಮತ್ತು ಅವರು ನೇಮಿಸಿದ ವ್ಯಕ್ತಿಗಳಲ್ಲಿಯೇ ಇಡೀ ದೇಶದ ಅಧಿಕಾರ ಕೇಂದ್ರಿಕೃತಗೊಂಡಿದೆ. ಇಂತಹ ಅಪರಿಮಿತ ಅಧಿಕಾರಕ್ಕೆ ಇರುವ ಒಂದು ಅಂಕುಶವೆಂದರೆ ರಾಷ್ಟ್ರಪತಿಗಳು ಈ ಎಲ್ಲಾ ಅಧಿಕಾರವನ್ನು ಅವರ ಸಚಿವ ಸಂಪುಟದ ಸಹಾಯ ಮತ್ತು ಸಲಹೆಯಂತೆಯೇ ನಿರ್ವಹಿಸಬೇಕು. ಈ ಸಚಿವ ಸಂಪುಟ ಸಂಸದೀಯ ಪ್ರಜಾಪ್ರಭುತ್ವದ ಪರಂಪರೆಯ ಪ್ರಕಾರ ಸಂಸತ್ತಿನ ವಿಶ್ವಾಸವನ್ನು ಪಡೆದಿರುವವರೆಗೆ ಸಚಿವ ಸಂಪುಟದ ಸಲಹೆಯಂತೆಯೇ ನಡೆಯಬೇಕು. ಹಾಗೆಯೇ ರಾಜ್ಯಗಳಲ್ಲಿ ರಾಷ್ಟ್ರಪತಿಗಳ ನೇಮಕಾತಿಯಾದ ರಾಜ್ಯಪಾಲರು ರಾಜ್ಯ ವಿಧಾನಸಭೆಯ ವಿಶ್ವಾಸವನ್ನು ಪಡೆದಿರುವ ತನಕ ಆ ಸಚಿವ ಸಂಪುಟದ ಸಲಹೆಯಂತೆಯೇ ನಡೆಯಬೇಕು.

ಆದರೆ ಆ ಸಚಿವ ಸಂಪುಟವನ್ನು ನೇಮಿಸುವವರು ರಾಷ್ಟ್ರಪತಿ ಮತ್ತು ರಾಜ್ಯಪಾಲರುಗಳೇ. ಆ ಸಚಿವ ಸಂಪುಟಗಳು ರಾಷ್ಟ್ರಪತಿಗಳ ರಾಜ್ಯಪಾಲಕರ ಇಚ್ಛೆಯಿರುವವರೆಗೆ ಅಧಿಕಾರ ದಲ್ಲಿರಬಹುದು. ಇದು ಸಂವಿಧಾನದ ನುಡಿಗಳು.

ಅಸಾಮಾನ್ಯ ಪರಿಸ್ಥಿತಿಗಳಲ್ಲಿ

ಸಾಮಾನ್ಯ ಪರಿಸ್ಥಿತಿಗಳಲ್ಲಿ ಸಚಿವ ಸಂಪುಟದ ನೇಮಕಾತಿ ಮತ್ತು ರಾಷ್ಟ್ರಪತಿಗಳ ಅಧಿಕಾರ ಈ ಮೇಲಿನಂತೆಯೇ ನಡೆಯುತ್ತ ಹೋಗುತ್ತದೆ. ಆದರೆ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ರಾಜಕೀಯ ವ್ಯವಸ್ಥೆ ಬಿಕ್ಕಟ್ಟಿಗೊಳಗಾದಾಗ ಈ ಎಲ್ಲ ಅಧಿಕಾರ ನಿರ್ವಹಣೆ ಹೇಗೆ? ಈ ಪ್ರಶ್ನೆ ನಮ್ಮ ಮುಂದೆ ದುತ್ತೆಂದು ನಿಲ್ಲುತ್ತದೆ. ರಾಜ್ಯಗಳಲ್ಲಿ ಬಹುಮತದ ಅಭಾವ ಪಕ್ಷಾಂತರಗಳು, ಪಕ್ಷಗಳ ವಿಭಜನೆಗಳು ಇತ್ಯಾದಿಗಳಿಂದ ರಾಜಕೀಯ ಅನಿಶ್ಚಯತೆ ಮೂಡಿದಾಗ ರಾಜ್ಯಪಾಲರುಗಳು ಏನೆಲ್ಲಾ ಆಟಗಳನ್ನಾಡಿದ್ದಾರೆ, ರಾಜ್ಯಪಾಲರ ಭವನಗಳು ಹೇಗೆ ರಾಜಕೀಯ ಒಳಸಂಚಿನ ಬೀಡುಗಳಾಗಿವೆ ಎಂಬುದು ಅನೇಕ ಬಾರಿ ನಮ್ಮ ದೇಶದ ಜನಕ್ಕೆ ಅನುಭವವಾಗಿದೆ. ಪ್ರಜಾಪ್ರಭುತ್ವದ ಎಲ್ಲ ತತ್ವಗಳನ್ನೂ ಗಾಳಿಗೆ ತೂರಿ ರಾಜ್ಯ ಸರ್ಕಾರಗಳನ್ನು ವಜಾ ಮಾಡಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. 1959ರಲ್ಲಿ ಕೇರಳ ರಾಜ್ಯ ಸರ್ಕಾರವನ್ನು ವಜಾ [illegible]

ಅಂತಹ ಪರಿಸ್ಥಿತಿ ರಾಷ್ಟ್ರಮಟ್ಟದಲ್ಲಿ ಬರಬಾರದೆಂದಿದೆಯೇ? ರಾಷ್ಟ್ರಮಟ್ಟದಲ್ಲಿ ಅಂತಹ ಪರಿಸ್ಥಿತಿ ಉದ್ಭವಿಸಿದಾಗ ಪ್ರಜಾಪ್ರಭುತ್ವದ ಮೂಲ ತತ್ವಗಳನ್ನು ಅದೇ ರೀತಿಯಲ್ಲಿ ಗಾಳಿಗೆ ತೂರುವುದಿಲ್ಲ ಎನ್ನುವುದಕ್ಕೆ ಗ್ಯಾರಂಟಿ ಇದೆಯೇ?

ಲೋಕಸಭೆಯ ಅಭಿಮತವನ್ನು ಮತ್ತು ಆ ಮೂಲಕ ಪ್ರಜೆಗಳ ಅಭಿಮತವನ್ನು ಗಾಳಿಗೆ ತೂರಿದರೆ ಸಂವಿಧಾನಬದ್ಧವಾಗಿಯೇ ಮಿಲಿಟರಿ ಸರ್ವಾಧಿಕಾರವನ್ನು ಹೇರುವುದಕ್ಕೆ ಅವಕಾಶವಿದೆ. ಪ್ರಜಾಪ್ರಭುತ್ವವನ್ನು ದುಡಿಯುವ ಜನ ವಿಭಾಗಗಳು ಸರಿಯಾಗಿ ಬಳಸಿಕೊಳ್ಳಲು ಆರಂಭಿಸಿದರೆ ಮತ್ತು ಬಂಡವಾಳಶಾಹಿ ಮತ್ತು ಭೂ ಮಾಲಕ ಆಳುವ ವರ್ಗಗಳ ಹಿಡಿತದಿಂದ ಹೊರಬಂದರೆ ಆಗ ಆ ವರ್ಗಗಳು ಪ್ರಜಾಪ್ರಭುತ್ವವನ್ನು ಕಾಲಿನಡಿ ಹೊಸಕಿಹಾಕುವಕ್ಕೇನೂ ಹಿಂಜರಿಯುವುದಿಲ್ಲ.

ಇದನ್ನು ಇತ್ತೀಚೆಗೆ ತಾನೆ ನಮ್ಮ ನೆರೆಯ ದೇಶಗಳಾದ ನೇಪಾಳ ಮತ್ತು ಬಾಂಗ್ಲಾದೇಶಗಳಲ್ಲಿ ನೋಡಿದ್ದೇವೆ. ಪಾಕಿಸ್ತಾನದಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗಿದೆ. ಮೂರನೇ ಜಗತ್ತಿನ ಅನೇಕ ದೇಶಗಳಲ್ಲಿ ಸರ್ವಾಧಿಕಾರಗಳು ಸಂವಿಧಾನದ ಹೆಸರಿನಲ್ಲಿಯೇ ಸ್ಥಾಪನೆಯಾಗಿರುವುದನ್ನು ನೋಡಿದ್ದೇವೆ.

ಭಾರತದ ಪ್ರಭುತ್ವದ ಪ್ರಧಾನ ಅಧಿಕಾರಗಳೆಲ್ಲವನ್ನೂ ರಾಷ್ಟ್ರಪತಿಗಳ ಹುದ್ದೆಯಲ್ಲಿ ಕೇಂದ್ರೀಕರಿಸುವ ಮೂಲಕ ಭಾರತದ ಪ್ರಭುತ್ವಾಧಿಕಾರ ತಮ್ಮ ಕೈ ತಪ್ಪಿ ಹೋಗದಂತೆ ನೋಡಿಕೊಳ್ಳುವ ಒಂದು ಪ್ರಮುಖ ಸಾಧನವನ್ನು ಆಳುವವರ್ಗಗಳು ಸಂವಿಧಾನದಲ್ಲಿ ತುರುಕಿವೆ.

ಸಿಪಿಐ(ಎಂ) ಪಕ್ಷ ಭಾರತದ ಪ್ರಜಾಪ್ರಭುತ್ವದ ಸ್ವರೂಪವನ್ನು ವಿಶ್ಲೇಷಣೆ ಗೊಳಪಡಿಸಿ 1964ರಲ್ಲಿಯೇ ಸ್ಪಷ್ಟವಾಗಿ ಭಾರತದ ಜನತೆಗೆ ಸಾರಿ ಹೇಳಿದೆ.

ಭಾರತದ ಸಂಸದೀಯ ವ್ಯವಸ್ಥೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ಬೆದರಿಕೆ ಯಿರುವುದು ದುಡಿಯುವ ಜನಗಳು ಮತ್ತು ಅವರ ಹಿತಗಳನ್ನು ಪ್ರತಿನಿಧಿಸುವ ಪಕ್ಷಗಳಿಂದಲ್ಲ. ಈ ಬೆದರಿಕೆ ಶೋಷಕ ವರ್ಗಗಳಿಂದ ಬರುತ್ತದೆ. ಅವರೇ ತಮ್ಮ ಸಂಕುಚಿತ ಹಿತಾಸಕ್ತಿಯಿಂದ ದುಡಿಯುವ ಜನರನ್ನು ತುಳಿಯಲು ಪಾರ್ಲಿಮೆಂಟರಿ ಪದ್ಧತಿಯನ್ನು ಒಳಗಿನಿಂದ ಹಾಗೂ ಹೊರಗಿನಿಂದ ಕೊರೆದು ಹಾಕುತ್ತಾರೆ.... ನಮ್ಮ ದೇಶ ಇಂತಹ ಬೆದರಿಕೆಗಳಿಂದ ದೂರವಾಗಿದೆ [illegible] ಅಪಾಯಕಾರಿ ಭ್ರಮೆ. ಅಂತಹ ಬೆದರಿಕೆಗಳಿಂದ ಸಂಸದೀಯ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಜನಗಳ ಹಿತಕ್ಕಾಗಿ ಸಂರಕ್ಷಿಸುವುದು ಅತಿ ಪ್ರಮುಖವಾದುದು.

ಕೋಮುವಾದಿ ಶಕ್ತಿಗಳು ರಾಷ್ಟ್ರಾಧಿಕಾರದ ವಿವಿಧ ಅಂಗಗಳಲ್ಲಿ ತೂರಿಕೊಂಡಿರುವ ಸಂವಿಧಾನವನ್ನೇ ತಿರುಚಲು ಪ್ರಯತ್ನಿಸಿರುವ ಜಾಗತೀಕರಣ ನೀತಿಗಳ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಗಳ ಮಧ್ಯಪ್ರವೇಶ ಅನೇಕ ರೀತಿಯಲ್ಲಿ ಹೆಚ್ಚುತ್ತಿರುವಾಗ ಮಿಲಿಟರಿ ಮತ್ತು ಅಧಿಕಾರಿಗಳ ಮಟ್ಟದಲ್ಲಿ ಹೆಚ್ಚು ಹೆಚ್ಚು ಸಹಕಾರ ಬೆಳೆಯುತ್ತಿರುವಾಗ ಈ ಅಪಾಯ ಮತ್ತಷ್ಟು ಹೆಚ್ಚಿದೆ. ಇಂದು ತಮ್ಮ ಜಾಗತೀಕರಣ ಪರ ನೀತಿಗಳನ್ನು ಸಂಸತ್ತಿನ ಮೂಲಕ ಜಾರಿಗೆ ತರಲು ಕಷ್ಟವಾಗುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯಗಳನ್ನು ನಿರ್ಲಜ್ಜೆಯಿಂದ ಬಳಸಿಕೊಳ್ಳುತ್ತಿರುವ ಭಾರತದ ಶೋಷಕ ವರ್ಗ ರಾಷ್ಟ್ರಪತಿಗಳ ಹುದ್ದೆಯನ್ನು ಈಗಾಗಲೇ ಹಲವು ಬಾರಿ ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿರುವ ಈ ಹುದ್ದೆಯನ್ನು ದುರುಪಯೋಗಪಡಿಸಿಕೊಳ್ಳುವ ಯೋಜನೆ ಮಾಡುವುದಿಲ್ಲವೇ? ಆದ್ದರಿಂದ ರಾಷ್ಟ್ರಪತಿಯಾಗುವ ವ್ಯಕ್ತಿಯ ಆಯ್ಕೆ ಸಾಧ್ಯವಾದಷ್ಟೂ ಪ್ರಜಾಪ್ರಭುತ್ವಕ್ಕೆ ಬದ್ಧನಾಗಿರುವ ಸಂಸದೀಯ ಪ್ರಜಾಪ್ರಭುತ್ವದ ಅನುಭವವುಳ್ಳ ದೃಢವಾದ ಜಾತ್ಯಾತೀತ ಬದ್ಧತೆಯ ಮೇಲೆ ಆಧಾರವಾಗಿರಬೇಕಾದ ಅವಶ್ಯಕತೆ ಇದೆ. ಇದು ಕೂಡ ವರ್ಗ ಸಂಘರ್ಷದ ಒಂದು ಅಂಗವೇ ಆಗಿದೆ. ■

ಮುಂದಿನ ರಾಷ್ಟ್ರಪತಿ ಹೇಗಿರಬೇಕು?

ಜೂನ್ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆ ಕುರಿತ ಉಹಾಪೋಹಗಳ ಸಮೀಕ್ಷೆಗಳ ಸುರಿಮಳೆ ಸಾಗಿದೆ. ರಾಷ್ಟ್ರಪತಿಯಾಗಿ ಅಬ್ದುಲ್ ಕಲಾಂ ಮುಂದುವರಿಯಬೇಕೆ? ಇಲ್ಲಾ ಉಪರಾಷ್ಟ್ರಪತಿ ಮೇಲಕ್ಕೇರಬೇಕೆ? ಎಂಬುದು ಒಂದೆಡೆಯಾದರೆ, ಪ್ರಣಾಬ್ ಮುಖರ್ಜಿ, ಸೋಮನಾಥಚಟರ್ಜಿಯವರ ಹೆಸರೂ, ಅದರ ಬಗ್ಗೆ ಲೇಖನ, ವಿಮರ್ಶೆಗಳು ಮಾಧ್ಯಮಗಳಲ್ಲಿ ಮೂಡುತ್ತಿವೆ. ಕೆಲವರಂತೂ ಅವರಿಬ್ಬರ ಪರಲಾಬಿ ನಡೆಸಲು ತೊಡಗಿದ್ದರು.

ದೇಶದ ಪ್ರಥಮ ಪ್ರಜೆ ಎಂದೇ ಬಿಂಬಿತವಾಗಿರುವ ರಾಷ್ಟ್ರಪತಿ ಹುದ್ದೆಗೆ ಯಾವ ವ್ಯಕ್ತಿ ಆಯ್ಕೆ ಆಗುತ್ತಾರೆ ಎನ್ನುವುದಕ್ಕಿಂತ ಅವರ ಹಿನ್ನೆಲೆ ಏನು ಎಂಬುದೇ ಪ್ರಮುಖವಾಗುತ್ತದೆ. ಸಂವಿಧಾನದಲ್ಲಿ ಒತ್ತಿಹೇಳಿದ ಧರ್ಮ ನಿರಪೇಕ್ಷತೆಯ ಜಾತ್ಯಾತೀತ ಮನೋಭಾವದ ವಾತಾವರಣ ಕಲುಷಿತಗೊಳ್ಳುತ್ತಿರುವಾಗಲೇ ರಾಜಕೀಯ ಹಿನ್ನೆಲೆಯುಳ್ಳ, ಭಾರತವನ್ನು ಸಮಗ್ರವಾಗಿ ಗ್ರಹಿಸಬಲ್ಲ, ಜಾತ್ಯಾತೀತ ವ್ಯಕ್ತಿ ಅತ್ಯಂತ ಅಗತ್ಯ ಎಂದು ಹೇಳುತ್ತಾರೆ. ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ 1992 ಡಿಸೆಂಬರ್ 6ರ ಘಟನೆಯ ನಂತರ ಇದು ಹೆಚ್ಚು ಪ್ರಸ್ತುತವಾಗಿದೆ ಎಂದು ಅವರು ಹೇಳುತ್ತಾರೆ.

ಸಿಪಿಐ(ಎಂ), ಸಿಪಿಐ, ಫಾರ್ವಡ್ ಬ್ಲಾಕ್, ಆರ್.ಎಸ್.ಪಿ. ಪಕ್ಷಗಳ ಜಂಟಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸುವ ಅಭ್ಯರ್ಥಿ ಕನಿಷ್ಠ ಈ ಕೆಳಗಿನ ಅಂಶಗಳನ್ನು ಹೊಂದಿರಬೇಕೆಂದು ಸ್ಪಷ್ಟಪಡಿಸಿದರು.

1. ದೇಶದ ರಾಜಕೀಯ ವ್ಯವಸ್ಥೆಯ ಕಾರ್ಯ ನಿರ್ವಹಣೆಯ ಕುರಿತು ಅರಿವು.

2. ಪ್ರಭುತ್ವದ ಮೂರು ಅಂಗಗಳಾದ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವಿನ ಸಂಬಂಧ ಕುರಿತು ಆಳವಾದ ತಿಳುವಳಿಕೆ.

3. 1992ರ ಕರಾಳ ಘಟನೆಯ ಹಿನ್ನೆಲೆಯಲ್ಲಿ ಸಂವಿಧಾನದ ಧರ್ಮ ನಿರಪೇಕ್ಷೆಯ ಸಿದ್ಧಾಂತಗಳನ್ನು ಎತ್ತಿ ಹಿಡಿಯಬಲ್ಲ ಜಾತ್ಯಾತೀತ ನಿಲುವು.

ಪ್ರಕಾಶ್‌ಕಾರಟ್ ತಮ್ಮ ಮಾತನ್ನು ಮುಂದುವರಿಸುತ್ತಾ, ಉಪರಾಷ್ಟ್ರಪತಿ ಹುದ್ದೆಯ ಕುರಿತು ಯಾವುದೇ ಚರ್ಚೆ ನಡೆದಿಲ್ಲವೆಂದು ಸ್ಪಷ್ಟ ಪಡಿಸದರಲ್ಲದೆ, ಎಡ ಪಕ್ಷಗಳು ರಾಷ್ಟ್ರಪತಿ ಹುದ್ದೆಗೆ ಯಾವುದೇ ಹೆಸರನ್ನು ಸೂಚಿಸುವುದಿಲ್ಲ. ಬದಲಾಗಿ ಯುಪಿಎ ನ ಅಂಗಪಕ್ಷಗಳು ಹಾಗೂ ಅದರ ಜೊತೆಗಿರುವ ಇತರ ಪಕ್ಷಗಳೊಂದಿಗೆ ಚರ್ಚೆ ನಡೆಸುವವು ಎಂದು ಹೇಳಿದ್ದಾರೆ.

ಅಲ್ಬಾ - ದುಷ್ಟ ತ್ರಿಮೂರ್ತಿಗಳಿಗೆ ಲ್ಯಾಟಿನ್ ಅಮೆರಿಕಾ ಬದಲಿ



ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆ, ಐ.ಎಂ.ಎಫ್ - ಇವು ದುಡಿಯುವ ಜನತೆಯನ್ನು ಎಲ್ಲೆಡೆ ಕಾಡುವ ದುಷ್ಟ ತ್ರಿಮೂರ್ತಿಗಳು. ವೆನೆಜುವೆಲಾದ ಅಧ್ಯಕ್ಷ ಚವೇಝ್ ಇವರ ನಾಯಕತ್ವದಲ್ಲಿ ಲ್ಯಾಟಿನ್ ಅಮೆರಿಕಾ ಇವಕ್ಕೆಲ್ಲಾ ಪರಿಹಾರ ಕಂಡುಕೊಂಡಿದೆ. ಅದೇ ಅಲ್ಬಾ (ಅಮೆರಿಕಾಕ್ಕೆ ಬೊಲಿವಾರಿಯನ್ ಬದಲಿ) ಎಂಬ ಖಂಡವ್ಯಾಪಿ ಸಂಘಟನೆ. ಬೊಲಿವರ್ 19ನೇ ಶತಮಾನದ ಲ್ಯಾಟಿನ್ ಅಮೆರಿಕಾದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಪ್ರಸಿದ್ಧ ನಾಯಕ. ಇತ್ತೀಚಿನ ವರ್ಷಗಳ ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಸಾಮಾಜಿಕ ಚಳುವಳಿಗಳಿಗೆ (ಅದರಲ್ಲೂ ವೆನೆಜುವೆಲಾದ ಎಡ-ಪ್ರಗತಿಪರ ಚಳುವಳಿಗೆ) ಬೊಲಿವರ್ ಸ್ಫೂರ್ತಿ ಆಗಿದ್ದಾರೆ. ಅಲ್ಬಾ ಇಂತಹ ಚಳುವಳಿಗಳ ಒಕ್ಕೂಟ. ಇತ್ತೀಚೆಗೆ ವೆನೆಜುವೆಲಾದಲ್ಲಿ ನಡೆದ ಅಲ್ಬಾದ ಐದನೇಯ ಶೃಂಗಸಭೆಯಲ್ಲಿ ಈ ಬಗ್ಗೆ ಹಲವು ಪ್ರಮುಖ ಒಪ್ಪಂದಗಳಿಗೆ ಬರಲಾಯಿತು. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಲ್ಬಾವನ್ನು ಸುಸಂಘಟಿತಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಲ್ಯಾಟಿನ್ ಅಮೆರಿಕಾದ ದೇಶಗಳನ್ನು ಒಳಗೊಳ್ಳುವ ಹಲವು ಜಂಟಿ ಕಾರ್ಯಕ್ರಮಗಳನ್ನು - ಅಲ್ಬಾ ಶಿಕ್ಷಣ, ಅಲ್ಬಾ ಆರೋಗ್ಯ, ಅಲ್ಬಾ ಸಂಸ್ಕೃತಿ, ಅಲ್ಬಾ ಆಹಾರ, ಅಲ್ಬಾ ದೂರಸಂಪರ್ಕ, ಅಲ್ಬಾ ಸಾಗಾಣಿಕೆ, ಅಲ್ಬಾ ಕೈಗಾರಿಕೆ, ಅಲ್ಬಾ ವಾಣಿಜ್ಯ, ಅಲ್ಬಾ ಶಕ್ತಿ - ನಡೆಸುವ ನಿಟ್ಟಿನಲ್ಲಿ ನಿರ್ದಿಷ್ಟ ಪ್ರಸ್ತಾವಗಳ ಬಗ್ಗೆ ಒಪ್ಪಂದಕ್ಕೆ ಬರಲಾಯಿತು ಎನ್ನುವುದು ಶೃಂಗಸಭೆಯ ವಿಶೇಷತೆ. ವೆನೆಜುವೆಲಾ ಮತ್ತು ಕ್ಯೂಬಾದ ಸಾಮಾಜಿಕ ಕಾರ್ಯಕ್ರಮಗಳನ್ನು ಎಲ್ಲಾ ಅಲ್ಬಾ ದೇಶಗಳಿಗೆ ವಿಸ್ತರಿಸುವ ಬಗೆಗೂ ಒಪ್ಪಂದಕ್ಕೆ ಬರಲಾಯಿತು. ಅಲ್ಬಾ ಶಕ್ತಿ ಕಾರ್ಯಕ್ರಮದಲ್ಲಿ ಅಲ್ಬಾ ದೇಶಗಳಿಗೆಲ್ಲ ವೆನೆಜುವೆಲಾದ ತೈಲ ಸರಬರಾಜು, ಈ ಪ್ರದೇಶದಲ್ಲಿ ವಿಪುಲವಾಗಿ ಲಭ್ಯವಿರುವ ಪ್ರಾಕೃತಿಕ ಗ್ಯಾಸ್ ಮತ್ತು ಎಲ್ಲಾ ಇಂಧನಗಳ ದಕ್ಷ ಬಳಕೆ ಆಧಾರಿತ ಪ್ರಾದೇಶಿಕ ಶಕ್ತಿ ವ್ಯವಸ್ಥೆ, ಹೈತಿ, ನಿಕರಾಗುವ, ಇಕ್ವಡೋರ್, ಬೊಲಿವಿಯ, ಡೊಮಿನಿಕಾ ಮತ್ತು ಕ್ಯೂಬಾಗಳಲ್ಲಿ ತೈಲ ಶುದ್ಧೀಕರಣ ಘಟಕ ಮತ್ತು ಹೈತಿಯಲ್ಲಿ ಪೆಟ್ರೋಕೆಮಿಕಲ್ ಘಟಕದ ಸ್ಥಾಪನೆ - ಮುಂತಾದವು ಸೇರಿದೆ.

ಅಲ್ಬಾ ಲ್ಯಾಟಿನ್ ಅಮೆರಿಕಾದ ದೇಶಗಳ ನಡುವೆ ಆರ್ಥಿಕ ಸಹಕಾರ-ಸಂಬಂಧಗಳು, ವ್ಯಾಪಾರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ ಒಮ್ಮತಕ್ಕೆ ಬರುವ ವೇದಿಕೆ ಆಗಲಿದೆ. ಲ್ಯಾಟಿನ್ ಅಮೆರಿಕಾದ ಆರ್ಥಿಕ ಸಮಗ್ರೀಕರಣಕ್ಕೆ ಹೊಸ ಮಾದರಿಯೊಂದನ್ನು ಹಾಕಿಕೊಡಲಿದೆ. ಈ ವಿಷಯಗಳಲ್ಲಿ ಲ್ಯಾಟಿನ್ ಅಮೆರಿಕಾದ ಜನತೆಯ ಹಿತಾಸಕ್ತಿಗೆ ವಿರುದ್ಧವಾಗಿ ಹಸ್ತಕ್ಷೇಪ ಮಾಡುತ್ತಿದ್ದ ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆ, ಐ.ಎಂ.ಎಫ್ - ಎಂಬ ದುಷ್ಟ ತ್ರಿಮೂರ್ತಿಗಳಿಗೆ ಬದಲಿ ರೂಪಿಸಲಿದೆ. ದುಷ್ಟ ತ್ರಿಮೂರ್ತಿಗಳಿಗೆ ಬುದ್ಧಿ ಕಲಿಸುವ ದಿಕ್ಕಿನಲ್ಲೂ ಸಕ್ರಿಯವಾಗಿದೆ. 'ಹೂಡಿಕೆಯ ವಿವಾದಗಳಿಗೆ ಪರಿಹಾರಕ್ಕಾಗಿ ಅಂತರಾಷ್ಟ್ರೀಯ ಕೇಂದ್ರ' (ವಿಶ್ವ ಬ್ಯಾಂಕ್ ನ ಒಂದು ಸಂಘಟನೆ) ದಿಂದ ಅಲ್ಬಾ ದೇಶಗಳು ಹೊರಬರುವ ಬೊಲಿವಿಯದ ಪ್ರಸ್ತಾವಕ್ಕೆ ಅನುಮೋದನೆ ದೊರಕಿತು. ಈ ಕೇಂದ್ರ 2005ರಲ್ಲಿ ಬೊಲಿವಿಯದ 'ಗ್ಯಾಸ್ ಸಮರ'ದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ನಿಂತು, ಅವುಗಳ 'ನಷ್ಟ' ತುಂಬಿಕೊಡಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರಿತ್ತು. ವೆನೆಜುವೆಲಾ ಸರ್ಕಾರ ಟೀವಿ ಸ್ಟೇಶನ್ ಒಂದರ (ಜನ-ವಿರೋಧಿ ಚಟುವಟಿಕೆಯಿಂದಾಗಿ) ಪ್ರಸಾರ ಲೈಸೆನ್ಸ್ ರದ್ದು ಮಾಡಿದ್ದರ ವಿರುದ್ಧ 'ತನಿಖೆ' ನಡೆಸುತ್ತಿರುವ ಓ.ಎ.ಎಸ್ (ಲ್ಯಾಟಿನ್ ಅಮೆರಿಕದ ದೇಶಗಳ ಸಂಘಟನೆ)ನ ಮಾನವ ಹಕ್ಕು ಕಮಿಶನ್ ವೆನೆಜುವೆಲಾ ಸರ್ಕಾರವನ್ನು ದೋಷಿ ಎಂದು ಆರೋಪಿಸಿದರೆ, ಓ.ಎ.ಎಸ್ ನಿಂದ ಹೊರಬರಬೇಕು ಎಂದು ಅಲ್ಬಾ ತೀರ್ಮಾನಿಸಿದೆ. ಓ.ಎ.ಎಸ್ ಬುಶ್‌ನ ಬಾಲಬಡುಕ ಸಂಘಟನೆ. ಅಮೆರಿಕಾದ ಅಜೆಂಡಾ ಲ್ಯಾಟಿನ್ ಅಮೆರಿಕಾದ ದೇಶಗಳ ಮೇಲೆ ಹೊರಿಸಲು ಪ್ರಯತ್ನಿಸುತ್ತಿರುವ ಸಂಘಟನೆ.


ಅಲ್ಬಾ ಶೃಂಗಸಭೆಯಲ್ಲಿ ಬೊಲಿವಿಯ, ನಿಕರಾಗುವ, ಹೈತಿ, ವೆನೆಜುವೆಲಾ, ಕ್ಯೂಬಾ, ಇಕ್ವಡೋರ್, ಉರುಗ್ವೆ ಮುಂತಾದ ದೇಶಗಳ ಸರ್ಕಾರದ ಹಿರಿಯ ಪ್ರತಿನಿಧಿ (ಹೆಚ್ಚಾಗಿ ಆಧ್ಯಕ್ಷ, ಪ್ರಧಾನಿ ಇತ್ಯಾದಿ) ಗಳು ಬಂದಿದ್ದರು. ಇವರಲ್ಲದೆ ಹೊಂಡುರಸ್, ಪೆರು, ಎಲ್ ಸಾಲ್ವಡೋರ್, ಚಿಲಿ, ಕ್ಯೂಬಾ ಮತ್ತಿತರ ದೇಶಗಳಿಂದ ಸಾಮಾಜಿಕ ಚಳುವಳಿಗಳ ಪ್ರತಿನಿಧಿಗಳೂ ಬಂದಿದ್ದರು. ಯಶಸ್ವಿ ಅಲ್ಬಾ ಶೃಂಗಸಭೆಯಿಂದ ಲ್ಯಾಟಿನ್ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟುವುದರಲ್ಲಿ ಇನ್ನೊಂದು ಮಹತ್ವದ ಮುನ್ನಡೆ ಸಾಧಿಸಿದೆ.

ಮುಶರಫ್ ಅಧ್ಯಕ್ಷಗಿರಿಗೆ ಹೊಸ ಸವಾಲು

ಪಾಕಿಸ್ತಾನದ ರಾಜಧಾನಿಯಲ್ಲೂ, ಲಾಹೋರ್‌ನಲ್ಲೂ ಚೌಧರಿ - ಪರ ಭಾರಿ ರ್‍ಯಾಲಿಗಳು ನಡೆದಿವೆ. ಇದರಿಂದ ಬೆಚ್ಚಿದ ಮುಶರಫ್ ಸರ್ಕಾರ ಮೇ 12 ರಂದು ಪ್ರತಿಸ್ಪಂದಿಸಿದ ರೀತಿ ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಕರಾಚಿಯಲ್ಲಿ ಮುಶರಫ್ ಸರ್ಕಾರದ ಬೆಂಬಲಿಗ ಎಂ.ಕ್ಯೂ.ಎಂ (ಮುತ್ತಹಿದಾ ಕೌಮಿ ಮೂವ್‌ಮೆಂಟ್) ಚೌಧರಿ ಕರಾಚಿ ಭೇಟಿ ದಿನವೇ ರ್‍ಯಾಲಿ ಹಮ್ಮಿಕೊಂಡದ್ದು, ಒಂದೇ ದಿನ ಎರಡು ರ್‍ಯಾಲಿಗಳು ಶಾಂತಿಭಂಗಕ್ಕೆ ಎಡೆಮಾಡಬಹುದು ಎಂಬ ನೆಪವೊಡ್ಡಿ ಚೌಧರಿ ನಗರ ಪ್ರವೇಶ ಮಾಡದಂತೆ ಸರ್ಕಾರ ನೋಡಿಕೊಂಡದ್ದು, ಆ ದಿನ ನಡೆದ ಭಾರೀ ಹಿಂಸಾಚಾರದಲ್ಲಿ 40ಕ್ಕೂ ಹೆಚ್ಚು ಜನರ ಸಾವು ಮತ್ತು ಸರ್ಕಾರ/ಪೋಲೀಸರ ನಿಷ್ಕ್ರಿಯತೆ, ಅದೇ ದಿನ ರಾಜಧಾನಿಯಲ್ಲಿ ಮುಶರಫ್ ರ್‍ಯಾಲಿ - ಇವೆಲ್ಲ ಮುಶರಫ್ ರಾಜಕೀಯ ಅಭದ್ರತೆಯನ್ನು ಇನ್ನಷ್ಟು ಬಯಲು ಮಾಡಿದೆ. ಮೇ 12ರಂದು ಮುಶರಫ್ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ 1999ರ ನಂತರದ ಅತಿ ದೊಡ್ಡ ರಾಜಕೀಯ ಬಿಕ್ಕಟ್ಟು ಉಂಟುಮಾಡಿದೆ. ಮುಶರಫ್ ರಾಜಕೀಯ ಪ್ರತಿಷ್ಠೆಗೆ ಏಟು ಕೊಟ್ಟಿದೆ. ನ್ಯಾಯಾಧೀಶ ಚೌಧರಿಯವರ ವಜಾ ರದ್ದು ಮಾಡಬೇಕೆಂದು ಆರಂಭವಾದ ಚಳುವಳಿ, ಈಗ ಮುಶರಫ್ ರಾಜೀನಾಮೆ ಕೇಳುವ ಚಳುವಳಿಯಾಗಿ ಮಾರ್ಪಟ್ಟಿದೆ. ಇದಕ್ಕೆ ಬಹುಪಾಲು ಮೇ 12 ರಂದು ಮುಶರಫ್ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿಯೇ ಕಾರಣ. ಚಳುವಳಿ ಇನ್ನಷ್ಟು ದೇಶ ವ್ಯಾಪೀ ರೂಪ ಪಡೆದಿದೆ. ಮೇ 14 ರಂದು ವಿರೋಧ ಪಕ್ಷಗಳು ಮತ್ತು ವಕೀಲರ ಸಂಘಟನೆಗಳು ಕರೆ ಕೊಟ್ಟ ದೇಶ ವ್ಯಾಪೀ ಮುಷ್ಕರಕ್ಕೆ ಒಳ್ಳೆಯ ಪ್ರತಿಕ್ರಿಯೆ ಕಂಡುಬಂತು. ಮುಶರಫ್ ಈ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಮುಂದಿನ ವರ್ಷದ ಚುನಾವಣೆಗಳನ್ನು ಈ ವರ್ಷವೇ ನಡೆಸುವ ಸಾಧ್ಯತೆಯಿದೆ.



ಸಬಲರು ದುರ್ಬಲರನ್ನು ತುಳಿಯಲು ಅನುವು ಮಾಡಿಕೊಡುವುದೇ ಉದಾರೀಕರಣ



ಉದಾರೀಕರಣವೆಂದರೆ ಇರುವ ಸಂಕೋಲೆಗಳನ್ನು ತೊಡೆದು ಹಾಕುವ ಪ್ರಕ್ರಿಯೆ ಎಂಬಂತೆ ಉದಾರೀಕರಣವಾದಿಗಳು ಬಿಂಬಿಸುತ್ತಾರೆ. ಸ್ವಲ್ಪ ಆಳವಾಗಿ ನೋಡಿದರೆ ಉದಾರೀಕರಣ ಹೆಚ್ಚಿನ ಜನರ ಸಂಕೋಲೆಗಳನ್ನು (ಸಂಕಷ್ಟಗಳನ್ನು) ಹೆಚ್ಚಿಸಿ ಕೆಲವೇ ಕೆಲವರಿಗೆ ಹೆಚ್ಚಿನ ಬಲ ನೀಡುತ್ತದೆ ಎಂಬುದು ಗೊತ್ತಾಗುತ್ತದೆ. ಯಾವುದೇ ಆರ್ಥಿಕ ಕ್ಷೇತ್ರವನ್ನು ತೆಗೆದುಕೊಂಡರೂ ಇದು ಗೊತ್ತಾಗುತ್ತದೆ. ಉದಾಹರಣೆಗೆ ನಮ್ಮ ಕೃಷಿ ಕ್ಷೇತ್ರವನ್ನು ತೆಗೆದುಕೊಳ್ಳಬಹುದು.

ದೇಶದ ಬಹುದೊಡ್ಡ ಸಂಖ್ಯೆಯ ಜನ ಕೃಷಿಯನ್ನು ಅವಲಂಬಿಸಿದ್ದಾರೆ. ದೇಶದ ಬಹುತೇಕ ಜನರಿಗೆ ಅನುಕೂಲ ದೊರಕಬೇಕೆಂದರೆ ಕೃಷಿಗೆ ಹೆಚ್ಚಿನ ಅನುಕೂಲಗಳನ್ನು ನೀಡಬೇಕು. ಕೃಷಿ ಅಭಿವೃದ್ಧಿಯಾದರೆ ಕೃಷಿ ಅವಲಂಬಿತರಾದ ಬಹುಸಂಖ್ಯೆಯ ಜನರಿಗೆ ಅನುಕೂಲ ವಾಗುತ್ತದೆ.

ಕೃಷಿಕರಿಗೆ ಹಣಕಾಸಿನ ಕೊರತೆ ನಮ್ಮ ದೇಶದಲ್ಲಿ ಇದ್ದೆ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಕೃಷಿ ಲಾಭದಾಯಕವಲ್ಲದಿರುವುದೂ ಇದಕ್ಕೊಂದು ಕಾರಣ. ಕೃಷಿಕರಿಗೆ ಬೇಕಾಗುವ ಹಣಕಾಸನ್ನು ಬ್ಯಾಂಕುಗಳು ಮತ್ತು ಇತರ ಪತ್ತಿನ ಸಂಸ್ಥೆಗಳು ಸಾಲದ ರೂಪದಲ್ಲಿ ನೀಡಿ ಕೃಷಿಕನಿಗೆ ಆದಾಯ ಬಂದಾಗ ವಸೂಲಿ ಮಾಡಿಕೊಳ್ಳುವುದು ಒಂದು ವಿಧಾನ.

ಉದಾರೀಕರಣದಿಂದಾಗಿ ಕೃಷಿಕರಿಗೆ ಸುಲಭದಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ಸಿಗುವಂತಾಗಿದ್ದರೆ ಅದು ದೇಶದ ಜನರ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಯಾಗುತ್ತಿತ್ತು.

ಹಣಕಾಸು ವಲಯದ ಉದಾರೀಕರಣವೂ ನಡೆಯುತ್ತಿದೆ. ಇದರ ಭಾಗವಾಗಿ ಬಡ್ಡಿದರಗಳ ಮೇಲಿನ ನಿರ್ಬಂಧಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ತೆಗೆದು ಹಾಕಿ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಬ್ಯಾಂಕುಗಳು ಯಾವ ಸಾಲಗಾರನಿಗೆ ಯಾವ ಬಡ್ಡಿದರ ನಿಗದಿಪಡಿಸ ಬೇಕೆಂದನ್ನು ತಮ್ಮ ನಿರ್ದೇಶಕ ಮಂಡಳಿಗಳಲ್ಲಿ ನಿರ್ಧರಿಸುತ್ತವೆ. ಇದರಿಂದ ಬಡವರಿಗೆ ಕಡಿಮೆ ಬಡ್ಡಿದರದಲ್ಲಿ ಹಾಗೂ ಉಳ್ಳವರಿಗೆ ಹೆಚ್ಚಿನ ಬಡ್ಡಿದರದಲ್ಲಿ ಸಾಲ ನೀಡುವಂತಾಗಬೇಕಿತ್ತು.

ವಾಸ್ತವದಲ್ಲಿ ಇದು ಆಗಿಲ್ಲ. ಮಾರುಕಟ್ಟೆ ಆರ್ಥಿಕದಲ್ಲಿ ಯಾರು ಪ್ರಬಲರೂ ಅವರಿಗೆ ಹೆಚ್ಚಿನ ಚೌಕಾಸಿ ಶಕ್ತಿಯಿರುತ್ತದೆ. ಬಂಡವಾಳಗಾರರು ಹೆಚ್ಚು ಪ್ರಬಲರಾಗಿ ರುವುದರಿಂದ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ದೊರೆತರೆ ಕೃಷಿಕರಂತಹ ಬಡ ಜನತೆ ಹೆಚ್ಚಿನ ಬಡ್ಡಿ ತೆರಬೇಕಾಗುತ್ತದೆ.

ಬಹುತೇಕ ಬ್ಯಾಂಕುಗಳ ಬಡ್ಡಿ ದರಗಳನ್ನು ಗಮನಿಸಿದರೆ ಕೃಷಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರಗಳು ಹೆಚ್ಚಾಗಿಯೇ ಇವೆ ಇದಲ್ಲದೆ ಜನ ಸಾಮಾನ್ಯರಿಗೆ ನೀಡುವ ಮನೆ ಸಾಲ ಇತ್ಯಾದಿಗಳ ಮೇಲೂ ಬಡ್ಡಿದರಗಳು ಇತ್ತೀಚೆಗೆ ಹೆಚ್ಚಾಗಿವೆ.

ಉದ್ಯಮಿಗಳು ಮತ್ತು ಬಂಡವಾಳಿಗರು ಕಡಿಮೆ ಬಡ್ಡಿದರದಲ್ಲಿ ಸಾಲ ಪಡೆಯುತ್ತಿದ್ದರೆ ಬಡ ಜನ ಸಾಮಾನ್ಯರು ಹೆಚ್ಚಿನ ಬಡ್ಡಿ ನೀಡುತ್ತಿದ್ದಾರೆ. ಉದ್ಯಮಿ ಗಳಿಗೆ ಅವರ ಉದ್ಯಮದಿಂದ/ವ್ಯಾಪಾರದಿಂದ ಬರುವ ಲಾಭ ಅಪಾರ. ಕೃಷಿಕರಿಗೆ ಮತ್ತು ದುಡಿವ ಜನರಿಗೆ ಬರುವ ಲಾಭ/ಆದಾಯ ಕಡಿಮೆ. ಕಡಿಮೆ ಆದಾಯ ಬರುವವರು ಹೆಚ್ಚಿನ ಬಡ್ಡಿ ತೆರುತ್ತಾರೆ. ಹೆಚ್ಚಿನ ಲಾಭ ಬರುವವರು ಕಡಿಮೆ ಬಡ್ಡಿ ತೆರುತ್ತಾರೆ.

ಇದನ್ನೇ ಬ್ಯಾಂಕುಗಳ ದೃಷ್ಟಿಯಿಂದ ನೋಡಿ. ಬ್ಯಾಂಕುಗಳು ಬಡವರಿಂದ ಹೆಚ್ಚಿನ ಲಾಭಾಂಶ ಪಡೆಯುತ್ತವೆ. ಉದ್ಯಮಿ ಬಂಡವಾಳಗಾರರಿಂದ ಕಡಿಮೆ ಲಾಭಾಂಶ ಪಡೆಯುತ್ತವೆ.

ಹಣದುಬ್ಬರ ಹೆಚ್ಚಿದಾಗ ಅದನ್ನು ಕಡಿಮೆ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಹಣ ಸಂಚಯವನ್ನು ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳುತ್ತದೆ. ಈ ಕ್ರಮಗಳು ಮತ್ತೆ ಬಡವರನ್ನೇ ಹೆಚ್ಚಾಗಿ ಹಿಂಡುತ್ತವೆ. ಹೊರತು ಶ್ರೀಮಂತರನ್ನಲ್ಲ.

ಇಂತಹ ಹಿಂಡುವಿಕೆಗೆ ಒಳಗಾದ ರೈತರು ಆತ್ಮಹತ್ಯೆಗೆ ಬಲಿಯಾಗುತ್ತಾರೆ. ರೈತರ ಆತ್ಮಹತ್ಯೆಗೆ ಒಟ್ಟಾರೆ ಉದಾರೀಕರಣದ ಕ್ರಮಗಳು ಕಾರಣ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಅಪಾರ ಸಂಖ್ಯೆಯಲ್ಲಿರುವ ಬಡಜನತೆ ಈ ಉದಾರೀಕರಣದ ಕ್ರಮಗಳಿಂದ ವಿವಿಧ ರೀತಿಗಳಲ್ಲಿ ನೋವು ಅನುಭವಿಸುತ್ತಾರೆ. ಕೆಲವೇ ಕೆಲವು ಜನರಿಗೆ ಉದಾರೀಕರಣದ ಲಾಭ ದೊರೆಯುತ್ತದೆ. ಈ ಲಾಭಕೋರರು ಕೊಬ್ಬುತ್ತಾರೆ. ಕೊಬ್ಬಿ ಬಡವರನ್ನು ಇನ್ನೂ ಶೋಷಿಸಲು ತೊಡಗುತ್ತಾರೆ.

ಕೆಲವೇ ಸಬಲರು ಅಪಾರ ಸಂಖ್ಯೆಯ ದುರ್ಬಲರನ್ನು ಶೋಷಿಸಲು ಅನುಕೂಲ ವಾಗುವಂತಹ ವಾತಾವರಣವನ್ನು ನಿರ್ಮಿಸುವುದೇ ಉದಾರೀಕರಣದ ನಿಜೋದ್ದೇಶ ಅಲ್ಲವೇ?

ಒಂದೂವರೆ ದಶಕದ ನಂತರ ಉತ್ತರ ಪ್ರದೇಶದ ಜನತೆ ಒಂದು ಸ್ಪಷ್ಟ ತೀರ್ಪು ನೀಡಿದ್ದಾರೆ - ಈ ಮೂಲಕ ಪಕ್ಷಾಂತರಗಳು, ಸಮಯಸಾಧಕ ಮೈತ್ರಿಕೂಟಗಳ ಹೊಲಸು ರಾಜಕೀಯವನ್ನು ನಿಲ್ಲಿಸಿದ್ದಾರೆ. ಆದರೆ ಇದು ಜಾತಿ ರಾಜಕೀಯದ ಕದಂಭ ಬಾಹುಗಳಿಂದಲೂ ವಿಮೋಚನೆಯತ್ತ ಉತ್ತರ ಪ್ರದೇಶ ಜನತೆಯನ್ನು ಒಯ್ಯುತ್ತದೆಯೋ ಎಂಬುದನ್ನು ಕಾದು ನೋಡಬೇಕಾಗಿದೆ

ಉತ್ತರ ಪ್ರದೇಶದಲ್ಲಿ ಮತದಾರರ ಸ್ಪಷ್ಟ ತೀರ್ಪು

ಉತ್ತರ ಪ್ರದೇಶದ ಮತದಾರರು ಒಂದು ಸ್ಪಷ್ಟ ತೀರ್ಪು ನೀಡಿದ್ದಾರೆ. ಈ ಮೂಲಕ ಮತ್ತೊಮ್ಮೆ ಮಾಧ್ಯಮಗಳ ವಿಶ್ಲೇಷಣೆಗಳ ಪೊಳ್ಳುತನವನ್ನೂ ಬಯಲಿಗೆಳೆದಿದ್ದಾರೆ. 1991 ರ ನಂತರ ಮೊದಲ ಬಾರಿಗೆ ಒಂದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಕ್ಕಿದೆ. ಬಹುಜನ ಸಮಾಜ ಪಾರ್ಟಿ(ಬಿಎಸ್‌ಪಿ) 402 ಸ್ಥಾನಗಳ ಪೈಕಿ 206 ರಲ್ಲಿ ಗೆದ್ದಿದೆ. ಇದರಿಂದಾಗಿ ಜನತೆ ಹಿಂದಿನ ವರ್ಷಗಳಂತೆ ಸರ್ಕಾರ ರಚಿಸಲು ಸಮಯಸಾಧಕ ಕೂಟಗಳ, ಪಕ್ಷಾಂತರಗಳ ಹೊಲಸು ಪ್ರದರ್ಶನಕ್ಕೆ ಅವಕಾಶ ಇಲ್ಲದಂತೆ ಮಾಡಿದ್ದಾರೆ. ಇದು ದೇಶದ ಪ್ರಜಾಪ್ರಭುತ್ವವಾದಿ ಗಳಿಗೆಲ್ಲಾ ಸಮಾಧಾನ ತಂದಿರುವ ಸಂಗತಿ.

ಬಿಎಸ್‌ಪಿ ಮುಖಂಡರಾದ ಮಾಯಾವತಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಈ ಸಲ ಮೊದಲ ಬಾರಿಗೆ ಅವರು ತನ್ನದೇ ಪಕ್ಷದ ಬಲದಿಂದ ಅಧಿಕಾರ ಗಳಿಸಿದ್ದಾರೆ. ಈ ಹಿಂದೆ ಮೂರು ಬಾರಿಯೂ ಬಿಜೆಪಿಯೊಡನೆ ಸಮಜಾಯಿಷಿ ಮಾಡಿಕೊಂಡು ಅವರು ಮುಖ್ಯಮಂತ್ರಿಯಾಗಿದ್ದರು - 1995 ರಲ್ಲಿ ಮೊದಲ ಬಾರಿಗೆ ಎಸ್‌ಪಿ/ ಬಿಎಸ್‌ಪಿ ಮೈತ್ರಿ ಸರ್ಕಾರ ಬಿದ್ದಾಗ. ಎರಡನೇ ಬಾರಿ 1997 ರಲ್ಲಿ -ಆರು ತಿಂಗಳ ನಂತರ ಮುಖ್ಯಮಂತ್ರಿ ಸ್ಥಾನ ಬಿಜೆಪಿಗೆ ಹೋಗುತ್ತದೆ ಎಂಬ ಒಪ್ಪಂದದ ಮೇರೆಗೆ ಹಾಗೂ ಮೂರನೇ ಬಾರಿ 2002 ರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಅತಂತ್ರ ಫಲಿತಾಂಶದ ಹಿನ್ನೆಲೆಯಲ್ಲಿ ಮೂರು ತಿಂಗಳನಂತರ ಬಿಜೆಪಿಯೊಡನೆ ಒಪ್ಪಂದ ಮಾಡಿಕೊಂಡು. ಈ ಸಮಯಸಾಧಕ ಕೂಟವೂ 2003 ರಲ್ಲಿ ಕುಸಿಯಿತು. ಮೂರು ಬಾರಿಯೂ ಸಮಯಸಾಧಕ ಒಪ್ಪಂದಗಳಿಂದಾಗಿ ಮಾಯಾವತಿಯವರ ಅಧಿಕಾರ ಬಹಳ ದಿನ ಉಳಿಯಲಿಲ್ಲ. ಆದರೆ ಈ ಬಾರಿ ಸನ್ನಿವೇಶ ಸಂಪೂರ್ಣ ಬದಲಾಗಿದೆ.

ಬಿಎಸ್‌ಪಿಯ ವಿಜಯದಲ್ಲಿ ಎರಡು ಅಂಶಗಳಿವೆ. ಮೊದಲನೆಯದಾಗಿ ದಲಿತ ಸಬಲೀಕರಣದ ಕರೆಗೆ ಮುಂದುವರೆದಿರುವ ಜನಸ್ಪಂದನೆ. ಬಿಎಸ್‌ಪಿ ಈ ದಲಿತ ಸಬಲೀಕರಣದ ಆಕಾಂಕ್ಷೆಯ ಸಂಕೇತವಾಗಿದೆ. ಇದೊಂದು ಸಕಾರಾತ್ಮಕ ಅಂಶ. ಆದರೆ ಎರಡನೆಯ ಅಂಶ ಆತಂಕಕಾರಿ. ಅದೆಂದರೆ ರಾಜಕೀಯ ಚಟುವಟಿಕೆಗಳಿಗೆ ಉಳಿದೆಲ್ಲಾ ಅಂಶಗಳಿಗಿಂತ ಜಾತಿಯೇ ಮುಖ್ಯ ಆಧಾರ ವಾಗುತ್ತಿರುವುದು. ಇದು ವ್ಯವಸ್ಥಿತವಾಗಿ ಹರಡುತ್ತಿದೆ. ಇದು ದಲಿತ ಸಬಲೀಕರಣದ ಫಲಗಳನ್ನು ಬುಡಮೇಲು ಮಾಡುವ ಅಪಾಯವಿದೆ. ಕೆಲವರು ಟಿಪ್ಪಣಿ ಮಾಡುವಂತೆ ಜಾತಿಯ ಅಡ್ಡಗೋಡೆಗಳನ್ನು ಮುರಿಯಲಾಗಿದೆ ಎಂಬ ಸಂಕೇತ ಈ ಫಲಿತಾಂಶಗಳಲ್ಲಿ ಕಾಣುವುದಿಲ್ಲ. ಬದಲಾಗಿ ಬಿಎಸ್‌ಪಿ ದಲಿತರ ನಡುವೆ ತನ್ನ ಪ್ರಬಲ ನೆಲೆಯ ಆಧಾರದಲ್ಲಿ ಒಂದು ಜಾತಿ - ಮೈತ್ರಿಕೂಟವನ್ನು ರಚಿಸುವಲ್ಲಿ ಯಶಸ್ವಿಯಾಗಿದೆ. ಪರಸ್ಪರ ಹಿತಾಸಕ್ತಿಗಳ ಆಧಾರದಲ್ಲಿ ಈ ಕೂಟ ರಚನೆಯಾಗಿದೆಯೇ ಹೊರತು ಜಾತಿಗೋಡೆಗಳನ್ನು ಮುರಿಯುವ ಮೂಲಕ ಅಲ್ಲ ಎಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಮಾಯಾವತಿ ಸರ್ಕಾರ ದಲಿತರ ಮತ್ತು ಇತರ ದಮನಕ್ಕೊಳಗಾದ ವಿಭಾಗಗಳ ಆಕಾಂಕ್ಷೆಗಳನ್ನು ಹೇಗೆ ಈಡೇರಿಸುತ್ತದೆ ಎಂಬುದನ್ನು ಕಾದುನೋಡಬೇಕಾಗಿದೆ.

ಬಿಜೆಪಿಯ ಶೋಚನೀಯ ಸ್ಥಿತಿ

ಬಿಎಸ್‌ಪಿಯ ನಿರ್ಣಾಯಕ ವಿಜಯ ಈ ಚುನಾವಣೆಗಳ ಒಂದು ಮುಖ್ಯ ಅಂಶವಾಗಿದ್ದರೆ, ಇನ್ನೊಂದು ಅಷ್ಟೇ ಗಮನಾರ್ಹವಾದ ಸಂಗತಿಯೆಂದರೆ ಬಿಜೆಪಿಯ ಕೋಮುವಾದಿ ರಾಜಕೀಯಕ್ಕೆ ಆಗಿರುವ ಭಾರಿ ಹಿನ್ನಡೆ. ಅದರ ಸ್ಥಾನಗಳ ಸಂಖ್ಯೆ 88 ರಿಂದ 50 ಕ್ಕಿಳಿಯಿತು. ಅಷ್ಟೇ ಅಲ್ಲ ಮತ ಪ್ರಮಾಣವೂ 20.12 ಶೇ. ದಿಂದ 16.9 ಶೇ. ಕ್ಕೆ ಇಳಿಯಿತು. ಪಂಜಾಬ್ ಮತ್ತು ಉತ್ತರಾಖಂಡದಲ್ಲಿ ತನ್ನ ಪರವಾಗಿ ಫಲಿತಾಂಶ ಬಂದಂತೆ ಇಲ್ಲಿಯೂ ಆಗುತ್ತದೆ, ಇದರಿಂದ ರಾಷ್ಟ್ರೀಯ ಮಟ್ಟದಲ್ಲಿ ಮತ್ತೆ ತಲೆಯೆತ್ತಬಹುದು ಎಂಬ ಅದರ ನಿರೀಕ್ಷೆಗಳು ನುಚ್ಚು ನೂರಾಗಿವೆ. ಇದು ಕೂಡಾ ಪ್ರಜಾಪ್ರಭುತ್ವವಾದಿಗಳಿಗೆಲ್ಲಾ ಸಂತಸ ತಂದಿರುವ ಸಂಗತಿ.

ಬಿಜೆಪಿ ನವೆಂಬರ್ 2006 ರ ತನ್ನ ಲಖನೌ ಅಧಿವೇಶನದಲ್ಲಿ 'ಪ್ರಖರ' ಹಿಂದುತ್ವವನ್ನು ತನ್ನ ಆಯುಧವಾಗಿ ಬಳಸಲು ನಿರ್ಧರಿಸಿತು. ಮುಸ್ಲಿಂ-ವಿರೋಧಿ ಸಿ.ಡಿ. ಬಿಡುಗಡೆ,



ಚುನಾವಣೆಗಳಲ್ಲಿ ಆರ್‌ಎಸ್‌ಎಸ್ ನದ್ದೇ ಉಸ್ತುವಾರಿ - ಒಟ್ಟಿನಲ್ಲಿ ಬಿಜೆಪಿಯ ಚುನಾವಣಾ ಪ್ರಚಾರ ಗೋರಖಪುರದ ಮತಾಂಧ ಆದಿತ್ಯನಾಥನ ಪ್ರಚಾರಕ್ಕಿಂತ ಬಹಳವೇನೂ ಭಿನ್ನವಾಗಿರಲಿಲ್ಲ.

ಆದರೆ ಉತ್ತರ ಪ್ರದೇಶದ ಜನತೆ ಈ ಹೊಲಸು ಕೋಮುವಾದಿ ತಂತ್ರವನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಅದೀಗ ಗಳಿಸಿರುವ ಸ್ಥಾನಗಳ ಸಂಖ್ಯೆ 1989 ರ ರಾಮಜನ್ಮಭೂಮಿ ಚಳುವಳಿಯ ನಂತರ ಅದು ಗಳಿಸಿದ ಸ್ಥಾನಗಳಲ್ಲೇ ಅತಿ ಕಮ್ಮಿ ಎಂಬುದು ಉತ್ತರ ಪ್ರದೇಶದ ಜನತೆ ನೀಡಿದ ಏಟಿನ ಪ್ರಮಾಣವನ್ನು ತೋರಿಸುತ್ತದೆ. ವಾಸ್ತವವಾಗಿ ಇದರ ಲಕ್ಷಣಗಳು ಆಗಲೇ ಕಂಡುಬಂದಿದ್ದವು. ಬಿಜೆಪಿ ಮಾತ್ರ ವಾಸ್ತವತೆಯನ್ನು ಗುರುತಿಸಲು ಸಿದ್ಧವಾಗಲಿಲ್ಲ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ವಿವಿಧ ಉಪ ಚುನಾವಣೆಗಳಲ್ಲಿ ಅದು ಸ್ಪರ್ಧಿಸಿದ್ದ ಹೆಚ್ಚಿನ ಕಡೆ ತನ್ನ ಠೇವಣಿಯನ್ನೂ ಕಳಕೊಂಡಿದೆ. ಇತ್ತೀಚೆಗೆ ನಡೆದ 11 ಕಾರ್ಪೋರೇಷನ್ ಚುನಾವಣೆಗಳಲ್ಲಷ್ಟೇ ಅದು ಸಾಕಷ್ಟು ಯಶಸ್ಸು ಪಡೆದಿತ್ತು. ಆದರೆ ಇದಕ್ಕೆ ಕಾರಣ ಬಿಎಸ್‌ಪಿ ಇಲ್ಲಿ ಸ್ಪರ್ಧಿಸದಿದ್ದುದು ಹಾಗೂ ಸಮಾಜವಾದಿ ಪಕ್ಷದ ನೆಲೆ ಪಟ್ಟಣಗಳಲ್ಲಿ ಮೊದಲಿನಿಂದಲೂ ಕ್ಷೀಣವಾಗಿರುವುದು ಎಂಬ ಸಂಗತಿಯನ್ನು ಗುರುತಿಸಲು ಬಿಜೆಪಿ ಸಿದ್ಧವಾಗಲಿಲ್ಲ.

ಬಿಜೆಪಿ ಕೇವಲ ಅಧಿಕಾರ ಗಳಿಕೆಗಾಗಿ ಆರಂಭಿಸಿದ ಜಾತಿ ರಾಜಕೀಯ, 'ಸಾಮಾಜಿಕ ಇಂಜಿನಿಯರಿಂಗ್' ನ ತಂತ್ರ ಈಗ ಅದಕ್ಕೇ ತಿರುಗುಬಾಣವಾಗಿದೆ. ಬಿಎಸ್‌ಪಿ ಈ ತಂತ್ರವನ್ನು ಇನ್ನೂ ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಸಮಾಜವಾದಿ ಪಕ್ಷದ ಸೋಲು

ಸಮಾಜವಾದಿ ಪಕ್ಷ ಈ ಸಲ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವಂತಾಯಿತು. ಕಳೆದ 3 ವರ್ಷಗಳ ಮುಲಾಯಂ ಸಿಂಗ್ ಸರ್ಕಾರ ಜನರಲ್ಲಿ ತೀವ್ರ ಅತೃಪ್ತಿಯನ್ನು ಉಂಟು ಮಾಡಿತು. ಮುಖ್ಯವಾಗಿ ರಾಜ್ಯದಲ್ಲಿ ಹರಡಿದ ಕಾನೂನೂಹೀನ ಪರಿಸ್ಥಿತಿ ಹಾಗೂ ಸಮಾಜವಾದಿ ಪಕ್ಷದೊಳಗಿದ್ದವರೇ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿದ್ದು. ಮುಲಾಯಂ ಸರ್ಕಾರ ಆರಂಭದಲ್ಲಿ ಕೆಲವು ಕೈಗೊಂಡ ಕೆಲವು ಸಕಾರಾತ್ಮಕ ಕ್ರಮಗಳ ಪರಿಣಾಮಗಳನ್ನು ಈ ಕ್ರಿಮಿನಲ್ ಚಟುವಟಿಕೆಗಳು ಮಣ್ಣುಗೂಡಿಸಿದವು.

ಆದರೂ ಸಮಾಜವಾದಿ ಪಕ್ಷ ತನ್ನ ಸಾಮಾಜಿಕ ನೆಲೆಯನ್ನು ಉಳಿಸಿ ಕೊಂಡಿರುವಂತೆ ಕಾಣುತ್ತದೆ. ಅದರ ಸ್ಥಾನಗಳ ಸಂಖ್ಯೆ 143 ರಿಂದ 97 ಕ್ಕೆ ಇಳಿದರೂ ಅದು ಗಳಿಸಿದ ಮತದಲ್ಲಿ ಅಲ್ಪ ಹೆಚ್ಚಳವೇ ಕಂಡಿದೆ. 2002 ರಲ್ಲಿ ಅದು 25.15 ಶೇ. ಮತ ಗಳಿಸಿದ್ದರೆ ಈ ಬಾರಿ 25.45 ಶೇ. ಮತಗಳಿಸಿದೆ. ಇದರಿಂದ ಮುಲಾಯಂ ಸಿಂಗ್ ಯಾದವ್ ಪಾಠ ಕಲಿಯಬೇಕಾಗಿದೆ. ಒಂದು ಉತ್ತಮ ಸಾಮಾಜಿಕ - ಆರ್ಥಿಕ ಕಾರ್ಯಕ್ರಮದ ಮೂಲಕ ಬಡ ರೈತರ, ಗ್ರಾಮೀಣ ಬಡವರ, ದುಡಿಯುವ ವರ್ಗದ ಅಗತ್ಯಗಳನ್ನು ಈಡೇರಿಸುವ ಪ್ರಯತ್ನ ನಡೆಸದೆ ಕೇವಲ ಜಾತಿ ಸಮೀಕರಣದಲ್ಲೇ ತೊಡಗಿದ್ದರೆ ಸಾಮಾಜಿಕ ನೆಲೆ ವಿಸ್ತಾರಗೊಳ್ಳುವುದಿಲ್ಲ.

ಈ ಚುನಾವಣೆ ವಾಸ್ತವವಾಗಿ ಬಿಎಸ್‌ಪಿ ಮತ್ತು ಬಿಜೆಪಿ ನಡುವೆ ಎಂದು ಬಿಂಬಿಸುವ ಪ್ರಯತ್ನ ಕೆಲವು ಮಾಧ್ಯಮಗಳಲ್ಲಿ ನಡೆಯಿತು. ಆದರೆ ವಾಸ್ತವಿಕವಾಗಿ ಇದು ಬಿಎಸ್‌ಪಿ ಮತ್ತು ಸಮಾಜವಾದಿ ಪಕ್ಷದ ನಡುವಿನ ಸ್ಪರ್ಧೆಯಾಗಿತ್ತು ಎಂಬುದೀಗ ಸಾಬೀತಾಗಿದೆ. ಉತ್ತರ ಪ್ರದೇಶದಲ್ಲಿ ಈಗ ಸಮಾಜವಾದಿ ಪಕ್ಷ ಪ್ರಧಾನ ವಿರೋಧ ಪಕ್ಷವಾಗಿದೆ.

ಕಾಂಗ್ರೆಸ್ ಹಿನ್ನಡೆ

ಉತ್ತರ ಪ್ರದೇಶದ ಜನತೆ ಕಾಂಗ್ರೆಸ್ ಪಕ್ಷ ಸೃಷ್ಟಿಸಿದ್ದ ನಿರೀಕ್ಷೆಯೂ ಎಷ್ಟು ಹುಸಿಯೆಂದು ತೋರಿಸಿಕೊಟ್ಟಿದೆ. ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಈ ರಾಜ್ಯದಲ್ಲಿ ಕೊನೆಗೂ ಪುನರುಜ್ಜೀವನಗೊಳ್ಳುತ್ತದೆ ಎಂಬ ಪ್ರಚಾರ ಸುಳ್ಳಾಗಿದೆ. ಈ ಚುನಾವಣೆಯಲ್ಲಿ ಯಾವ ಪವಾಡವೂ ನಡೆಯಲಿಲ್ಲ. ಕಾಂಗ್ರೆಸ್ ಮೊದಲಿನಂತೆಯೇ ಮೂಲೆಗುಂಪಾಗಿಯೇ ಉಳಿದಿದೆ. ಅದರ ಸ್ಥಾನಗಳ ಸಂಖ್ಯೆ 25 ರಿಂದ 22 ಕ್ಕೆ ಇಳಿದಿದೆ. ಪಡೆದ ಮತಗಳ ಶೇಕಡಾ ಕೇವಲ 8.5 ಕೇವಲ ಗಾಂಧಿ ನಾಮ ಬಲದಿಂದ ಅದರ ಕಾಯಿಲೆ ವಾಸಿಯಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಎರಡು ಪಕ್ಷ ಪದ್ಧತಿ ಸೂಕ್ತವೇ?

ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಫಲಿತಾಂಶ ಬರುವ ಹಿಂದಿನ ದಿನವಷ್ಟೇ ರಾಷ್ಟ್ರಪತಿ ಕಲಾಂ ಅವರು ಎರಡು ಪಕ್ಷ ಪದ್ಧತಿ ದೇಶದ ಪ್ರಜಾಪ್ರಭುತ್ವಕ್ಕೆ ಒಳ್ಳೆಯದು ಎಂದು ಶಿಫಾರಸು ಮಾಡಿದ್ದರು. ಅಂದರೆ ದೇಶದಲ್ಲಿ ಎರಡೇ ಪಕ್ಷಗಳಿರಬೇಕು - ಒಂದು ಕಾಂಗ್ರೆಸ್, ಇನ್ನೊಂದು ಬಿಜೆಪಿ ಎಂದು ಇದರ ಅರ್ಥ. ಆದರೆ ಉತ್ತರ ಪ್ರದೇಶದ ಜನತೆ ಈ ಎರಡೂ ಪಕ್ಷಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸಿ ಈ ಶಿಫಾರಸ್ಸಿನ ಟೊಳ್ಳುತನವನ್ನು ಜಗಜ್ಜಾಹಿರುಗೊಳಿಸಿದ್ದಾರೆ; ದೇಶದಲ್ಲಿ ಬಹು ಪಕ್ಷದ ಪದ್ಧತಿ ಈಗೊಂದು ವಾಸ್ತವ ಸಂಗತಿ, ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಎರಡು ಪಕ್ಷ ಪದ್ಧತಿಯೊಳಗೆ ಸೀಮಿತಗೊಳಿಸಲು ಸಾಧ್ಯವಿಲ್ಲ ಎಂದು ಸಾರಿದಂತಾಗಿದೆ.

ಎಡ ಪ್ರಾತಿನಿಧ್ಯವಿಲ್ಲ

1952ರ ನಂತರ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಮೊದಲ ಬಾರಿಗೆ ಈ ಸಲ ಎಡ ಪ್ರಾತಿನಿಧ್ಯವಿಲ್ಲದಂತಾಗಿದೆ. ಕಳೆದ ವಿಧಾನಸಭೆಯಲ್ಲಿ ಸಿಪಿಐ(ಎಂ) ಗೆ ಎರಡು ಸ್ಥಾನಗಳಿದ್ದವು. ಅವೆರೆಡೂ ಈ ಬಾರಿ ಸಿಕ್ಕಿಲ್ಲ. ಸಿಪಿಐಗೂ ಯಾವುದೇ ಸ್ಥಾನ ಸಿಕ್ಕಿಲ್ಲ. ಸಿಪಿಐ(ಎಂ) ಈ ಹಿಂದೆ ಗೆದ್ದಿದ್ದ ನಜೀಬಾಬಾದ್ ಮತ್ತು ಮೇಜಾದಲ್ಲಿ ಹಾಗೂ ಇನ್ನೊಂದು ಕ್ಷೇತ್ರ ಮೇಹನಗರದಲ್ಲಿ ಎರಡನೇ ಸ್ಥಾನ ಗಳಿಸಿದೆ. ಪಕ್ಷದ ಫಿರೋಜಾಬಾದ್ ಮತ್ತು ತುಂಡ್ಲಾದಲ್ಲಿ ಅನುಕ್ರಮವಾಗಿ 13,000 ಮತ್ತು 14,000 ಮತಗಳನ್ನು ಗಳಿಸಿದೆ. ಆದರೆ ಅದು ಸ್ಪರ್ಧಿಸಿದ್ದ ಇತರ 9 ಸ್ಥಾನಗಳಲ್ಲಿ ಗಳಿಸಿದ ಮತಗಳು ಕಡಿಮೆ.

ಕಳೆದ ಎರಡು ದಶಕಗಳ ಜಾತಿ ರಾಜಕೀಯದ ಕ್ರೋಢೀಕರಣ ಎಡಪಕ್ಷಗಳ ಸಾಮಾಜಿಕ ನೆಲೆಯನ್ನು ಕುಂಠಿತ ಗೊಳಿಸಿರುವಂತೆ ಕಾಣುತ್ತಿದೆ. ಆದರೆ ಇಂತಹ ಜಾತಿ ರಾಜಕೀಯ ಜನಗಳ ಸಮಸ್ಯೆಗಳನ್ನು ಪರಿಹರಿಸಲಾರದು ಎಂಬುದೂ ಅಷ್ಟೇ ನಿಜ.

ಎಡಪಕ್ಷಗಳು ಸಾಮಾಜಿಕವಾಗಿ ದಮನಕ್ಕೊಳಗಾದ ವಿಭಾಗಗಳ ಆಕಾಂಕ್ಷೆಗಳನ್ನು ಮತ್ತು ದುಡಿಯುವ ಜನಗಳ ಎಲ್ಲಾ ವಿಭಾಗಗಳ ಐಕ್ಯತೆಯೊಂದಿಗೆ ಬೆಸೆಯುವ ಒಂದು ವೇದಿಕೆಯನ್ನು ಐಕ್ಯ ಹೋರಾಟಗಳು ಮತ್ತು ಆಂದೋಲನಗಳ ಮೂಲಕ ರೂಪಿಸಲು ಮುಂದಾಗಬೇಕಾಗಿದೆ. ○

ಅಂಕಿ ಸಂಖ್ಯೆ

ಪ್ರತಿದಿನ ಜಗತ್ತಿನ ಜನಸಂಖ್ಯೆಯ ಪೈಕಿ ಐವರಲ್ಲಿ ಒಬ್ಬ ಹಸಿವೆಯಿಂದ ನರಳುತ್ತಾನೆ

ವಿಶ್ವಸಂಸ್ಥೆಯ ಪ್ರಕಾರ ಪ್ರತಿದಿನ 800 ದಶಲಕ್ಷ ಮಂದಿ ಉಪವಾಸ ಬೀಳುತ್ತಾರೆ. 200 ಕೋಟಿ ಪೌಷ್ಠಿಕ ಆಹಾರ ಕೊರತೆಯಿಂದ ಬಳಲುತ್ತಾರೆ. ಪ್ರತಿವರ್ಷ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಒಂದು ಕೋಟಿ ಕಂದಮ್ಮಗಳು ಪೌಷ್ಠಿಕ ಆಹಾರದ ಕೊರತೆಯಿಂದಾಗಿ ಅಸುನೀಗುತ್ತವೆ. ಅಮೇರಿಕದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ ಪ್ರತಿದಿನ 3,600 ಕ್ಯಾಲರಿ ಸೇವಿಸಿದರೆ, ಸೊಮಾಲಿಯಾದಲ್ಲಿ ಈ ಪ್ರಮಾಣ 1,500.

ಕಥೆ - ಕವನ

'ಕುರುಡು ಕಾಂಚಾಣ' ಕುಣಿಯುತ್ತಲಿತ್ತು

ಕುರುಡು ಕಾಂಚಾಣ ಕುಣಿಯುತ್ತಿದೆ, ಕಾಲಿಗೆ ಬಿದ್ದವರನ್ನು ತುಳಿಯುತ್ತಿದೆ ಎಂಬ ಮಾತು. ಅದು 'ಸಣ್ಣ ಕಂದಮ್ಮಗಳ ಕಣ್ಣೀನ ಕವಡೀಯ ತಣ್ಣನ್ನ ಜೋಮಾಲೆ'ಯನ್ನು ಹಾಗೂ ಕೂಲಿಕಾರರ ಮೈತೊಗಲನ್ನು ಸುಟ್ಟು ಪಡೆದ ಬೂದಿಯನ್ನೇ ಹಣೆಯ ಭಂಡಾರವಾಗಿ ಧರಿಸಿರುವುದನ್ನುರಿನು ಚಿತ್ರಿಸುತ್ತದೆ. ಈ ಕುರುಡು ಕಾಂಚಾಣ ಗುಡಿಯೊಳಗೆ, ಮಾಹಡಿಯೊಳಗೆ, ಅಂಗಡಿಯೊಳಗೆ ನಲಿಯುವುದನ್ನು ಹಾಗೂ ಬಡವರ ಒಡಲಿನಲ್ಲಿ ಒಂದು ಬಡ ಬಾನಲ (ಅಟ್ಟಿಸಿಕೊಂಡು ಬರುವ ಕಿಚ್ಚು) ಅಡಗಿದೆ ಎಂಬುದನ್ನು ಗುರುತಿಸಿದ್ದಾರೆ. ಈ ಕವನ ತನ್ನ ಸಂಪರ್ಕಕ್ಕೆ ಬಂದವರಲ್ಲೆಲ್ಲಾ ಹಣವಂತರ ಶೋಷಣೆಯ ಬಗ್ಗೆ ವಿಶಿಷ್ಟ ಎಚ್ಚರವನ್ನು ಮೂಡಿಸುತ್ತದೆ.

ಈ ಕವನವನ್ನು ಬೇಂದ್ರೆಯವರು 1930 ರ ಆಸುಪಾಸಿನಲ್ಲಿ ರಚಿಸಿದ್ದಾರೆ. 1930 ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಹೆಜ್ಜೆ ಗುರುತು. ಭಾರತದಲ್ಲಿ ಕುರುಡು ಕಾಂಚಾಣ ಬ್ರಿಟಿಷ್ ಸರ್ಕಾರದ ಕರ ಅಥವಾ ತೆರಿಗೆಯ ರೂಪದಲ್ಲಿ ಕೋಟ್ಯಾಂತರ ಜನರನ್ನು ಕಿತ್ತು ತಿನ್ನುತ್ತಿದ್ದಾಗ ಎದ್ದು ಬಂದ ಕರ ನಿರಾಕರಣೆ (No tax compaign) ಯ ಹೋರಾಟಗಳ ಅಲೆಯ ವರ್ಷ. ಭಾರತದಲ್ಲಿ ರೈತಾಪಿ ಜನತೆ ವಿಶಾಲ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಧುಮ್ಮಿಕ್ಕಿದ ವರುಷ. ಇದಕ್ಕೆ ಉಪ್ಪಿನ ಸತ್ಯಾಗ್ರಹ ಎಂಬ ತಪ್ಪು ಹೆಸರನ್ನು ಉದ್ದೇಶಪೂರ್ವಕವಾಗಿ ಕೊಟ್ಟಿದ್ದಾರೆ ಎಂಬ ಮಾತು ಬೇರೆ. ಕರ್ನಾಟಕದ ಧಾರವಾಡ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾವಿರಾರು ರೈತ ಮಹಿಳೆಯರು ಕಂದಾಯದ ಬಾಕಿ ವಸೂಲಿಗಾಗಿ ತಮ್ಮ ಮನೆಯ ದನ, ಎಮ್ಮೆಗಳನ್ನು, ಪಾತ್ರೆ ಪಡಗಗಳನ್ನು ಹೊತ್ತೊಯ್ಯಲು ಪ್ರಯತ್ನಿಸುತ್ತಿದ್ದ ಬ್ರಿಟಿಷ್ ಸರ್ಕಾರದ ಸಾಹೇಬರು, ಪೋಲೀಸರುಗಳಿಗೆ ಸಗಣಿ ಬಗ್ಗಡದಲ್ಲಿ ಅದ್ದಿದ ಪೊರಕೆಗಳಿಂದ ಪೂಜೆ ಮಾಡಿ ಓಡಿಸಿದ ಸಂದರ್ಭ ಅದು.

'ಕುರುಡು ಕಾಂಚಾಣ' ದ.ರಾ.ಬೇಂದ್ರೆ ಯವರ ಶಕ್ತಿಯುತವಾದ ಕವನಗಳಲ್ಲೊಂದು. ಸಮಾಜದಲ್ಲಿ ಕುರುಡು ಕಾಂಚಾಣದ ಶೋಷಣೆಯ ಭೀಕರತೆಯನ್ನು ಕಣ್ಣಿಗೆ ಕಟ್ಟುವಂತೆ ಪ್ರಭಾವಶಾಲಿಯಾಗಿ ಪಡಿಮೂಡಿಸಿದ್ದಾರೆ. ಜಾನಪದ ಕಲಾವಿದರಾದ 'ಗೊಂದಲಿಗ' ವೇಷವನ್ನು, ಅವರ ಕುಣಿತವನ್ನು ಬಳಸಿಕೊಂಡದ್ದು ಈ ಕವನ ಪರಿಣಾಮಕಾರಿಯಾಗುವಂತೆ ಮಾಡಿದೆ.



ಹೀಗೆ ರೈತ ಸಮುದಾಯ ಸಿಡಿದೆದ್ದು ನಿಲ್ಲಲು ಕಾರಣ ಅವರು ಈವರೆಗೂ ಹೇಗೆ ಹೇಗೋ ಸಲ್ಲಿಸುತ್ತಾ ಬಂದಿದ್ದ ಬ್ರಿಟಿಷ್ ಸರ್ಕಾರ ಹೇರಿದ್ದ ಕಂದಾಯವನ್ನು ಕೊಡುವುದು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿಗೆ ತಲುಪಿದ್ದು. ಅಮೇರಿಕಾದಿಂದ ಆಮದಾದ ಹತ್ತಿ, ಕೆನಡಾ, ಆಸ್ಟ್ರೇಲಿಯಾದಿಂದ ಆಮದಾಗುತ್ತಿದ್ದ ಗೋಧಿ ಇವು ಭಾರತದ ರೈತರ ಬೆಳೆಗಳ ಬೆಲೆ ಕುಸಿಯಲು ಕಾರಣವಾಯಿತು. ರೈತರು ಬದುಕುವುದೇ ಸಾಧ್ಯವಿಲ್ಲವೆಂಬ ಪರಿಸ್ಥಿತಿಯನ್ನು ತಂದೊಡ್ಡಿತು.

ಈ ಸಂಕಟವನ್ನು ಬೇಂದ್ರೆಯವರೇ 1931ರಲ್ಲಿ ಬರೆದ ಮತ್ತೊಂದು ಕವನ 'ಕೆಲಸವಿಲ್ಲದವರ ಹಾಡು' ಚಿತ್ರಿಸುತ್ತದೆ.

'ಹತ್ತಿಬಿತ್ತಿ ಬೆಳೆಕೊಂಡೆವು ಹಾಳು
ತಿನ್ನಲು ಬೆಳೆಯದು ತುಸು ಕಡಿಕಾಳು
ಬಕ್ಕರಿಸುವುದೋ ಹಂಟೆಯ ಕೂಳು
ಬತ್ತಿತು ಅನ್ನ ಹೊತ್ತಿತು ಚಿನ್ನ'
'ಅನ್ನವೆಲ್ಲವೂ ಆಯಿತು ಚಿನ್ನ
ತಿನ್ನಲಿ ಏನು ನಾ ನನ್ನನ್ನ?
ಅನ್ನ ಅನ್ನ ಅನ್ನ ಅನ್ನ

ಬೆಳೆಯಿದ್ದರೂ ಬರಗಾಲ . ಹಸಿವಿನ ಸಂಕಟದಿಂದ ಜನ ಸಾಯುವುದನ್ನು ಕಂಡು ಬೃಹತ್ ಸಂಖ್ಯೆಯಲ್ಲಿ ಒದ್ದಾಡಿ ಕುರುಡು ಕಾಂಚಾಣ ಬಣ್ಣಿಸುತ್ತದೆ.

ಕುರುಡು ಕಾಂಚಾಣಾ ಕುಣಿಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
। ಕುರುಡು ಕಾಂಚಾಣಾ।

ಬಾಣಂತಿಯೆಲುಬ ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ

ಬಡವರ ಒಡಲಿನ
ಬಡಬಾನದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ
ದುಂಬಿದಂತುಧೊ ಉಧೊ ಎನ್ನುತಲಿತ್ತೋ

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ
ಗುಡಿಯೊಳಗೆ ಗಣಣ, ಮಾ
ಹಡಿಯೊಳಗೆ ತನನ, ಅಂ
ಗಡಿಯೊಳಗ ಝಣಣಣ ನುಡಿಗೊಡುತಿತ್ತೋ

ಹ್ಯಾಂಗಾರೆ ಕುಣಕುಣದು
ಮಂಗಾಟ ನಡೆದಾಗ
ಅಂಗಾತ ಬಿತ್ತೊ, ಹೆಗಲಲಿ ಎತ್ತೋ.

- ದ.ರಾ.ಬೇಂದ್ರೆ

ಸಮಾಜದ ಅಂದಿನ ಕಟು ವಾಸ್ತವ ಒಂದು ಕಡೆ ಕರನಿಕಾರಣೆಯ ಕಾಳಗದ ಕರೆಯಾಗಿ ರೈತ ಸಮುದಾಯ, ರೈತ ಮಹಿಳೆಯರು ತಮ್ಮ ಧೀರೋದಾತ್ತ ಹೋರಾಟವೆಂಬ ಕವನಗಳನ್ನು ರಚಿಸಲು ಕಾರಣವಾದರೆ ಮತ್ತೊಂದು ಕಡೆ ಬೇಂದ್ರೆಯವರು ತಮ್ಮ ಕವನಗಳ ಮೂಲಕ ಚಳುವಳಿಯ ಭಾಗವಾಗಲು, ಬ್ರಿಟಿಷರಿಂದ ಬಂಧನಕ್ಕೊಳಗಾಗಲು ಕಾರಣವಾಯಿತು. ಈ ಕವನಗಳನ್ನು ರಚಿಸಿದ ಬೇಂದ್ರೆಯವರು 'ಅನ್ನ' ಕಾದಂಬರಿಯನ್ನು ರಚಿಸಿದ ರಂ.ಶ್ರೀ. ಮುಗಳಿಯವರು ಕರ ನಿರಾಕರಣೆ ಚಳುವಳಿಯ ಸರದಾರ ವೀರನಗೌಡರು, ರಂಗನಾಥ ದಿವಾಕರರು ಇವರೆಲ್ಲರನ್ನು ಮಿಡಿದ ಸಾಮಾಜಿಕ ವಾಸ್ತವ ಒಂದೇ.ಅವರಲ್ಲಿ ಮೂಡಿದ ಸಾಮಾಜಿಕ ಪ್ರಜ್ಞೆ ಒಂದೇ ಅದರ ಅಭಿವ್ಯಕ್ತಿಯ ರೂಪ ಮತ್ತು ಪರಿಣಾಮ ಬೇರೆ ಬೇರೆ.

ಸಮಾಜದ ಒಟ್ಟು ಪ್ರಜ್ಞೆಯ ಭಾಗವಾಗಿ ಬೇಂದ್ರೆಯವರು ಈ ವಾಸ್ತವಕ್ಕೆ ಜನರ ನೋವಿಗೆ ಸ್ಪಂದಿಸಿದರು. ಅವರು ಉಂಡ ಬಡತನದ ಬೇಗೆ ಜಾನಪದದ ಬಗೆಗಿನ ಅವರ ಅರಿವು ಮತ್ತು ಪ್ರೇಮ, ಭಾಷೆ ಮತ್ತು ಬಂಧಗಳ ಮೇಲಿನ ಹಿಡಿತ ಕನ್ನಡಿಗರಿಗೆ ಕಾಂಚಾಣದ ಬಗೆಗಿನ ತಿಳುವಳಿಕೆ ಮತ್ತಷ್ಟು ಆಳವಾಗುವಂತೆ ಮಾಡಿದವು ಎಂಬುದು ಬೇಂದ್ರೆಯವರ ವ್ಯಕ್ತಿತ್ವದ ಫಲ ಮತ್ತು ಅದು ಅವರ ವ್ಯಕ್ತಿತ್ವಕ್ಕೆ ಮೆರುಗು ನೀಡಿದೆ ಎಂಬುದನ್ನು ವಿಮರ್ಶೆ ಪರಿಗಣಿಸಬೇಕು. ಆದರೆ ಅದೇ ಸಮಯದಲ್ಲಿ 'ಹ್ಯಾಂಗಾರೆ ಕುಣಿ ಕುಣಿದು ಅಂಗಾತ ಬಿತ್ತೊ ಹೆಗಲಲಿ ಎತ್ತೊ' ಎಂಬ ಕಲ್ಪನೆ ಜನಸಮುದಾಯವನ್ನು ಮುನ್ನುಗ್ಗುವಂತೆ ಪ್ರೇರೇಪಿಸದೆ ಕಟ್ಟಿ ಹಾಕುತ್ತದೆ ಎಂಬ ಅಭಿಪ್ರಾಯ ಇಡೀ ಕವನದ ಒಟ್ಟಂದದ ಪರಿಣಾಮದಲ್ಲಿ ಗೌಣವಾಗುತ್ತದೆ.

■ **ಜಿ.ಎನ್**

ಜ್ಞಾನ - ವಿಜ್ಞಾನ

ಮಂಪರು ಪರೀಕ್ಷೆ ಎಂದರೇನು ?

ಬಹು ಕೋಟಿ ಛಾಪಾ ಕಾಗದ ಹಗರಣಯಾದಿಯಾಗಿ ಇತ್ತೀಚಿನ ಗಂಭೀರ ಅಪರಾಧ ಪ್ರಕರಣಗಳೆಲ್ಲದರಲ್ಲೂ ಮಂಪರು ಪರೀಕ್ಷೆ ಮತ್ತು ಸಂಬಂಧಿಸಿದ ಇತರೆ ಪರೀಕ್ಷೆಗಳನ್ನು ಭಾರತದಲ್ಲಿನ ಅಪರಾಧ ವಿಚಾರಣಾ ಸಂಸ್ಥೆಗಳು ವ್ಯಾಪಕವಾಗಿ ಬಳಸಲು ಯತ್ನಿಸುತ್ತಿವೆ.

ಸತ್ಯವನ್ನು ಹೊರಗೆಳೆಯಲು ಮತ್ತು ಸಾಕ್ಷಿ ಸಂಗ್ರಹಣೆಗಾಗಿ ಹಲವಾರು ವೈಜ್ಞಾನಿಕ ಪರೀಕ್ಷೆಗಳನ್ನು ಅಪರಾಧಿಗಳ ಮೇಲೆ ನಡೆಸಲಾಗುತ್ತದೆ. ಅವುಗಳಲ್ಲಿ ಇತ್ತೀಚಿನ ದಿನಗಳಲ್ಲಿ ಜನಪ್ರಿಯಗೊಂಡಿರುವ ಪರೀಕ್ಷೆಗಳೆಂದರೆ:

1) ಪಾಲಿಗ್ರಾಫ್ ಅಥವಾ ಸುಳ್ಳು ಪತ್ತೆ ಹಚ್ಚುವ ಪರೀಕ್ಷೆ:

ಆರೋಪಿಯನ್ನು ಯಂತ್ರವೊಂದಕ್ಕೆ ಕಟ್ಟಲಾಗುತ್ತದೆ. ಆ ಯಂತ್ರವು ವ್ಯಕ್ತಿಯ ರಕ್ತದೊತ್ತಡ, ನಾಡಿ ಮಿಡಿತ, ಉಸಿರಾಟ ಮತ್ತು ಸ್ನಾಯು ಚಲನೆಗಳನ್ನು ದಾಖಲಿಸುತ್ತಾ ಹೋಗುತ್ತದೆ. ಆರೋಪಿಗೆ ಹಾಕಲಾಗುವ ಪ್ರಶ್ನೆಗಳಿಗೆ ಆತನ ಪ್ರತಿಕ್ರಿಯೆಗಳನ್ನು ಅಳೆಯಲಾಗುತ್ತದೆ. ಆರೋಪಿಯು ಸುಳ್ಳು ಹೇಳಿದಾಗ ಹೆಚ್ಚಿಗೆ ಬೆವರುತ್ತಾನೆಂದು, ಅವನ ರಕ್ತದೊತ್ತಡ ಹೆಚ್ಚುತ್ತದೆಂದು ತಜ್ಞರು ಹೇಳುತ್ತಾರೆ. ಇತರೆ ಸಾಕ್ಷ್ಯಗಳೊಂದಿಗೆ ಈ ಎಲ್ಲ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಲಾಗುತ್ತದೆ. ಇದು ಮೊದಲ ಬಾರಿಗೆ ತಜ್ಞರು ಬಳಕೆಗೆ ತಂದ ವೈಜ್ಞಾನಿಕ ಪರೀಕ್ಷೆಯಾಗಿದೆ. ಇದನ್ನು ಪ್ರಕರಣದ ಆರಂಭಿಕ ಅಥವಾ ಖಚಿತಪಡಿಸಿಕೊಳ್ಳುವ ಸಲುವಾಗಿ ಮಾತ್ರವೇ ಬಳಸಲಾಗುತ್ತದೆ.

2) ಪಿ 300 ಅಥವಾ ಮಂಪರು ಪರೀಕ್ಷೆ (ಬ್ರೇನ್ ಮ್ಯಾಪಿಂಗ್):

ಆರೋಪಿಯ ತಲೆಗೆ ಸೆನ್ಸಾರುಗಳನ್ನು ಅಳವಡಿಸಿ ಕಂಪ್ಯೂಟರ್ ಮಾನಿಟರ್ ಮುಂದೆ ಅವನನ್ನು ಕೂರಿಸಲಾಗುತ್ತದೆ. ಆರೋಪಿಗೆ ಕೆಲವು ಚಿತ್ರಗಳನ್ನು ತೋರಿಸಿ ಮತ್ತೆ ಕೆಲವು ಶಬ್ದಗಳನ್ನು ಕೇಳಿಸಲಾಗುತ್ತದೆ. ಘಟನೆಗೆ ಸಂಬಂಧಿಸಿದ ಮತ್ತು ಸಂಬಂಧಿಸಿಲ್ಲದ ಪದಗಳನ್ನು ಪರದೆಯ ಮೇಲೆ ತೋರಿಸಲಾಗುತ್ತದೆ. ಈ ಸಮಯದಲ್ಲಿ ಮೆದುಳಿನಲ್ಲಿ ಉದ್ಭವಿಸುವ ವಿದ್ಯುತ್ ಚಟುವಟಿಕೆಗಳನ್ನು ಸೆನ್ಸಾರುಗಳು ಗ್ರಹಿಸಿ ಪಿ 300 ಕಂಪನಗಳನ್ನು ದಾಖಲಿಸುತ್ತವೆ. ನಿರ್ದಿಷ್ಟವಾದ ಚಿತ್ರಗಳು ಅಥವಾ ಶಬ್ದಗಳೊಂದಿಗೆ ಆರೋಪಿಗೆ ಸಂಬಂಧವಿದ್ದಲ್ಲಿ ಮಾತ್ರವೇ ಮೆದುಳಿನಲ್ಲಿ ಪಿ 300 ಕಂಪನಗಳು ಉತ್ಪತ್ತಿಯಾಗುತ್ತವೆ. ಉದಾಹರಣೆಗೆ ಛಾಪಾ ಕಾಗದ ಹಗರಣದ ಆರೋಪಿ ತೆಲಗಿಯಿಂದ ಪ್ರತಿಕ್ರಿಯೆ ಪಡೆಯಲು ತೋರಿಸಲಾದ ಕೆಲವು ವಾಕ್ಯಗಳೆಂದರೆ: 'ರೋಷನ್‌ಬೇಗ್‌ರಿಂದ ಬೆದರಿಕೆಯಿದೆ', ದಿಲೀಪ್ ಕಾಮತ್‌ಗೆ ರೂ. 75 ಲಕ್ಷ ಹಣ ನೀಡಿದ್ದೀಯಾ', ಇತ್ಯಾದಿ. ತಜ್ಞರ ನೀಡಿರುವ ಹೇಳಿಕೆಯ ಪ್ರಕಾರ ತೆಲಗಿಯು ಇದಕ್ಕೆ ಕೆಲವು ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾನಂತೆ!

3) ಸತ್ಯ ಶೋಧಕ ಔಷಧೀಯ ಪರೀಕ್ಷೆ (ನ್ಯಾರ್ಕೋ-ಅನಾಲಿಸಿಸ್):

ಈ ಪರೀಕ್ಷೆಯಲ್ಲಿ ಕೆಲವು ಗ್ರಾಂ ನಷ್ಟು ಸೋಡಿಯಂ ಪೆಂಟೋತಾಲ್ ಅಥವಾ ಸೋಡಿಯಂ ಅಮೈಟಾಲ್‌ನ್ನು ಶುದ್ಧ ನೀರಿನಲ್ಲಿ ಕರಗಿಸಲಾಗುತ್ತದೆ. ವ್ಯಕ್ತಿಯ ಲಿಂಗ, ವಯಸ್ಸು, ಆರೋಗ್ಯ ಮತ್ತು ದೈಹಿಕ ಸ್ಥಿತಿಯ ಆಧಾರದ ಮೇಲೆ ಈ ಮಿಶ್ರಣವನ್ನು ಇಂಜೆಕ್ಷನ್ ಮೂಲಕ ನೀಡಲಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಬಳಸಿದಲ್ಲಿ ವ್ಯಕ್ತಿಯು ಪ್ರಜ್ಞಾಹೀನತೆಗೊಳ್ಳಬಹುದು ಅಥವಾ ಸಾವಿನ ಹಂತವನ್ನು ಮುಟ್ಟಬಹುದು. ಔಷಧವು ಕೇಂದ್ರೀಯ ನರ ವ್ಯವಸ್ಥೆಯನ್ನು ತನ್ನ ನಿಯಂತ್ರಣಕ್ಕೆ ತಂದು ರಕ್ತದೊತ್ತಡವನ್ನು ಕಡಿಮೆಗೊಳಿಸುತ್ತದೆ, ಹೃದಯ ಬಡಿತವನ್ನು ನಿಧಾನಗೊಳಿಸುತ್ತದೆ ಮತ್ತು ವ್ಯಕ್ತಿಯನ್ನು ವಶೀಕರಣ ಹಂತಕ್ಕೊಯ್ಯುತ್ತದೆ. ಈ ಹಂತದಲ್ಲಿ ವ್ಯಕ್ತಿಯನ್ನು ಅರೆ-ಪ್ರಜ್ಞಾವಸ್ಥೆಗೆ ತರುವ ಮೂಲಕ ಅವನ ಕಲ್ಪನೆಯನ್ನು ತಟಸ್ಥಗೊಳಿಸಲಾಗುತ್ತದೆ. ಅರೆ-ಪ್ರಜ್ಞಾವಸ್ಥೆಯಲ್ಲಿರುವ ಅವನು ತನ್ನ ಕಲ್ಪನಾ ಶಕ್ತಿಯನ್ನು ಬಳಸಿಕೊಳ್ಳಲು ಅಶಕ್ತನಾಗುವುದರಿಂದ ಸುಳ್ಳು ಹೇಳಲು ಸಾಧ್ಯವಾಗುವುದಿಲ್ಲವೆಂದು ತಜ್ಞರ ಅಂಬೋಣ!

ಸತ್ಯ ಶೋಧಕ ಔಷಧೀಯ ಪರೀಕ್ಷೆಯನ್ನು ಬಳಸಲು ನ್ಯಾಯಾಲಯ ಮತ್ತು ಸಂಬಂಧಿಸಿದ ವ್ಯಕ್ತಿಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಈ ಪರೀಕ್ಷೆಯನ್ನು ವಿಚಾರಣೆಗೆ ಪೂರಕವಾಗಿ ಬಳಸಿಕೊಳ್ಳಬಹುದೇ ಹೊರತು ನ್ಯಾಯಾಲಯದಲ್ಲಿ ಯಾವುದೇ ಸಾಕ್ಷ್ಯದ ಮೌಲ್ಯವನ್ನು ಈ ಪರೀಕ್ಷೆಗೆ ನೀಡಲಾಗುವುದಿಲ್ಲ. ಈ ಪರೀಕ್ಷಾ ವಿಧಾನದ ವಿಶ್ವಾಸಾರ್ಹತೆಯನ್ನೇ ಹಲವು ತಜ್ಞರು ಪ್ರಶ್ನಿಸುತ್ತಾರೆ. ಇದನ್ನು ಅವೈಜ್ಞಾನಿಕವೆಂದು, ಮೂರನೇ ದರ್ಜೆಯ ವಿಚಾರಣಾ ವಿಧಾನವೆಂದು ಟೀಕಿಸಲಾಗುತ್ತದೆ. ವ್ಯಕ್ತಿಯು ಕೆಲವೊಮ್ಮೆ ತಾನು ಯಾವುದೋ ಘಟನೆಯು ಜರುಗಬೇಕೆಂದು ಬಯಸಿದ್ದಾಗ ವಾಸ್ತವವಾಗಿ ಅದು ಜರುಗಿಲ್ಲದಿದ್ದರೂ ಅದು ಜರುಗಿದ್ದಿತೆಂದು ಹೇಳುವ ಸಾಧ್ಯತೆಯೂ ಇದೆ. ಇಂಥಹ ಸಂಖ್ಯೆಯೇ ಶೇ. 50 ರಷ್ಟಿದೆಯೆಂದು ಮನೋವಿಜ್ಞಾನಿಗಳು ಹೇಳುತ್ತಾರೆ. ನ್ಯಾಯಾಲಯಗಳು ಕೆಲವೊಮ್ಮೆ ಇಂಥಹ ಪರೀಕ್ಷೆಗಳು ವ್ಯಕ್ತಿಯೊಬ್ಬನ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳುವುದಿಲ್ಲವೆಂದು ಹೇಳುತ್ತವಾದರೂ ಸಂವಿಧಾನದ 20(3)ಯು ಈ ಖಾತರಿ ನೀಡುತ್ತದೆ:- 'ಯಾವುದೇ ಆರೋಪಕ್ಕೊಳಗಾದ ಯಾವೊಂದು ವ್ಯಕ್ತಿಯನ್ನು ತನ್ನ ವಿರುದ್ಧ ತಾನೇ ಸಾಕ್ಷಿ ಹೇಳುವಂತೆ ಮಾಡಬಾರದು'.

ದೇಶದ ಗಂಭೀರ ಅಪರಾಧ ಪ್ರಕರಣಗಳೆಲ್ಲವನ್ನು ಬೆಂಗಳೂರಿನ ಅಪರಾಧ ಶೋಧನಾ ವಿಜ್ಞಾನದ ಪ್ರಯೋಗಾಲಯಕ್ಕೆ ರವಾನಿಸಲಾಗುತ್ತಿದೆ. ಭಾರತದ ವೈಜ್ಞಾನಿಕ ನೆಲೆಯೆಂದೇ ಹೆಸರುಗಿಟ್ಟಿಸಿರುವ ಬೆಂಗಳೂರು, ವೈಜ್ಞಾನಿಕ ಸಾಧನಗಳನ್ನು ಬಳಸಿಕೊಂಡು ಯಾವುದೇ ಅಪರಾಧ ಅಥವಾ ಪ್ರಕರಣಗಳನ್ನು ಪತ್ತೆ ಹಚ್ಚಿ ಬಗೆಹರಿಸುತ್ತದೆಂಬ ತಪ್ಪು ಕಲ್ಪನೆಯು ಇದ್ದಂತಿದೆ. ಅಮೇರಿಕಾವು ಅಧಿಕೃತವಾಗಿ ಈ ಪರೀಕ್ಷೆಯನ್ನು ಬಳಸುವುದಿಲ್ಲವಾದರೂ ಯುದ್ಧ ಖೈದಿಗಳ ವಿರುದ್ಧ ಹಾಗೂ ತನ್ನ ನೀತಿ ಒಪ್ಪದ ತನ್ನದೇ ಜನರ ವಿರುದ್ಧ ರಹಸ್ಯವಾಗಿ ಈ ಪರೀಕ್ಷೆಯೂ ಸೇರಿದಂತೆ ಹತ್ತಲವು ಅಪಾಯಕಾರಿ ಪರೀಕ್ಷೆಗಳನ್ನು ಅದು ನಡೆಸುತ್ತದೆ. 'ಸತ್ಯ ಶೋಧಕ ಔಷಧೀಯ ಪರೀಕ್ಷೆಯು ವಿಶ್ವಾಸಾರ್ಹ ವಿಜ್ಞಾನವೇನೂ ಅಲ್ಲವೆಂದು ಅಂತರಾಷ್ಟ್ರೀಯ ಮಟ್ಟದ ತಜ್ಞರು ಮತ್ತು ನ್ಯಾಯಾಲಯಗಳ ಅಭಿಪ್ರಾಯಗಳು ಹೇಳುತ್ತವೆ.

ವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವಚ್ಛ ನ್ಯಾಯಾಲಯ ವ್ಯವಸ್ಥೆಗೆ ಬದ್ಧವಾಗಿರಬೇಕಾದರೆ, ಕೇಂದ್ರ ಸರ್ಕಾರವು ಇಂಥಹ ವೈಜ್ಞಾನಿಕ ಪರೀಕ್ಷೆಗಳನ್ನು ಕುರಿತಂತೆ ಸ್ಪಷ್ಟ ನೀತಿಯನ್ನು ಹೊರತರಬೇಕಾಗಿದೆ.

■ **ಜಯ**



ಮತ್ತೆ ಚೆಲ್ಲಿದ ರಕ್ತ ಬೀಳೋ ಹೆಣಕ್ಕೆ ಲೆಕ್ಕ ಇಲ್ಲ!



'ಮುಂಗಾರು ಮಳೆ' ಯ ಅರ್ಭಟ ಇನ್ನೂ ನಿಲ್ಲದೆ, ಕನ್ನಡಿಗರು ಮಾತ್ರವಲ್ಲದೆ ಇತರರೂ 'ಮಳೆ'ಯಲ್ಲಿ ತೋಯ್ದು ತೊಪ್ಪೆಯಾಗಿರುವಾಗಲೇ ಶಿವರಾಜ ಕುಮಾರ್ ಮತ್ತೊಮ್ಮೆ ಕತ್ತಿ ಝಳಪಿಸಿದ್ದಾರೆ. 'ಜೋಗಿ'ಯ ರುಂಡ ಚೆಂಡಾಟವೇ ಸಾಕಾಗಿತ್ತು - 'ಲಾಂಗ್ ಇಟ್ಟ ಮೇಲೆ ಹೆಗಲ ಮೇಲೆ ತಲೆ ಇರೋ ಸ್ಟೋರಿನೇ ಇಲ್ಲ' ಅನ್ನೋ 'ಸಂತ' ನೆಲಕ್ಕೆ ಕೆಡವೋ ಬಾಡಿಗಳ ಲೆಕ್ಕ ಇಡಕ್ಕೋ ಸಾಧ್ಯನೇ ಇಲ್ಲ!

ಇದು 'ಜೋಗಿ'ಯ ಮುಂದುವರಿದ ಎರಡನೇ ಭಾಗವಲ್ಲ - ಅದರ ನೆರಳೇ 'ಸಂತ'. ಅದೇ ಕಥೆ, ಅದೇ ಸೆಂಟಿಮೆಂಟ್. ಹಳ್ಳಿಯ ಮುಗ್ಧ ಹೈದ ಸಂತೋಷ ಅಲಿಯಾಸ್ ಸಂತ. ಬಡತನ, ಬುದ್ಧಿಮಾಂದ್ಯ ಇಬ್ಬರು ತಂಗಿ ಮತ್ತು ತಾಯಿ ಸಂತನ ಆಸ್ತಿ. ತಂಗಿಯರಿಗೆ ಚಿಕಿತ್ಸೆ ಕೊಡಿಸಲು ದುಡ್ಡಿನ ಸಂಪಾದನೆಗಾಗಿ ಬೆಂಗಳೂರಿಗೆ ಬರುತ್ತಾನೆ - ಮತ್ತೆ ಭೂಗತ ಲೋಕಕ್ಕೆ ಎಂಟ್ರಿಯಾಗಲು ನೆಪಗಳಿಗೆ ಕೊರತೆಯಿಲ್ಲ. ನಿಯತ್ತಿನ ಬದುಕಿಗೆ ಕಲ್ಲು ಹಾಕುವ ರೌಡಿಗಳು, ವಿನಾ ಕಾರಣ ಭೂಗತ ಲೋಕಕ್ಕೆ ದೂಡುವ ಪೋಲೀಸರು - ಭವ್ಯ ಭವಿಷತ್ತಿನ ಕನಸು ಮಣ್ಣು ಪಾಲಾದಾಗ ಕೈಗೆ ಲಾಂಗು - ಆ ಲಾಂಗಿಗೂ ಒಂದು ಮರ್ಯಾದೆ ಏಕೆಂದರೆ ಅದು ಶಿವಣ್ಣನ ಕೈಲಿದೆ! ಲಾಂಗ್ ಹಿಡಿಯೋಕ್ಕೆ ಒಂದು ಗ್ರಿಪ್ ಇರಬೇಕು, ಅದನ್ನು ಹೇಗೆ ಹಿಡಿಯೋದು ಅಂತ ಹೇಳಿಕೊಟ್ಟೋನೇ ಈ 'ಸಂತ' ಅಲಿಯಾಸ್ ಶಿವರಾಜಕುಮಾರ್! ಪಡ್ಡೆ ಅಭಿಮಾನಿಗಳಿಗೆ ಅಷ್ಟೇ ಸಾಕಲ್ಲ - ಥ್ರಿಲ್, ರೋಮಾಂಚನ !


ಸದಭಿರುಚಿಯ ಕೆಲವು ಚಿತ್ರಗಳು ಯಶಸ್ಸು ಕಾಣುತ್ತಿರುವ ಹಿನ್ನೆಲೆಯಲ್ಲಿ ಚಿತ್ರೋದ್ಯಮದ ಕೆಲವರು 'ಲಾಂಗು - ಮಚ್ಚು'ಗಳ ಹಾವಳಿಗೆ ಕೊನೆಹಾಡಬೇಕೆಂದು ಮನಸ್ಸು ಮಾಡಿರುವಾಗಲೇ ಯುವಜನತೆಯನ್ನು ಉನ್ಮಾದಗೊಳಿಸುವಂತಹ, ಹಾದಿ ತಪ್ಪಿಸುವಂತಹ, ರೌಡಿಸಂ ಅನ್ನು ವಿಜೃಂಭಿಸುವಂತಹ ಕೆಲಸಕ್ಕೆ ಟೊಂಕಕಟ್ಟಿ ನಿಂತಿರುವ ಇಂತಹವರಿಗೆ ಬುದ್ಧಿ ಕಲಿಸುವರ್ಯಾರು?

ಶಿವಣ್ಣನ ಹಾವ ಭಾವ, ಮ್ಯಾನರಿಸಂಗಳು ನೋಡುಗರನ್ನು ಉನ್ಮತ್ತಗೊಳಿಸುತ್ತವೆ - ಕೇಕೆ ಹಾಕಿ ಚೀರುವ ಹುಡುಗರನ್ನು ನೋಡುತ್ತಿದ್ದರೆ ಆತಂಕವಾಗುತ್ತದೆ. ಹಾದಿ ತಪ್ಪಿದ ಹುಡುಗರಿಗೆ 'ಸಂತ' ಸ್ಪೂರ್ತಿಯಾದಲ್ಲಿ ಆಶ್ಚರ್ಯವೇನಿಲ್ಲ! ರಿಮೇಕ್ ಚಿತ್ರಗಳಲ್ಲಿ ಅಭಿನಯಿಸುವುದಿಲ್ಲ ಎಂದು ದೃಢ ನಿರ್ಧಾರಕ್ಕೆ ಬಂದ ಶಿವರಾಜಕುಮಾರ್‌ಗೆ ಇಂತಹ ಚಿತ್ರಗಳು ಬೇಕೆ? ಇದರಿಂದಾಗುವ ಅನಾಹುತಗಳ ಬಗ್ಗೆ ಅವರಿಗೆ ಅರಿವಿಲ್ಲವೇ?

ಅಂತಿಮವಾಗಿ ರೌಡಿಸಂನಲ್ಲಿ ಉಳಿಗಾಲವಿಲ್ಲವೆಂಬುದನ್ನು ಕೊನೆ ಐದು ನಿಮಿಷದಲ್ಲಿ ಭಾಷಣ ಬಿಗಿಯುತ್ತಿದ್ದರೆ ಮುಕ್ಕಾಲು ಪಾಲು ಜನ ಥಿಯೇಟರ್‌ನಿಂದ ಆಚೆ ಬಂದಿರುತ್ತಾರೆ - ಇನ್ನೂ ಈ ಸಂದೇಶ ಯಾರಿಗಾಗಿ?

ಚಿತ್ರದಲ್ಲಿ ರೌಡಿಗಳ ಪರಿವರ್ತನೆ ಮಾಡುವ ಪೋಲೀಸ್ ಅಧಿಕಾರಿಯಾಗಿ ಮಾಜಿ ಪೋಲೀಸ್ ಅಧಿಕಾರಿ ಸಾಂಗ್ಲಿಯಾನರದ್ದು ಒಂದು ಪಾತ್ರವಿದೆ. ಅವರ 'ಸುದ್ದ' ಕನ್ನಡ ಕೇಳಲು ಕಿರಿಕಿರಿಯಾಗುತ್ತದೆ. ಚಿತ್ರದಲ್ಲಿ ಇತರರೂ ಇದ್ದಾರೆ ಆದರೆ ಅವರೆಲ್ಲಾ ಗೌಣ - ತೆರೆಯ ತುಂಬಾ ವಿಜೃಂಭಿಸುವುದು ಮಾತ್ರ ಶಿವಣ್ಣ.

ಇನ್ನು ಚಿತ್ರದ ನಿರ್ದೇಶಕರು - ನಿರ್ಮಾಪಕರು ಯಾರು ಏನು ಎಂದು ತಿಳಿದುಕೊಳ್ಳುವ ಅಗತ್ಯವೇನಿಲ್ಲ. ಏಕೆಂದರೆ ಅಂಥಹ ಘನಂದಾರಿ ಕೆಲಸವನ್ನೇನೂ ಇವರು ಮಾಡಿಲ್ಲ! ಇಂತಹ ಚಿತ್ರಗಳನ್ನು ತಿರಸ್ಕರಿಸಿ ಎಂದು ಯಾರು ಹೇಳಿದರೂ, ಇಂತಹ ಚಿತ್ರಗಳನ್ನು ಮುಗಿಬಿದ್ದು ನೋಡುವ ಒಂದು ವರ್ಗವೇ ಇದೆ - ಹಾಗಾಗಿ ಶಿವರಾಜ್ ಕುಮಾರ್‌ರಂತಹ ಚಿತ್ರರಂಗದಲ್ಲಿ ಗೌರವವಿರುವ ಹಿರಿಯ ನಟರು ಮತ್ತು ಇಂತಹ ಚಿತ್ರಗಳನ್ನು ಬೆಂಬಲಿಸುವಂತಹ ಮಹಾಪ್ರಭುಗಳು ಸ್ವವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯವಿದೆ.



'ಕರ್ವಾಲೋ' ತೆರೆದಿಡುವ ವಿಸ್ಮಯ ಲೋಕ

ಮೊದಲು 1980ರಲ್ಲಿ ಪ್ರಕಟಗೊಂಡು 2006ರೊಳಗೆ ಇಪ್ಪತ್ತೆರಡನೆಯ ಮುದ್ರಣವನ್ನು ಕಂಡ ಕನ್ನಡದ ಒಂದು ವಿಭಿನ್ನ ಖ್ಯಾತ ಕಾದಂಬರಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ'.

ಪ್ರಕೃತಿ, ಜೀವ ಜಗತ್ತಿನ ಕುರಿತ ಕುತೂಹಲ, ವಿಸ್ಮಯ ಈ ಕಾದಂಬರಿಯ ಮುಖ್ಯ ಎಳೆ. ಪ್ರಕೃತಿಯ, ಕಾಡಿನ ಪಕ್ಷಿ- ಕೀಟಲೋಕದ ಹಾಗೂ ಜೀವ ವಿಕಾಸದ ಕುರಿತ ಅನೇಕ ವಿಸ್ಮಯಕಾರಿ ವಿಚಾರಗಳನ್ನು ಓದುಗರಿಗೆ ಕಾದಂಬರಿ ತೆರೆಯುತ್ತಾ ಹೋಗುತ್ತದೆ. ಬೇರೆ ಯಾರದ್ದಾದರೂ ಕೈಯಲ್ಲಿ ಜೀವಶಾಸ್ತ್ರದ ಉಪನ್ಯಾಸದಂತೆ, ಇಲ್ಲವೆ ಪಠ್ಯ ಪುಸ್ತಕದಂತೆ, ವಿಜ್ಞಾನದ ಮಾಹಿತಿಗಳ ಒಣ ಕಂತೆಯಾಗಬಹುದಾದ ವಸ್ತುವನ್ನು ಯಾರಿಗಾದರೂ ಸರಳವಾಗಿ ಅರ್ಥವಾಗಬಹುದಾದ, ಅತ್ಯಂತ ಆಕರ್ಷಕವಾದ, ರೋಚಕ ಕತೆಯಾಗಿ ಹೆಣೆದು ಕೊಡುವುದು ಈ ಕಾದಂಬರಿಯ ವಿಶಿಷ್ಟತೆಗಳಲ್ಲಿ ಒಂದು. ಮೂಡಿಗೆರೆಯಿಂದ ಹೊರಟು ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿ ಮಹಾ ಮಲೆಕಾಡಿನಲ್ಲಿ ಮೂರರ ಹಿಂದೆ ಏಳು ಸೊನ್ನೆಗಳನ್ನು ಹಾಕಿದರೆ ಆಗಬಹುದಾದಷ್ಟು ವರ್ಷಗಳ ಹಿಂದಿನ ಹಾರುವ ಓತಿಯನ್ನು ಹಿಡಿಯಲು, ಕೀಟ ಶಾಸ್ತ್ರಜ್ಞ ವಿಜ್ಞಾನಿ ಕರ್ವಾಲೋ, ಲೇಖಕರು, ಮಂದಣ್ಣ, ಕರಿಯಪ್ಪ, ಪ್ರಭಾಕರ ಮುಂತಾದವರು ಪಡುವ ಪ್ರಯತ್ನವೇ ಕಾದಂಬರಿಯ ಕ್ಲೈಮಾಕ್ಸ್. ಜೇನು ಹುಳುಗಳು, ಸಾಕು ನಾಯಿ ಕಿವಿಯೂ ಕಾದಂಬರಿಯ ಪ್ರಮುಖ ಪಾತ್ರಗಳೇ ಆಗಿವೆ.

ಅದು ಇತ್ತ ಓತಿಯೂ ಅಲ್ಲದ ಅತ್ತ ಪಕ್ಷಿಯೂ ಅಲ್ಲದ ಇವೆರಡರಕ್ಕಿಂತ ಭಿನ್ನವಾದ ಜೀವಿ. ಅದು ಹಾರಬಲ್ಲುದು, ಆದರೆ ಹಕ್ಕಿಯಂತಲ್ಲ. ಓತಿಯಂತೆ ಮರವನ್ನೇರಿ ಎತ್ತರದ ಸ್ಥಳದಿಂದ ಮತ್ತೊಂದು ಮರಕ್ಕೆ ಅಥವಾ ಬೇರೊಂದು ಸ್ಥಳಕ್ಕೆ ತೇಲುತ್ತಾ ಇಳಿಯಬಲ್ಲದು. ಹಾರುವಾಗ ತನ್ನ ಪಕ್ಕೆಲುಬಿನ ನಡುವಿನ ಬೆಳ್ಳನೆಯ ಪೊರೆಯಂತಹ ರೆಕ್ಕೆಯನ್ನು ಬಳಸುತ್ತದೆ. ಇಂತಹ ಕಾರಣಕ್ಕಾಗಿ ಇದೊಂದು ಅಪೂರ್ವ ಜೀವಿ. ಜಗತ್ತಿನಾದ್ಯಂತ ಅದಕ್ಕಾಗಿ ಹುಡುಕಾಟ. ಅದು ಸಿಕ್ಕರೆ ಜೀವ ವಿಕಾಸದ ಕುರಿತು ಏನೇನೋ ಮಹತ್ವದ ಸುಳಿವು ಸಿಗಬಹುದೆಂಬ ನಿರೀಕ್ಷೆ. ಇದು ಜೀವ ವಿಕಾಸದ ವಿಷಯದಲ್ಲಿ 'ಯುಗ ಯುಗಾಂತರ ಹಿಂದಿನ ಕಾಣಿಕೆ' ಯಾಗಬಹುದೇನೋ ಎಂಬ ಆಸೆ.



ಈ ಓತಿಯ ಹುಡುಕಾಟದ ಎಳೆಯ ಸುತ್ತ ಕಾದಂಬರಿ ಹೆಣೆದುಕೊಂಡಿದೆ. ಅನೇಕ ಕಾಡಿನ ಕೌತುಕಗಳು, ಬಾಲದಲ್ಲಿ ದೀಪ ಹೊತ್ತಿಸುವ ಹುಳು, ರಾತ್ರಿ ಬೆಳಕು ಬೀರುವ ಅಣಬೆ, ಮರ ಹತ್ತುವ ಎರೆಹುಳು, ಗೂಡಿನೊಳಗೆ ಇಟ್ಟ ಮೊಟ್ಟೆ ಮರಿಗಳಾಗುವವರೆಗೆ ತನ್ನನ್ನೇ ಗೂಡೊಳಗೆ ಬಂಧಿಸಿಕೊಳ್ಳುವ ಜಾಗಟೆ ಹಕ್ಕಿ, ಗಿಡವೊಂದರ ತುಂಡು ಕಡ್ಡಿಯಂತೆಯೇ ಕಾಣುವ ಕಡ್ಡಿ ಹುಳುವಿನ ವಿಸ್ಮಯ, ಮುಂತಾದ ಹತ್ತಾರು ವಿವರಗಳು ಬಿಚ್ಚಿಕೊಳ್ಳುತ್ತ ಜೀವ ವಿಕಾಸದ ಪ್ರಶ್ನೆಯಲ್ಲಿ 'ನಮ್ಮನ್ನು ಕಾಲದ ಪ್ರವಾಹದಲ್ಲಿ ಕಾಲಗತಿಯ ವಿರುದ್ಧ ದೋಣಿ ನಡೆಸುತ್ತಾ ಮಿಲಿಯಾಂತರ ವರುಷ ಹಿಂದಕ್ಕೆ ಹೊರಟಂತಹ' ಅನುಭವವನ್ನು ಕಾದಂಬರಿ ನಮಗೆ ನೀಡುತ್ತದೆ. 'ಹುಳೂಹುಪ್ಪಟೆ ಹಿಡಿಯುತ್ತ' ಕಾಡು ಮೇಡು ಅಲೆಯುವ ಮಂದಣ್ಣ ಕಾದಂಬರಿಯ ಒಂದು ಪ್ರಧಾನ ಪಾತ್ರ. ಕೀಟ ವಿಜ್ಞಾನಿ ಕರ್ವಾಲೋ ಪ್ರಕಾರ ಈತ ಒಬ್ಬ ಪರಮಾದ್ಭುತ ಪ್ರಕೃತಿ ಶಾಸ್ತ್ರಜ್ಞ.

ಮಂದಣ್ಣ ಹೆಚ್ಚೇನು ಓದಿದವನಲ್ಲ. ವಿಜ್ಞಾನ ಕಲಿತವನಲ್ಲ. ತನ್ನ ಸುತ್ತಮುತ್ತಲ ಪರಿಸರವನ್ನು ಗ್ರಹಿಸುವುದು ಅವನ ಸಹಜ ಸಾಮರ್ಥ್ಯ. ಕಲಿತ -ವಿಜ್ಞಾನಿ ಎನಿಸಿಕೊಂಡ ಕರ್ವಾಲೋ ಜೀವಶಾಸ್ತ್ರದ ವಿಚಾರವಾಗಿ ಮಂದಣ್ಣನಿಂದ ಎಷ್ಟೋ ವಿಚಾರವನ್ನು ತಿಳಿದುಕೊಳ್ಳುತ್ತಾರೆ, ಕಲಿಯುತ್ತಾರೆ. ಪ್ರತಿಭೆ, ಸಾಮರ್ಥ್ಯ, ಜ್ಞಾನ ಕೇವಲ ಶಿಷ್ಟ ಸಮಾಜವಾದ ಸ್ವತ್ತಲ್ಲ. ನಮ್ಮ ಗ್ರಾಮೀಣ, ಜನಪದರಲ್ಲಿ ಇವೆಲ್ಲಾ ಇರಲು ಸಾಧ್ಯ ಎಂಬುದು ಕಾದಂಬರಿಯ ಮತ್ತೊಂದು ಸಮರ್ಥ ಧ್ವನಿ.

ಮಂದಣ್ಣನ ಮದುವೆ ಪುರಾಣ, ಆತ ಕಳ್ಳ ಭಟ್ಟಿ ಕೇಸಿನಲ್ಲಿ ಸಿಕ್ಕಿಕೊಳ್ಳುವುದು, ಬಿರಿಯಾನಿ ಕರಿಯಪ್ಪನ ಗರ್ಮಿಸಾಮಾನಿನ ಸಮಾಚಾರ, ಪ್ಯಾರ, ಸಾರ್ವೆ ರಾಮಯ್ಯ ಹಲವು ಮುಂತಾದ ದೈನಂದಿನ ಜೀವನದ ಜಂಜಾಟಗಳಾಗಿ ಕಾದಂಬರಿಯಲ್ಲಿ ಸಹಜವಾಗಿ ಮೂಡಿ ಬಂದಿವೆ. ಇವೆಲ್ಲವುಗಳ ನಡುವೆಯೇ ಸೃಷ್ಟಿ ವಿಜ್ಞಾನದ ಕುರಿತ ಕುತೂಹಲದ ತಂತುವೊಂದು ಸದಾ ಜಾಗೃತವಾಗಿರುತ್ತದೆ.

ಹಾರುವ ಓತಿಯನ್ನು ಹಿಡಿಯಲು ಅದರ ಬೆನ್ನು ಬಿದ್ದ ತಂಡ ಅದನ್ನು ಬೆನ್ನಟ್ಟುತ್ತಾ ಬೆನ್ನಟ್ಟುತ್ತಾ ಮುಂದೆ ಸಹಸ್ರಾರು ಅಡಿ ಪ್ರಪಾತವುಳ್ಳ ಸಹ್ಯಾದ್ರಿ ಪರ್ವತ ಶ್ರೇಣಿಯ ಅಂಚಿನ ಕಡಿದಾದ ಬೆಟ್ಟದ ಕೋಡುಗಲ್ಲನ್ನು ತಲುಪುತ್ತದೆ.

'ಓಡುವ ಓತಿಗೆ ಕಾಲವೇ ಕೊನೆಗೊಂಡಂತೆ ಎದುರಿಗೆ ವಿಶಾಲ ಶೂನ್ಯ'. ಎಲ್ಲರೂ ಇನ್ನೇನು ಓತಿ ಸಿಕ್ಕಿಬಿಟ್ಟಿತು ಎಂದು ಕೊಳ್ಳುತ್ತಾರೆ. ಆದರೆ ಓತಿ ಆ ಉನ್ನತ ಪರ್ವತದ ಎತ್ತರದಿಂದಲೂ ಜಿಗಿದು ದೂರ ಹಾರಿಹೋಗುತ್ತದೆ. 'ಹಾರೋ ಪ್ರಯತ್ನದಲ್ಲಿ ಅದು ತಪ್ಪುದಾರಿ ಹಿಡೀತು ಅಂತ ಕಾಣುತ್ತೆ. ಕೈಗಳ ಬದಲು ಪಕ್ಕೆ ಉಪಯೋಗಿಸಿತು ಸಾರ್. ಅದಕ್ಕೆ ಅದು ಹಾಗೆ ಉಳೀತು. ಮಿಕ್ಕವು ರೆಕ್ಕೆ ಪುಕ್ಕ ಬೆಳೆಸಿಕೊಂಡು ಹಕ್ಕಿಯಾಗಿ ಬಿಟ್ಟವು' ಎನ್ನುತ್ತಾರೆ ತೇಜಸ್ವಿ.

'ತಪ್ಪು ಸರಿ ಹೇಗೆ ಹೇಳ್ತಿರಿ, ನಮಗೆ ಈ ಕ್ಷಣ, ಇಲ್ಲಿ ಹೀಗನ್ನಿಸಿದೆ. ಜೀವ ವಿಕಾಸಕ್ಕೆ ಎಲ್ಲಿದೆ ಕೊನೆ' ಎನ್ನುತ್ತಾರೆ ಕರ್ವಾಲೋ.

'ಯಾವ ಅಂತಿಮ ಉದ್ದೇಶವೂ ಇಲ್ಲದ ವಿಕಾಸ'ದ ಅನಂತ ಸಾಧ್ಯತೆಗಳ ಒಂದು ಹೊಳಹು ಆ ಕ್ಷಣ ಮನದಲ್ಲಿ ಮಿಂಚುತ್ತದೆ. ಅದೇ ಕಾದಂಬರಿಯ ಯಶಸ್ಸು.



ತೇಜಸ್ವಿಯವರು ತಮ್ಮ ಹಲವು ಕೃತಿಗಳಲ್ಲಿ ಪ್ರಕೃತಿಯು ನಿಗೂಢ, ಅಗಮ್ಯ (ತಲುಪಲಾಗದ್ದು) ಅನೂಹ್ಯ (ಊಹಿಸಲಾಗದ್ದು) ಎಂಬ ಅರ್ಥ ಹೊರಡಿಸುತ್ತಾರೆ. ಆದರೆ ಹಾರುವ ಓತಿ ಕೈಗೆ ಸಿಗಲಾರದೇ ಹೋದದ್ದು ಈ ಅರ್ಥದಲ್ಲಿ ಅಲ್ಲದೇ ಇರಬಹುದು. ಹಾರುವ ಓತಿಯು ಕೈಗೆ ಸಿಗದಿರುವುದರಿಂದ ಇಲ್ಲಿ ಯಾರೂ ನಿರಾಶರಾಗುವುದಿಲ್ಲ. ಆದರೂ ಯಾಕೋ ಕಾದಂಬರಿಯನ್ನು ಮತ್ತೊಮ್ಮೆ ಓದಿದಾಗ ಕೆಲ ವರ್ಷಗಳ ಹಿಂದೆ ಹಾರುವ ಓತಿ ಸಿಕ್ಕಿದ ಬಗ್ಗೆ ಚಿತ್ರ ಸಹಿತ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ನೆನಪಾಯಿತು.

JANASHAKTHI KANNADA VARA PATRIKE : Printed by G.N.NAGARAJ, No 17, 18th Cross, S.R.Nagar, BANGALORE-560027. Published by G.N.NAGARAJ, No 17, 18th Cross, S.R.Nagar, BANGALORE-560027, Karnataka on behalf of (owned by) COMMUNIST PARTY OF INDIA (MARXIST) and Printed at : Kriya Prakashana, 12, 16th Cross, S.R.Nagar, BANGALORE - 560027 Karnataka (State) and Published at No 12, 18th Cross, S.R.Nagar, BANGALORE-560027 Editor S.Y.GURUSHANTH, No12, 18th Cross, S.R.Nagar, BANGALORE - 560027 Editor : S.Y.GURUSHANTH